ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 19

ಮೇ 11, 2008

ಕನ್ನಡ ವಾರಪತ್ರಿಕೆ

ರೂ. 5/-

ಬಿಜೆಪಿ ಪ್ರಣಾಳಿಕೆ : ನಯವಂಚಕ, ಶ್ರೀಮಂತರ ಪರ, ಮುಚ್ಚಿಟ್ಟ ಕೋಮುವಾದಿ ಕಾರ್ಯಸೂಚಿ




ಸ್ಥಿರ ಸರ್ಕಾರ ಯಾರಿಗಾಗಿ?



ಏನಿದು ಗುಜರಾತ್ ಮಾದರಿ?

ಕೋಲಾರ: ಜಾತ್ಯತೀತ ಶಕ್ತಿಗಳದ್ದೇ ಮೇಲುಗೈ ಬೇರಿಳಿಸಲು ಬಿಜೆಪಿ ಯತ್ನ



ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆ ಪ್ರತಿಗಾಮಿಗಳ ಮಹಾಜೋತ್



ಮೇ ದಿನ : ಜಗದಗಲ ಗರಿಗೆದರಿದ ಕೆಂಬಾವುಟ

ಇದ್ದದ್ದು ಇದ್ದಾಂಗ....

ಹುಂಡಿ ದೋಚಿದ್ದರು

ಆಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವ ಮಂತ್ರ ಜಪಿಸುತ್ತಿರುವ ಬಿಜೆಪಿ ಹಾಗೂ ಆರ್.ಎಸ್.ಎಸ್.ನವರು ಆಯೋಧ್ಯೆಯಲ್ಲಿ ರಾಮಮಂದಿರ ಧ್ವಂಸ ಮಾಡಿ ಅಲ್ಲಿದ್ದ ದೇವರ ಹುಂಡಿಯನ್ನು ದೋಚಿದ್ದರು. ಆಯೋಧ್ಯೆಯಲ್ಲಿನ ರಾಮಮಂದಿರದಲ್ಲಿದ್ದ ಮೂಲ ರಾಮನ ಮೂರ್ತಿ ಕಾಪಾಡಿದ್ದ ಬಾಬು ಲಾಲ್‌ದಾಸ್ ಅವರನ್ನು ಕೊಲೆ ಮಾಡಿದ್ದೆ ಬಿಜೆಪಿ ಹಾಗೂ ಆರ್.ಎಸ್.ಎಸ್.ನವರು

ವೀರಪ್ಪ ಮೊಯ್ಲಿ
ಕಾಂಗ್ರೆಸ್ ಮುಖಂಡರು

ಒಂದು ಕೋಟಿ ಹಾಗೂ ಎಂಎಲ್‌ಸಿ ಸ್ಥಾನ

ಸ್ಪರ್ಧೆಯಿಂದ ಹಿಂದೆ ಸರಿಯಲು ನಾಮಪತ್ರ ಸಲ್ಲಿಕೆಯ ಕೊನೆಯ ದಿನ ಬಿಜೆಪಿಯ ನಾಯಕರೊಬ್ಬರು ನನ್ನನ್ನು ಸಂಪರ್ಕಿಸಿ ಒಂದು ಕೋಟಿ ರೂ ಆಮಿಷ ಒಡ್ಡಿದರು. ಉರಿಮಜಲು ರಾಮಭಟ್ಟರನ್ನು ಸಂಪರ್ಕಿಸಿ ನನ್ನನ್ನು ಒಪ್ಪಿಸುವಂತೆ ಒತ್ತಾಯಿಸಿದ್ದಾರೆ. ಮುಂದೆ ವಿಧಾನ ಪರಿಷತ್ ಸದಸ್ಯೆಯಾಗಿ ನೇಮಿಸುವ ಪ್ರಸ್ತಾಪವೂ ಆಮಿಷದಲ್ಲಿ ಸೇರಿತ್ತು.

ಶಕುಂತಲಾ ಶೆಟ್ಟಿ
ಮಾಜಿ ಶಾಸಕಿ, ಬಿಜೆಪಿ ಬಂಡಾಯ ಅಭ್ಯರ್ಥಿ

ಬೆಂಬಲ

'ಕರ್ನಾಟಕದ ಮೋದಿ ಆಗಲು ಹೊರಟ ಯಡಿಯೂರಪ್ಪ ಅವರನ್ನು ರಾಜಕೀಯವಾಗಿ ಮುಗಿಸಲು ಶಿಕಾರಿಪುರದಲ್ಲಿ ಬಂಗಾರಪ್ಪ ಅವರಿಗೆ ನಮ್ಮ ಬೆಂಬಲ'

ಜನಾರ್ಧನ ಪೂಜಾರಿ
ಕಾಂಗ್ರೆಸ್ ಮುಖಂಡರು

ಜೂಜಾಟ

ಟ್ವೆಂಟಿ-20 ಕ್ರಿಕೆಟ್ ಕ್ರೀಡೆಯ ನೈತಿಕ ಚೌಕಟ್ಟನ್ನು ತೂರೆದು ಜೂಜಾಟವಾಗಿ ಪರಿಣಮಿಸಿದೆ. ಟ್ವೆಂಟಿ-20 ಪಂದ್ಯದ ಮಾದರಿಯನ್ನು ಅಮೇರಿಕಾದಿಂದ ಎರವಲು ಪಡೆಯಲಾಗಿದ್ದು ಇದೊಂದು ಟ್ಲಾಬ್ಲಾಯ್ಡ್ ಸಂಸ್ಕೃತಿಯಾಗಿ ಕೇವಲ ಹಣಕ್ಕಾಗಿ ಆಟ ಆಡಲಾಗುತ್ತಿದೆ.

-ಗುರುದಾಸ್ ದಾಸ್‌ಗುಪ್ತ
ಸಿಪಿಐ ಸಂಸದರು, ಲೋಕಸಭೆಯಲ್ಲಿ

ಯಾಕೆ? ಏನು?

ಬಿಜೆಪಿಯು ಗಣಿಗಾರಿಕೆ ಮತ್ತು ನಗರಾಭಿವೃದ್ಧಿ ಖಾತೆಗಳು ತಮ್ಮ ಬಳಿಯೇ ಇರಬೇಕೆಂದು ಪಟ್ಟು ಹಿಡಿದ ಕಾರಣಕ್ಕೆ ಬಿಜೆಪಿ-ಜೆಡಿ(ಎಸ್) ಸಮ್ಮಿಶ್ರ ಸರ್ಕಾರ ಪತನವಾಯಿತು.

2004ರಲ್ಲಿ ಕುಮಾರಸ್ವಾಮಿಯವರನ್ನು ಐದು ಕೋಟಿ ರೂಪಾಯಿ ಸಾಲ ಕೇಳಿದ್ದ ಯಡಿಯೂರಪ್ಪ ಅವರು ಈಗ ಸಾವಿರ ಕೋಟಿ ರೂಪಾಯಿ ಬೇಕಾದರೂ ಕೊಡುವ ಸ್ಥಿತಿಯಲ್ಲಿದ್ದಾರೆ. ಅವರು ಅಧಿಕಾರ ಸಿಕ್ಕ ನಂತರ ಶ್ರೀಮಂತರಾಗಿದ್ದಾರೆ"

-ವೀರಪ್ಪ ಮೊಯಿಲಿ

ಚುಚ್ಚುಮದ್ದು

ಕಟು ವಾಸ್ತವ

■ "ಇರಾನ್ ಸಮರ ಎಣಿಸಿದುದಕ್ಕಿಂತ ಕಠಿಣವಾಗಿದೆ. ಅಲ್ಲಿನ ವೈಫಲ್ಯದಿಂದಾಗಿ ಅಮೇರಿಕಾವನ್ನು ಲೆಕ್ಕಕ್ಕೆ ತೆಗೆದುಕೊಳ್ಳದಂತೆ ನಮ್ಮ ಮಿತ್ರ ರಾಷ್ಟ್ರಗಳಿಗೆ ಸಂದೇಶ ರವಾನೆಯಾಗಿದೆ"

ಜಾರ್ಜ್ ಡಬ್ಲ್ಯೂ ಬುಶ್

➜ ಮತ್ತೆ ಇರಾನ್ ತಂಟೆಗೆ ಹೋದೀರಿ ಜೋಕೆ.

★

ಸಾಧು ಸಂತರ ಅಣಿ ಮುತ್ತುಗಳು

■ "ಹಿಂದೂಗಳು ಒಗ್ಗಟ್ಟಾಗಿ ವೋಟ್ ಬ್ಯಾಂಕ್ ನಿರ್ಮಾಣ ಮಾಡಿದರೆ ಮಾತ್ರ ಏಳಿಗೆ ಸಾಧ್ಯ. ಆಗ ಮಾತ್ರ ರಾಜಕೀಯ ಪಕ್ಷಗಳು ನಮ್ಮ ಬಳಿ ಬರುತ್ತವೆ. ರಾಮಸೇತು, ರಾಮಜನ್ಮಭೂಮಿ ವಿಚಾರದಲ್ಲಿ ಹಿಂದೂ ಧರ್ಮದ ಮೇಲೆ ಆಕ್ರಮಣ ನಡೆಯುತ್ತಿದೆ. ಹೆಚ್ಚುತ್ತಿರುವ ಮತಾಂತರ, ಭಯೋತ್ಪಾದನೆ ರಾಷ್ಟ್ರೀಯತೆಗೆ ಅಪಾಯ ತಂದೊಡ್ಡಿದೆ. ಇದನ್ನು ತಡೆಯುವ ಜವಾಬ್ದಾರಿ ಯುವಕರ ಮೇಲಿದೆ. ಆದರೆ ಹಿಂದೂ ಸಮಾಜ ನಿದ್ರೆ ಮಾಡುತ್ತಿದೆ. ಎಚ್ಚರಗೊಂಡಾಗ ಹಿಂದೂ ವಿರೋಧಿಗಳು ಸುಟ್ಟು ಬೂದಿಯಾಗಲಿದ್ದಾರೆ"

ವಿಶ್ವೇಶ್ವರ ತೀರ್ಥರು ಪೇಜಾವರ ಮಠಾಧೀಶ

➜ ಓಟ್ ಬ್ಯಾಂಕು, ಸುಡುವುದು, ಬೂದಿ ಮಾಡುವುದು..... ಏನಿದೆಲ್ಲ! ಸ್ವಾಮೀಜಿ, ಸನ್ಯಾಸಿಗಳು ಆಡುವ ಮಾತೇ ಇದು?

ಗೆಲ್ಲುವವವರುಯಾರಾದರೇನು? ಇಲ್ಲಿ ಸಲ್ಲುತ್ತಾರೆ!

ಹೀಗೊಂದು ಪ್ರಶ್ನೋತ್ತರ

ಪ್ರಶ್ನೆ: ಸೇವೆಯಿಂದ ವಜಾಗೊಂಡ ಪ್ರೊ: ಮೈಲಾರಪ್ಪನವರಿಗೆ ಬಿಜೆಪಿ ಟಿಕೆಟ್ ಕೊಟ್ಟಿರುವುದು ಸರಿಯೇ?



ಉತ್ತರ: ಪ್ರೊ: ಮೈಲಾರಪ್ಪನವರನ್ನು ಉದ್ದೇಶಪೂರ್ವಕವಾಗಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಕೆಲವರು ಸಂಚು ನಡೆಸಿದ್ದಾರೆ. ನಮ್ಮ ಬಳಿ ಇರುವ ಮಾಹಿತಿ ಮತ್ತು ದಾಖಲಾತಿಗಳ ಪ್ರಕಾರ ಅವರ ಮೇಲಿರುವ ಆರೋಪಗಳಿಗೆ ಯಾವುದೇ ಆಧಾರವಿಲ್ಲ.

ಪ್ರಶ್ನೆ: ಅಲ್ಪಸಂಖ್ಯಾತರಿಗೆ ಪ್ರಾತಿ ನಿಧ್ಯವೇ ನೀಡಿಲ್ಲ ಎಂದು ಸಂಸದ ಸಾಂಗ್ಲಿಯಾನ ಬೇಸರ ಮಾಡಿಕೊಂಡಿ ದ್ದಾರಲ್ಲ?

ಉತ್ತರ: ಗೆಲ್ಲಬಲ್ಲ ಅಲ್ಪಸಂಖ್ಯಾತ ಅಭ್ಯರ್ಥಿಗಳು ಸಿಗಲಿಲ್ಲ. ಅದಕ್ಕಾಗಿ ಹೆಚ್ಚು ಮಂದಿಗೆ ಟಿಕೆಟ್ ಕೊಡಲು ಸಾಧ್ಯವಾಗಿಲ್ಲ...


– ಯಡಿಯೂರಪ್ಪ

ಇವರು ದುಡಿವ ವರ್ಗದ ದನಿಗಳು...


ಬೈಂದೂರು:
ಯು.ದಾಸುಭಂಡಾರಿ

ಭೂ ಸುಧಾರಣೆಗಳಿಗಾಗಿ ನಡೆದ ಚಾರಿತ್ರಿಕ ಹೋರಾಟದ ಮೂಲಕ ಬೆಳೆದುಬಂದ ರೈತ ಮುಖಂಡರು ಕಾಂ. ಯು.ದಾಸುಭಂಡಾರಿ. ಈಗಿನ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಗೇಣಿದಾರರಿಗೆ ಭೂಮಿ ದೊರಕಿಸಿಕೊಡುವ ಹೋರಾಟದಲ್ಲಿ ತಮ್ಮ ದಿಟ್ಟತನದ ಪಾತ್ರ ನಿರ್ವಹಿಸಿದವರು. ಇದೇ ಕಾರಣಕ್ಕಾಗಿ ಭೂಮಾಲಕರಿಂದ ಅವಮಾನಿಷ ಧಾಳಿಗೆ ತುತ್ತಾದರೂ ವಿಚಲಿತರಾಗದೇ ಹೋರಾಟ ಮುಂದುವರಿಸಿದವರು.

ನೀರಾವರಿ ಹೋರಾಟ, ವಿದ್ಯುತ್ ಖಾಸಗೀಕರಣದ ವಿರುದ್ಧ ಹೋರಾಟ, ಕೃಷಿ ಕಟ್ಟಡ ಕಾರ್ಮಿಕರು, ಅಕ್ಷರದಾಸೋಹ, ಅಂಗನವಾಡಿ, ಹಂಚು, ಬೀಡಿ ಕಾರ್ಮಿಕರು ಹೀಗೆ ದುಡಿಯುವ ಜನ ವರ್ಗಗಳ ಪರವಾದ ಹೋರಾಟಗಳಲ್ಲಿ ಸತತವಾಗಿ ತೊಡಗಿಸಿಕೊಂಡು ಬಂದಿರುವ ದಾಸುಭಂಡಾರಿಯವರು. ಸುದೀರ್ಘ ಕಾಲದಿಂದ ಜನಪರ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ದಾಸುಭಂಡಾರಿಯವರು ಕ್ಷೇತ್ರದ ಯಾವುದೇ ಅಭ್ಯರ್ಥಿಗಿಂತಲೂ ಭಿನ್ನವಾಗಿ ಗೆಲುವಿಗೆ ಅರ್ಹವಾದ ಅಭ್ಯರ್ಥಿಯಾಗಿದ್ದಾರೆ. ಕ್ಷೇತ್ರದಲ್ಲಿ ದುಡಿಯುವ ವರ್ಗದ ಪ್ರತಿಕ್ರಿಯೆಯೂ ಉತ್ಸಾಹಕಾರಿಯಾಗಿದೆ.



ಯು. ದಾಸುಭಂಡಾರಿ



ಯಶವಂತ ಮರೋಳಿ

ಮಂಗಳೂರು ನಗರ ದಕ್ಷಿಣ –
ಯಶವಂತ ಮರೋಳಿ

ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೆಯೊಂದು ನಡೆಸಿದ ಸಮೀಕ್ಷೆಯ ಪ್ರಕಾರ ಜಿಲ್ಲೆಯಲ್ಲಿ 1 ವಿಧಾನ ಸಭಾ ಕ್ಷೇತ್ರದಲ್ಲಿ ಸಿ.ಪಿ.ಐ (ಎಮ್) ಇತರರಿಗಿಂತ ಮುಂದಿದೆ. ಅದು ಮಂಗಳೂರು ನಗರ ದಕ್ಷಿಣ ಕ್ಷೇತ್ರ. ಅಭ್ಯರ್ಥಿ ಯಶವಂತ ಮರೋಳಿ. ನಗರದ ಹೆಸರಾಂತ ವಕೀಲರಾದ ಇವರು ವೃತ್ತಿಯಲ್ಲಿ ವಕೀಲರಾದರೂ ವಿವಿಧ ಸಾಮಾಜಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರು.

ಜಿಲ್ಲೆಯಲ್ಲಿ ಸಂಘ ಪರಿವಾರದ ಕೋಮುಗಲಭೆಗಳು ತೀವ್ರಗೊಂಡಾಗ ಎಲ್ಲಾ ಜ್ಯಾತ್ಯಾತೀತ ಶಕ್ತಿಗಳನ್ನು ಒಂದುಗೂಡಿಸಲು ಸಿ.ಪಿ.ಐ (ಎಮ್) ಪ್ರಯತ್ನಿಸಿತು. ಅದರ ಭಾಗವಾಗಿ ಮಾನವತಾ ವೇದಿಕೆ ರಚನೆಯಾಯಿತು. ಮರೋಳಿಯವರು ಅದರ ಅಧ್ಯಕ್ಷರಾಗಿದ್ದಾರೆ. ಕೋಮು ಸೌಹಾರ್ದತೆಯ ಮಹತ್ವವನ್ನು ಪ್ರಚಾರ ಮಾಡಲು, ಸೌಹಾರ್ದತೆ ಕಾಪಾಡಲು ವೇದಿಕೆ ಪ್ರಯತ್ನಿಸಿದೆ.

ಸಂಘ ಪರಿವಾರವು ತನ್ನ ಧಾಳಿಯನ್ನು ಅತಿರೇಕಗೊಳಿಸಿದಾಗ ಅದರ ವಿರುದ್ಧ ಜನಾಭಿಪ್ರಾಯ ಮೂಡಿಸಲು ಸಿ.ಪಿ.ಐ(ಎಮ್) ಪ್ರಯತ್ನಿಸಿತು. ಉಡುಪಿಯಲ್ಲಿ ಗೋ ಸಾಗಣಿಕೆ ನೆಪ ಒಡ್ಡಿ ಇಬ್ಬರು ಅವಮಾಯಕ ಮುಸ್ಲಿಂರನ್ನು ಬೆತ್ತಲೆಗೊಳಿಸಿ ಥಳಿಸಿದ ಪ್ರಕರಣದಲ್ಲಿ ಇತರ ಜ್ಯಾತ್ಯಾತೀತ ಶಕ್ತಿಗಳೊಂದಿಗೆ ಸೇರಿ ಸಿ.ಪಿ.ಐ(ಎಮ್) ಬೃಹತ್ ಪ್ರಚಾರ ಸಭೆಗಳನ್ನು ಸಂಘಟಿಸಿತು. ಇಂತಹ ಎಲ್ಲಾ ಸಂದರ್ಭಗಳಲ್ಲಿ ಯಶವಂತ ಮರೋಳಿಯವರು ಸಕ್ರಿಯವಾಗಿ ಪಾಲ್ಗೊಂಡಿದ್ದರು.



ಕೆ.ಯಾದವಶೆಟ್ಟಿ

ಪ್ರಗತಿಪರ ಚಿಂತನೆಯ ಹಾಗೂ ಜನಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ವಕೀಲರನ್ನು ಸಂಘಟಿಸಿ ಆಲ್ ಇಂಡಿಯಾ ಲಾಯರ್ಸ್ ಯೂನಿಯನ್ (ಎಐಎಲ್‌ಯು) ದ.ಕ. ಜಿಲ್ಲಾ ಘಟಕವನ್ನು ರಚಿಸಲು ಶ್ರಮವಹಿಸಿದ ಯಶವಂತ ಮರೋಳಿಯವರು ಅದರ ಅಧ್ಯಕ್ಷರೂ ಆಗಿದ್ದಾರೆ.

ಮಂಗಳೂರು –
ಕೆ. ಯಾದವ ಶೆಟ್ಟಿ

ಯುವಜನ ಚಳುವಳಿಯ ಮೂಲಕ ಎಡಚಿಂತನೆಗೆ ಆಕರ್ಷಿತರಾದ ಕೆ. ಯಾದವ ಶೆಟ್ಟಿಯವರು ಸಿ.ಪಿ.ಐ(ಎಮ್)ನ ಪೂರ್ಣಾವಧಿ ಕಾರ್ಯಕರ್ತರು. ಮಧ್ಯಮವರ್ಗದ ಕುಟುಂಬದಿಂದ ಬಂದ ಇವರಿಗೆ ತೀವ್ರ ವಿರೋಧವಿದ್ದರೂ ಸಿ.ಪಿ.ಐ.(ಎಮ್) ಪಕ್ಷವನ್ನು ಬೆಳೆಸುವುದರ ಮೂಲಕ ಎಡಚಳುವಳಿಯನ್ನು ವಿಸ್ತರಿಸಬೇಕು

ಪುಟ 10ಕ್ಕೆ

ಸಂಪಾದಕೀಯ

ಯಾರಿಗೆ ಸ್ಥಿರತೆ ?

ಕರ್ನಾಟಕದಲ್ಲಿ ಸ್ಥಿರ ಸರ್ಕಾರ ಬೇಕು ಎಂಬ ಮಾತುಗಳು ಜೋರಾಗುತ್ತಿವೆ. ಸ್ಥಿರತೆ ಎಂದಾದರೆ ಯಾರಿಗೆ? ಯಾತಕ್ಕಾಗಿ? ಜನರನ್ನು ಸುಲಿಯಲೇ?

ಬಿಜೆಪಿಯು ಇಂದು ಸ್ಥಿರ ಸರ್ಕಾರ ರಚನೆಗೆ ತನಗೆ ಮತ ನೀಡಬೇಕೆಂದು ಕೇಳತೊಡಗಿದೆ.

ರಾಜ್ಯದಲ್ಲಿ ಯಾರಿಗೂ ಪೂರ್ಣ ಬಹುಮತ ಸಿಗದೇ ಹೋಗಬಹುದೆಂದೂ, ಮತ್ತೊಮ್ಮೆ ಸಮ್ಮಿಶ್ರ ಸರ್ಕಾರ ಅನಿವಾರ್ಯವಾಗಬಹುದೆಂಬ ಸಮೀಕ್ಷೆಗಳ ಹಿನ್ನೆಲೆಯಲ್ಲಿ ಇಂತಹ ಮಾತುಗಳನ್ನಾಡುತ್ತಿರುವುದು, ಅದು ಹಲವಾರು ಕಡೆ ಸೋಲುವ ಭೀತಿಯ ಆತಂಕದಲ್ಲಿಯೂಹೌದು.

'ಸ್ಥಿರ ಸರ್ಕಾರ'ದ ಮಾತು ಹೊಸದೇನಲ್ಲ. ಬಿಜೆಪಿ - ಕಾಂಗ್ರೆಸ್ ಪಕ್ಷಗಳು ಇಂತಹ ವಿಷಯವನ್ನು ಈ ಅವಧಿಯಲ್ಲಿ ಹೆಚ್ಚು ಎತ್ತುತ್ತಿವೆ. ಯಾಕೆ ಇಂದು ಯಾವ ಪಕ್ಷಗಳಿಗೂ ಪೂರ್ಣ ಬಹುಮತವನ್ನು ಜನ ನೀಡಲ್ಲ, ಸಮ್ಮಿಶ್ರ ಸರ್ಕಾರಗಳರಚನೆ ಅನಿವಾರ್ಯವಾಗಿದೆ ಎಂಬುದನ್ನು ವಿಶ್ಲೇಷಿಸಬೇಕಿದೆ. ಹಾಗೆಯೇ 'ಸ್ಥಿರ ಸರ್ಕಾರ' ಎಂಬುದು ಯಾರಿಗೆ? ಯಾತಕ್ಕಾಗಿ ಎಂಬುದನ್ನು ಪ್ರಶ್ನಿಸಬೇಕಿದೆ.

ದೇಶದಲ್ಲಿ ಹಲವಾರು ದಶಕಗಳ ಕಾಲ ಕಾಂಗ್ರೆಸ್ ಪಕ್ಷವು ಅಭಾದಿತವಾದ ಆಡಳಿತ ನಡೆಸಿತು. ಅಂದರೆ 'ಸ್ಥಿರ ಸರ್ಕಾರ'ವಾಗಿತ್ತು. ಆದರೆ ಜನತೆಯ ಪಾಲಿಗೆ ತೀವ್ರವಾದ ಆರ್ಥಿಕ ಅಸಮಾನತೆ ಉಂಟಾಯಿತು. ಸಂಕಟಗಳ ಹೊರೆ ಹೆಚ್ಚಿತು. ಕೋಮು ಗಲಭೆಗಳು ಸ್ಫೋಟಗೊಂಡವು. ಜಾತಿ ದಮನ, ಜಾತಿ ಗಲಭೆಗಳು ಹೆಚ್ಚಿದವು. ಆರ್ಥಿಕ ಉದಾರೀಕರಣ, ಜಾಗತೀಕರಣದ ಪರಿಣಾಮವು ಇನ್ನಷ್ಟು ಘೋರ ಸನ್ನಿವೇಶವನ್ನೇ ಸೃಷ್ಟಿಸಿತು. ಈ ಸನ್ನಿವೇಶವನ್ನು ಪ್ರತ್ಯೇಕವಾದಿಗಳು, ಛಿದ್ರಕಾರಿಗಳೂ, ಸಾಮ್ರಾಜ್ಯಶಾಹಿಗಳು ಬಳಸಿಕೊಳ್ಳಲು ಹವಣಿಸಿದರು. ಜನರ ಬದುಕು ಜರ್ಝರಿತವಾಯಿತು. ಪರಿಣಾಮ ಕಾಂಗ್ರೆಸ್‌ನ ಏಕಸ್ವಾಮ್ಯವನ್ನು ಜನ ಅಂತ್ಯಗೊಳಿಸಿದರು.

ಇಂತಹ ಸನ್ನಿವೇಶವನ್ನು ಬಳಸಿಕೊಂಡು, ಅತ್ಯಂತ ಬಲ ಪ್ರತಿಗಾಮಿಯಾದ ಫ್ಯಾಸಿಸ್ಟ್ ಮಾದರಿಯ ಕೋಮುವಾದವನ್ನು ಹಬ್ಬಿಸುವುದರ ಮೂಲಕ ಮೇಲೆದ್ದ ಬಿಜೆಪಿಯು ಮೊದಲು 13 ದಿನಗಳು, ನಂತರ 18 ತಿಂಗಳು, ಬಳಿಕ 5 ವರ್ಷಗಳು ಆಡಳಿತವನ್ನು ಕೇಂದ್ರದಲ್ಲಿ ನಡೆಸಿತು. ಎನ್‌ಡಿಎ ಹಲವು ಪಕ್ಷಗಳ ಸಮ್ಮಿಶ್ರ ಸರ್ಕಾರವೆಂದರೂ ಬಿಜೆಪಿಯದ್ದೇ ಏಕಪಕ್ಷೀಯ ನಿರ್ಧಾರ, ಸರ್ವ ಅಧಿಕಾರ. ಬಿಜೆಪಿಯ ವಾಜಪೇಯಿ ಆಡಳಿತದಲ್ಲಿ ದೇಶವು ಇನ್ನಷ್ಟು ಅಪಾರ ಹಾನಿಯನ್ನು ಅನುಭವಿಸಿತು. 'ಸ್ವದೇಶಿ' ಮಂತ್ರ ಜಪಿಸುತ್ತಲೇ ದೇಶವನ್ನು ಅಮೆರಿಕಾ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳು - ವಿದೇಶಿ ಹಣಕಾಸು ಸಂಸ್ಥೆಗಳಿಗೆ ಒತ್ತೆ ಇಡುವುದು ವಿಪರೀತವಾಗಿ ಹೆಚ್ಚಿತು. ಕೋಮು ಧಾಳಿಗಳು, ಅಲ್ಪಸಂಖ್ಯಾತರ ಮೇಲೆ ಆಕ್ರಮಣಗಳು, ಭಯೋತ್ಪಾದನೆ ಹೆಚ್ಚಿದವು. ದೇಶದ ಸಂಸತ್ತಿನ ಮೇಲೆಯೇ ದಾಳಿಯೂ, ಕಾರ್ಗಿಲ್ ವರೆಗೂ ಪಾಕಿಸ್ತಾನದ ಸೇನೆ ನುಸುಳಲು ಅವಕಾಶ ಕಲ್ಪಿಸಿ, ಯುದ್ಧಕ್ಕೂ ಹಾದಿ ಮಾಡಿತು. ದಲಿತರು, ಮಹಿಳೆಯರ ಮೇಲೆ ದೌರ್ಜನ್ಯಗಳಿಗೆ ಎಣೆ ಇಲ್ಲವಾಯಿತು. ಜನ ಬೆಲೆ ಏರಿಕೆ, ವಿದೇಶಿ ಸಾಲದಿಂದ ತತ್ತರಿಸಿದರು. ರೈತರ ಆತ್ಮ ಹತ್ಯೆಗಳು ನಿತ್ಯದ ಮಾತುಗಳಾದವು. ಹಸಿವು, ಚಳಿ, ಬಿಸಿಲಿಗೆ ಜನ ಸತ್ತರು. ಯುದ್ಧೋನ್ಮಾದದ ಹೆಚ್ಚಳ, ನೆರೆ ಹೊರೆಯೊಂದಿಗೆ ಸಂಬಂಧ ಹದಗೆಟ್ಟ ಸತತ ಜಗಳದ ವಾತಾವರಣ ದೇಶವನ್ನು ಆತಂಕಕ್ಕೆ ಈಡು ಮಾಡಿತು. ಇವೆಲ್ಲದರಿಂದ ಬಾಧಿತರಾದ ಜನತೆ ಬಿಜೆಪಿಯ ನೇತೃತ್ವದ ಸರ್ಕಾರವನ್ನು ಸೋಲಿಸಿದರು. ಆಗಲೂ ಕಾಂಗ್ರೆಸ್‌ಗೆ ಪೂರ್ಣ ಬಹುಮತವನ್ನು ಜನರ ನೀಡಲಿಲ್ಲ ಎಂಬುದನ್ನು ಗಮನಿಸಬೇಕು. ಸರ್ಕಾರ ರಚನೆಗೆ ಎಡಪಕ್ಷಗಳ ಬೆಂಬಲ ಅನಿವಾರ್ಯವಾಯಿತು.

ಬಹುಮತದ 'ಸ್ಥಿರ ಸರ್ಕಾರ' ವೆಂಬ ಹೆಸರಿನಲ್ಲಿ ದೇಶವನ್ನು, ಜನರನ್ನು ಅಸ್ಥಿರಗೊಳಿಸುವುದು ಬೇಕೆ ಎಂಬ ಪ್ರಶ್ನೆ ಮುಖ್ಯವಾಗಿದೆ. ಆಳುವವರು ಜನತೆಯನ್ನು ಸುಲಿಯಲು, ದೇಶವನ್ನು ದೋಚಲು 'ಬಹುಮತ'ವನ್ನು ಕೇಳುತ್ತಿದ್ದಾರೆ. ಉದಾರೀಕರಣ, ಜಾಗತೀಕರಣದ ತೀವ್ರ ಜಾರಿ - ಧಾಳಿಗಳ ಹಿನ್ನೆಲೆಯಲ್ಲಿ ಇಂತಹ 'ಸ್ಥಿರತೆ'ಯನ್ನು ಆಳುವವರಿಗೆ ನೀಡಿದಲ್ಲಿ ಅದು ಜನತೆಗೆ ಕಂಟಕವಾಗಲಿದೆ ಎಂದೇ ಪೂರ್ಣ ಬಹುಮತವನ್ನು ಜನ ನೀಡುತ್ತಿಲ್ಲ. ಇದು ಒಂದು ರಕ್ಷಣೆಯ ತೀರ್ಮಾನವೂ ಹೌದು ಎಂಬುದನ್ನು ಗಮನಿಸಬೇಕು.

ಕರ್ನಾಟಕದಲ್ಲಿಯೂ ಇರುವ ಸಂದರ್ಭವನ್ನು ಬಳಸಿ 20 ತಿಂಗಳು ಅಧಿಕಾರದಲ್ಲಿ ಪಾಲು ಪಡೆದ ಬಿಜೆಪಿಯು ದೇಶದ ಜನತೆಯ ತೀರ್ಪನ್ನು ಪರಿಗಣಿಸಲು ಸಿದ್ಧರಿಲ್ಲ. ಈಗಲೂ 'ಹಿಂದುತ್ವ'ವನ್ನೇ ಪ್ರತಿಪಾದಿಸುತ್ತಿದೆ. ಕರ್ನಾಟಕದಲ್ಲಿ ಹತ್ಯಾಕಾಂಡಗಳ, ಜನದ್ರೋಹಿ ನೀತಿಗಳ ಗುಜರಾತ್ ಮಾದರಿಯನ್ನೇ ಪ್ರತಿಪಾದಿಸುತ್ತಿದೆ. ಆಡಳಿತ ಯಂತ್ರವನ್ನು, ಶಿಕ್ಷಣ, ಸಾಂಸ್ಕೃತಿಕ ಪರಿಸರವನ್ನು ಕೋಮುವಾದೀಕರಿಸಲು ಸತತವಾಗಿ ಯತ್ನಿಸಿತು. ಗಣಿ - ಭೂಮಿ - ಕಾಡು ಇತ್ಯಾದಿ ಸಾರ್ವಜನಿಕ ಆಸ್ತಿ ಲೂಟಿ ಹೊಡೆಯಲಾಯಿತು. ಭ್ರಷ್ಟಾಚಾರ ಹಗರಣದಲ್ಲಿ ಬಿಜೆಪಿ ಮುಖಂಡರು, ಶಾಸಕ-ಸಚಿವರಿಗೆ ಸರಿಸಾಟಿಯಿಲ್ಲ ವೆಂಬಂತೆ ಘಟನೆಗಳು ನಡೆದವು. ಇದೇ ಮಾನ್ಯ ಯಡಿಯೂರಪ್ಪನವರ ಸಹಭಾಗಿ ನಾಯಕತ್ವದ ಸರ್ಕಾರವಿರುವಾಗಲೇ ದಲಿತರ ಮೇಲೆ ಅವ್ಯಾಹತ ದೌರ್ಜನ್ಯಗಳು ನಡೆದವು. ಸೇತುಸಮುದ್ರಂ ವಿವಾದವೆತ್ತಿ ಇಬ್ಬರನ್ನು ಜೀವಂತ ಸುಟ್ಟದ್ದು, ಆದಿಉಡುಪಿ ಬೆತ್ತಲೆ ಪ್ರಕರಣ, ಬಾಬುಬುಡನ್ ಗಿರಿ ವಿವಾದ ಮುಂದಿನ ದಿನಗಳಲ್ಲಿ ಬಿಜೆಪಿ ಅಧಿಕಾರಕ್ಕೆಬಂದರೆ ಕರ್ನಾಟಕ ಎಂತಹ ಭೀಕರ ಸ್ಥಿತಿ ಅನುಭವಿಸಬೇಕಾಗುವುದು ಎಂಬುದನ್ನು ತೋರಿಸುತ್ತದೆ. ಹೊರಗೆ ಬಿಜೆಪಿ ಮುಖವಾಡವಾಗಿ ಸಂವಿಧಾನ ಬಾಹಿರ, ಸಂವಿಧಾನ ವಿರೋಧಿ ಆರ್‌ಎಸ್‌ಎಸ್ ಈ ಸರ್ಕಾರದ ಪ್ರಧಾನ ಚಾಲಕಶಕ್ತಿ, ನಿಯಂತ್ರಕ ಎಂಬುದನ್ನು ನೆನೆದರೆ ಮುಂಬರುವ ಕರಾಳ ದಿನಗಳು ಅನಾವರಣಗೊಂಡು ತಲ್ಲಣಗೊಳ್ಳುವಂತಾಗುತ್ತದೆ.


ಆದ್ದರಿಂದ ಇಂತಹ ಶಕ್ತಿಗಳಿಗೆ ಬಲನೀಡಿ, ಪೂರ್ಣಾಧಿಕಾರ ನೀಡಿದರೆ ಸ್ಥಿರತೆ ಆಳುವವರಿಗೆ, ಅಸ್ಥಿರತೆ ಜನರಿಗೆ. ಹಿಂದೆ ಫ್ಯಾಸಿಸ್ಟ್ ದೌರ್ಜನ್ಯ ನಡೆಸುವಾಗ ಹಿಟ್ಲರ್ ಸರ್ಕಾರ 'ಸ್ಥಿರ' ವಾಗಿತ್ತು!

ಹಾಗೆಯೇ ಮುಸಲೋನಿ, ಸ್ಪೇನ್‌ನ ಫ್ರಾಂಕೋ, ಚಿಲಿಯ ಪಿನೋಶೆಟ್‌ಗಳಿಂದ ಮಿಲಿಯಾಂತರ ಜನರ ದಮನಕಾಂಡ ನಡೆಯುವಾಗ 'ಸ್ಥಿರ' ಸರ್ಕಾರದ 'ನೇತೃತ್ವ' ವಹಿಸಿದ್ದರು.

ಅಂದರೆ ಸ್ಥಿರ ಸರ್ಕಾರ ಎಂಬುದು ಬೇಡವೆಂದಲ್ಲ; ಧರ್ಮನಿರಪೇಕ್ಷತೆ, ದೇಶದ ಐಕ್ಯತೆ, ಪ್ರಜಾಪ್ರಭುತ್ವವನ್ನು ಬಲಿಕೊಡುವ ಈ ಸ್ಥಿರತೆ ಬೇಕೆ ಎಂಬುದು ಪ್ರಶ್ನೆ

ದೇಶದ - ರಾಜ್ಯದ ಬಹುಮುಖಿ ಸಂಸ್ಕೃತಿ, ಧಾರ್ಮಿಕ ಸಹಿಷ್ಣುತೆ, ಧರ್ಮ ನಿರಪೇಕ್ಷತೆ, ಪ್ರಗತಿ, ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ನ್ಯಾಯ ಮುಂತಾದವುಗಳನ್ನು ದೃಢವಾಗಿ ಪ್ರತಿಪಾದಿಸಿ ಕೋಮುವಾದ - ಆರ್ಥಿಕ ಉದಾರೀಕರಣ ನೀತಿಗಳಿಗೆ ಮುಖಾಮುಖಿಯಾಗಿ ಮುನ್ನಡೆಯುವ, ಜನಪರ ನೀತಿಗಳಿಂದ, ಅವುಗಳ ಜಾರಿಗೆ ರಾಜಕೀಯ ಇಚ್ಛಾಶಕ್ತಿಯುಳ್ಳ ರಾಜಕೀಯ ಶಕ್ತಿಗಳ ಸ್ಥಿರ ಸರ್ಕಾರ ಬೇಕು. ಆದ್ದರಿಂದ ಜನತೆ ನೀಡುವ ತೀರ್ಪನ್ನು ಗೌರವಿಸುವುದು ಪ್ರಾಥಮಿಕ ಅಗತ್ಯತತೆ ಎಂಬುದನ್ನು ಅಧಿಕಾರದಾಹಿ ಬಿಜೆಪಿ ಅರಿಯಬೇಕು.

ಬಿಜೆಪಿಗೆ ಮುಖವಾಡಗಳು ಎಷ್ಟು?



ಚುನಾವಣಾ ಅಖಾಡ ಸಿದ್ದಗೊಂಡಿದೆ. ಬಹುತೇಕ ಕ್ಷೇತ್ರದಲ್ಲಿನ ಸ್ಪರ್ಧೆಯೂ ಸ್ಪಷ್ಟಗೊಂಡಿದೆ. ಇನ್ನೂ ಮತದಾರರನ್ನು 'ಮನವೊಲಿಸುವ' 'ಕಸರತ್ತು'. ಕಾಂಗ್ರೆಸ್, ಜೆಡಿ(ಎಸ್) ಬಿಜೆಪಿ, ಬಿ.ಎಸ್.ಪಿ. ಯಂತಹ ಹಲವು ಪಕ್ಷಗಳು ಪ್ರಣಾಳಿಕೆಗಳು ಪ್ರಕಟವಾಗಿದ್ದರೂ, ಅದರ ಅಂಶಗಳ ಆಧಾರದಲ್ಲಿ ಅಂತಹ ಚರ್ಚೆಗಳಾಗಲಿ, ವಾದ-ಸಂವಾದಗಳಾಗಲೀ ಕಂಡು ಬರುವುದಿಲ್ಲ. ಇಂತಹ ಕಾರ್ಯಕ್ರಮದ ಆಧಾರಿತ ಚುನಾವಣಾ ಹೋರಾಟದಲ್ಲಿ ವಿಶ್ವಾಸವನ್ನು ಇರಿಸಿಕೊಂಡಿಲ್ಲ. ಯಾಕೆಂದರೆ ಇಂದು ವರದಿಯಾಗುತ್ತಿರುವಂತೆ ಅಪಾರ ಪ್ರಮಾಣದ ಹಣ, ಸೀರೆ ವಸ್ತುಗಳು, ಮದ್ಯ ಇತ್ಯಾದಿ ಆಮಿಷಗಳೇ ಗೆಲುವಿನ ಸೋಪಾನ ಎಂದೇ ಭಾವಿಸಿದ್ದಾರೆ. ಆಮೀಷ ವೊಡ್ಡಿ ಭ್ರಷ್ಟ ಮಾರ್ಗ ಅನುಸರಿಸುವಲ್ಲಿ ಅಕ್ರಮಗಳನ್ನು ಪತ್ತೆ ಹಚ್ಚುತ್ತಿರುವ ಪ್ರಕರಣಗಳೇ ಇದನ್ನು ಸಾರುತ್ತಿವೆ.

ಕ್ಷೇತ್ರ ಪುನರ್ ವಿಂಗಡಣೆಯಾದ ನಂತರ ಹಲವಾರು ಕಡೆಗಳಲ್ಲಿ ಹೊಸ ಪ್ರಯೋಗಗಳು ನಡೆದಿವೆ. ಆಕಾಂಕ್ಷಿಗಳ ಸಂಖ್ಯೆಯೂ ಹೆಚ್ಚಿದೆ. ಅದನ್ನನುರಿಸಿ ಬಂಡಾಯಗಳೂ. ಕೆಲವೆಡೆ ಈ ಬಂಡಾಯಗಳೂ. ಕೆಲವೆಡೆ ಬಂಡಾಯಗಳೇ ಆ ಪಕ್ಷಗಳ ಗೆಲುವಿಗೆ ಅಡ್ಡಗಾಲು ಆಗಬಹುದು. ಸಾಮ, ವೇದ, ದಂಡ ವಿಧಾನಗಳನ್ನು ಅನುಸರಿಸಿ ಬಂಡಾಯವನ್ನು ಅಡಗಿಸಲು ಯತ್ನಿಸಿದ್ದಾರೆ.

ಬಿಜೆಪಿ ಪುತ್ತೂರು ಮಾಜಿ ಶಾಸಕಿ ಶಕುಂತಳಾ ಶೆಟ್ಟಿ ಇವರನ್ನು ಉಚ್ಚಾಟಿಸಿ ಕೈ ತೊಳೆದುಕೊಳ್ಳಲು ನೋಡಿದೆ. ಅಧಿಕಾರ ಹೇಗಾದರೂ ಆಗಲಿ ಹಿಡಿಯಲೇಬೇಕೆಂಬ ಆತುರದಲ್ಲಿ ಮುಗ್ಗುರಿಸಿ ಬೀಳಲಾರರೆಂದು ಹೇಳಲಾಗದು.

ಬಹಳ ವಿಶೇಷದ ಸಂಗತಿಯೆಂದರೆ. ಬಿಜೆಪಿ ಬಿಡುಗಡೆ ಮಾಡಿರುವ ಪ್ರಣಾಳಿಕೆಯಲ್ಲಿ ಒಂದು ಗಮನಾರ್ಹ ಬದಲಾವಣೆ ಇದೆ. ಹಿಂದೆ, ಈಗಲೂ ಕರ್ನಾಟಕವನ್ನು ಗುಜರಾತ್‌ನ್ನಾಗಿಸುವುದಾಗಿ ಹೇಳುತ್ತಾ ಬಂದಿರುವ ಬಿಜೆಪಿ ದಿಢೀರನೆ ಅದರ ಪ್ರಣಾಳಿಕೆಯಲ್ಲಿ 'ವಾಜಪೇಯಿ ಮಾದರಿ'ಗೆ ಬದಲಾಗಿ ಬಿಟ್ಟಿದೆ. ಬಿಜೆಪಿ-ಸಂಘಪರಿವಾರ ಬದಲಾಗಿದೆ ಎಂದು ಭಾವಿಸಬೇಕಾದುದೇನಿಲ್ಲ. ಮೋದಿಯ 'ಹಿಂದುತ್ವ'ದ ಅಜೆಂಡಾಕ್ಕೆ 'ಸೌಮ್ಯ' ಎಂದು ಬಿಂಬಿಸುವ ವಾಜಪೇಯಿ ಮುಖವಾಡ ತೊಡಿಸಲಾಗಿದೆ. ಎ.ಬಿ.ವಾಜಪೇಯಿಯ ಮಾದರಿ ಮೋದಿಯ ಮಾದರಿಗಿಂತ ಭಿನ್ನವಾಗೇನೂ ಇರಲಿಲ್ಲ. ಗುಜರಾತ್‌ನಲ್ಲಿ ಅಲ್ಪಸಂಖ್ಯಾತರ ಮಾರಣ ಹೋಮವನ್ನು ಮೋದಿ ನಡೆಸಿದಾಗ, ಇಡೀ ದೇಶದಲ್ಲಿ ಜಗತ್ತಿನ ಹಲವಾರು ಕಡೆ ಖಂಡನೆಗಳ ವ್ಯಕ್ತವಾದಾಗ ಬಂದ ಟೀಕೆಗಳಿಗೆ ಉತ್ತರಿಸುತ್ತಾ "ಅಲ್ಪಸಂಖ್ಯಾತರ ತುಷ್ಟೀಕರಣ"ದ ಬಗ್ಗೆ ಚರ್ಚಿಸಬೇಕೆಂದು ಹೇಳಿ ಮೋದಿಯ ಕ್ರಮಗಳನ್ನು ವಾಜಪೇಯಿ ಸಮರ್ಥಿಸಿದರು! ಅಂದರೆ ಮೋದಿಯದ್ದು ವಾಜಪೇಯಿಯದ್ದು ಒಂದೇ ಮಾದರಿ ಅದು ಸಂಘ ಪರಿವಾರದ ಫ್ಯಾಶಿಸ್ಟ್ ಮಾದರಿ.

ಈಗಲೇ ಹೀಗೆ - ನಂತರ ಹೇಗೆ?

ಇಂತಹ ಮೋದಿಯನ್ನು ಕರ್ನಾಟಕದ ತುಂಬ ಸುತ್ತಾಡಿಸಿ ಭಾಷಣ ಹೊಡೆಸಿದರೆ ಅಧಿಕಾರ ಗ್ಯಾರಂಟಿ ಎಂದು ಬಿಜೆಪಿ ಭಾವಿಸಿರಬಹುದು ಅಥವಾ ಒಬ್ಬ ಆಕ್ರಂಧಿಸಿದಂತೆ, ಅರ್ಭಟಿಸಿದಂತೆ, ಇನ್ನೊಬ್ಬರು. ಅತ್ತಂತೆ ಸಾರ್ವಜನಿಕ ವೇದಿಕೆಗಳಲ್ಲಿ ನಟಿಸಲು ಪರಿವಾರ ನಿರ್ದೇಶಿಸಿರಬಹುದು. ಬಿಜೆಪಿ ಪರವಿರುವ ಮನೋಭಾವವನ್ನು 'ಹಿಂದುತ್ವ' ದ ಅಜೆಂಡಾದತ್ತ ಸೆಳೆಯಲು ಒಂದು ತಂತ್ರವೂ ಆಗಿರಬಹುದು.

ಅಂತೂ ಮೋದಿ ಬಂದಾಗ ಮೊದಲ ದಿನವೇ ತೀವ್ರ ನಿರಾಶೆ, ಮುಖಭಂಗ ಅನುಭವಿಸಬೇಕಾಗಿ ಬಂದಿದೆ. ಬಿಜೆಪಿ ಅಧ್ಯಕ್ಷ ಸದಾನಂದಗೌಡರ ತವರೂರು ಪುತ್ತೂರಿನಲ್ಲಿ 50 ಸಾವಿರ ಕಾರ್ಯಕರ್ತರು ಸೇರಲಿರುವರೆಂದು ಬೊಗಳೆ ಹೊಡೆದಿದ್ದರೂ ಕೆಲವೇ ಸಾವಿರ ಬಂದಿದ್ದರು.ಮೋದಿಯ ಮೋಡಿಗೆ ಜನ ಒಳಗಾಗಲಿಲ್ಲ. ಇದನ್ನು ವರದಿ ಮಾಡಿದ ಟಿ.ವಿ.9 ನ ವರದಿಗಾರ 'ದೇಶಭಕ್ತರು' ಬೆದರಿಕೆ ಒಡ್ಡಿದರು. ಮತದಾನಕ್ಕೆ ಮೊದಲೇ ಹೀಗೆ ನಂತರ ಹೇಗೆ?

ಹೀಗೆ ಮೋದಿಯ ಮುಖವಾಡ ಹಲವಾರು ಕಡೆ ಕಳಚಿ ಬಿದ್ದಿದೆ. ಜನ 'ಮೋಡಿ'ಗೆ ಒಳಗಾಗಲಿಲ್ಲ ಎಂಬುದು. ಆದರೂ ಚೆಡ್ಡಿ ಪಡೆ ಮೋದಿಯನ್ನು ಸುಲಭವಾಗಿ ಬಿಡಲು ಸಿದ್ದರಿಲ್ಲ. ಸಂಘ ಪರಿವಾರದ ವಿಷ ವೈರಸ್ ಸಂತತಿಯ ಪ್ರತಾಪ ಸಿನ್ಹ ನಿಂದ ಮೋದಿ ಬಗ್ಗೆ ಒಂದು ಪುಸ್ತಕ ಬರೆಸಿ ಮೋದಿಯನ್ನು ಆ ಮಾದರಿಯನ್ನು ಜನಪ್ರಿಯಗೊಳಿಸಲು ಹೊರಟಿದ್ದಾರೆ. (ಮುಂದೆ ಪ್ರಧಾನಿ ಅಭ್ಯರ್ಥಿಯಾಗುವ ಲಕ್ಷಣಗಳಿವೆ ಎಂದು ಅಡ್ವಾಣಿ ಹೇಳಿದ್ದು ಆಕಸ್ಮಿಕವಲ್ಲ!)

'ನರೇಂದ್ರಮೋದಿ ಯಾರೂ ತುಳಿಯದ ಹಾದಿ' ಎಂಬ ಪ್ರಚಾರಕ್ಕೆ ಎಸ್.ಎಲ್.ಭೈರಪ್ಪನವರ ಆಶೀರ್ವಾದದ ಮುನ್ನುಡಿಯೂ ಇದೆ. ಅಂದರೆ ಮೋದಿ ಮಾದರಿಯನ್ನು ಇವರು ಬಿಟ್ಟಾರೆಯೇ.

ಬಿಜೆಪಿ ಮುಖವಾಡ ಮಾದರಿ ಇಲ್ಲಿ ಯಡ್ಡಿ ಸೋಲಲೇಬೇಕು

ಎಲ್ಲರ ಕಣ್ಣು ಈಗ ಶಿಕಾರಿಪುರದತ್ತಲೇ. ಇದು ಇಲ್ಲಿ ಮಾಜಿ ಸಿ.ಎಂ., ಹಾಗೂ 'ಭಾವಿ' ಸಿ.ಎಂ. ಯಡಿಯೂರಪ್ಪ ಅಭ್ಯರ್ಥಿ. ಮಾತ್ರವಲ್ಲ ಇವರನ್ನೆದುರಿಸಲು ಮಾಜಿ ಸಿ.ಎಂ., ಹಾಲಿ ಎಂ.ಪಿ. ಎಸ್.ಬಂಗಾರಪ್ಪನವರ ಸ್ಪರ್ಧೆಯೂ ಇಲ್ಲಿಂದಲೇ. ಹೀಗಾಗಿ ಹಣಾಹಣಿ ತೀವ್ರ. ಬೆಂಬಲವೂ ಹಾಗೆಯೇ. ಒಂದೆಡೆ ಸಂಘ ಪರಿವಾರ, ಬಿಜೆಪಿ ಇದ್ದರೆ, ಈ ಕೋಮುವಾದಿಗಳನ್ನು ಸೋಲಿಸಲು ಸಮಾಜವಾದಿ ಪಕ್ಷದ ಬಂಗಾರಪ್ಪನವರಿಗೆ ಕಾಂಗ್ರೆಸ್, ಜೆಡಿ(ಎಸ್), ಸಿಪಿಐ(ಎಂ), ಸಿಪಿಐ, ಸರ್ವೋದಯ ಪಕ್ಷ, ಅಲ್ಲದೆ, ಹಲವಾರು ಪ್ರಗತಿಪರ ಸಂಘಟನೆಗಳು, ವ್ಯಕ್ತಿಗಳು ಬೆಂಬಲವಾಗಿ ನಿಂತಿದ್ದಾರೆ.

ಇದರಿಂದ ವಿಹ್ವಲವಾದ ಯಡಿಯೂರಪ್ಪನವರು ಮನಸೋ ಇಚ್ಛೆ, ಬಯ್ದಾಡುತ್ತಾ ಪ್ರಚಾರಕ್ಕಿಳಿದಿದ್ದಾರೆ. ಬಂಗಾರಪ್ಪನವರ ಡಿಪಾಸಿಟ್ ಕಳೆಯುವುದಾಗಿಯೂ ಹೇಳುತ್ತಿದ್ದಾರೆ.

ಹೇಗಾದರೂ ಆಗಲಿ ಇದನ್ನು ಒಂದು ಸವಾಲಾಗಿ ಸ್ವೀಕರಿಸಬೇಕು. ಯಡಿಯೂರಪ್ಪ ಸೋಲಲೇಬೇಕು. ಬಿಜೆಪಿಯ ಅತ್ಯಂತ ಪ್ರಮುಖ ನಾಯಕ ಸೋಲುವುದು. ಕೋಮುವಾದಿಗಳಿಗೆ ಕೊಟ್ಟ ಏಟು ಸಹ. ಹೀಗಾಗಿ ಎಲ್ಲಾ ಶಕ್ತಿ ಹಾಕಿ, ಯಡಿಯೂಪ್ಪನಿಗೆ ಸೋಲಿಸಬೇಕು.

ಕೋಮುವಾದಿಗಳಿಗೆ ಸೋಲುಣಿಸಿ

ಮೇ ದಿನದ ಕರೆ


ಕುವೆಂಪು ಅವರ ಆಶಯದಂತೆ ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಉಳಿಸಬೇಕಿದ್ದರೆ ಚುನಾವಣೆಯಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸಬೇಕು ಎಂದು ಹಿರಿಯ ಕಾರ್ಮಿಕ ಮುಖಂಡರು, ಸಿಐಟಿಯು ಪ್ರಧಾನ ಕಾರ್ಯದರ್ಶಿಯಾದ ಕಾಂ. ವಿ.ಜೆ.ಕೆ.ನಾಯರ್ ಕರೆ ನೀಡಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಸಂಘಟಿಸಿದ್ದ ಮೇ ದಿನಾಚರಣೆ ಅಂಗವಾಗಿ ಬೆಂಗಳೂರು ನಗರದ ಬನಪ್ಪ ಪಾರ್ಕ್‌ನಲ್ಲಿ ಗುರುವಾರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದರು.

ಈ ಬಾರಿ ಅಧಿಕಾರದ ಚುಕ್ಕಾಣಿ ಹಿಡಿಯಲು ಬಿಜೆಪಿ ಪಣ ತೊಟ್ಟಿದೆ. ಈ ಹಿಂದೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಆಡಳಿತ ನಡೆಸುವಾಗ ದೇಶದಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರು. ಕರ್ನಾಟಕವನ್ನು ಗುಜರಾತ್ ಆಗಿ ಮಾರ್ಪಡಿಸುವುದು ಅವರ ಏಕ ಅಂಶದ ಕಾರ್ಯಕ್ರಮ. ಹೀಗಾಗಿ, ಕೋಮುವಾದಿ ಶಕ್ತಿಯನ್ನು ಅಧಿಕಾರದಿಂದ ದೂರ ಇಡಬೇಕು ಎಂದು ಕರೆ ನೀಡಿದರು.

ಒಂದೆಡೆ ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೆ ಏರುತ್ತಿದೆ. ಆದರೆ, ಕಾರ್ಮಿಕರ ಕನಿಷ್ಠ ವೇತನದಲ್ಲಿ ಹೆಚ್ಚಳವಾಗಿಲ್ಲ. ಈ ಬಗ್ಗೆ ಸರ್ಕಾರಗಳು ಗಮನ ಹರಿಸಬೇಕಿದೆ ಎಂದು ಆಗ್ರಹಿಸಿದರು.

ಉದಾರೀಕರಣ ನೀತಿಗಳು ಜಾರಿಯಾಗುವ ಮೊದಲು ನಮ್ಮ ದೇಶದ ಕೈಗಾರಿಕಾ ಲಾಭದಲ್ಲಿ ಕಾರ್ಮಿಕರ ಪಾಲು ಶೇ. 33 ರಷ್ಟು ಇತ್ತು. ಮಾಲೀಕರ ಲಾಭದ ಪಾಲು ಶೇ. 12 ರಷ್ಟಿತ್ತು. 2005 ರ ಹೊತ್ತಿಗೆ ಕಾರ್ಮಿಕರ ಪಾಲು 15 ಕ್ಕೆ ಕುಸಿದಿದೆ. ಮಾಲೀಕರ ಲಾಭದ ಪ್ರಮಾಣ ಶೇ. 45ಕ್ಕೆ ಹೆಚ್ಚಿದೆ.



ಈ ಬಗ್ಗೆ ಯಾವ ಮಠಾಧೀಶರು, ಯಾವ ಧರ್ಮಗುರುಗಳು ಕೇಳುವುದಿಲ್ಲ. ಆದರೆ ಸಿಐಟಿಯು ಇದನ್ನು ಪ್ರಶ್ನೆ ಮಾಡುತ್ತದೆ ಎಂದರು.

ಸಿಐಟಿಯು ಬೆಂಗಳೂರು ಜಿಲ್ಲಾಧ್ಯಕ್ಷ ಇ.ಕೆ.ಎನ್.ರಾಜನ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಉಮೇಶ್, ವಿಮಾ ನೌಕರರ ಸಂಘಟನೆಯ ಕಾಂ. ವಿಜಯಕುಮಾರ್ ಮುಂತಾದವರು ಪಾಲ್ಗೊಂಡು ಮಾತನಾಡಿದರು.

'ತಾಯಿ' ಚಲನಚಿತ್ರದ ನಿರ್ಮಾಪಕರು, ಖ್ಯಾತ ನಟರೂ ಆದ ಸುಂದರರಾಜ್‌ರವರು ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ತಾಯಿ ಸಿನಿಮಾದ ಗಳಿಕೆಯ ಅರ್ಧಭಾಗವನ್ನು ಅವರು ಕಾರ್ಮಿಕರ ಹೋರಾಟಕ್ಕೆ ನೀಡುವುದಾಗಿ ಘೋಷಿಸಿದರು. ಮೆಲ್ಕಿಯೋರ್ ಸ್ವಾಗತಿಸಿದರು ಹಾಗೂ ಛಾಯಾ ವಂದಿಸಿದರು.

ಗುರಿ

ಕೈಯ್ಯೊಳು ಚೂರಿ ಕುಂಕುಮಧಾರಿ
ಬರುತಿಹ ನಾರವನು
ಕೇಸರಿ ಪಟ್ಟಿ ಹಣೆಗೆ ಕಟ್ಟಿ
ಗತ್ತಿಲೆ ತಿರುಗುವನು

ನಡಿಗೆಯೊಂದೇ ಹರಡಿದೆ ಭೀತಿ
ರಕ್ಕಸ ಇವನೇನು ?
ಕಂಡವರನು ಕೊಚ್ಚಲು ಕುಣಿಯುವ
ಶಿಕ್ಷೆಗೆ ಹಾರುವನು

ಚಡ್ಡಿಯ ತೊಟ್ಟು ಪಡ್ಡೆಯ ಹುಡುಗ
ನಂತೆ ಕಾಣುವನು
ಲಾಠಿಯ ಹೊತ್ತು ಗೂಟದಂತೆ
ಸೆಟೆದು ನಡೆಯುವನು

ಗಡ್ಡಕೆ ಕಡ್ಡಿ ಗೀರಲು ದಡ್ಡರ
ಗುಂಪು ಕಟ್ಟಿಹನು
ಮಡ್ಡಿಯ ಕುಡಿದ ಮಂಗಗಳಂತೆ
ತಿದ್ದಿ ತೀಡಿಹನು

'ಹಿಂದುಗಳೊಂದು ಬಂಧು' ಎಂದು
ಸಾರುತಲಿರುವನು
ಅಂದು ಇಂದು ಎಂದು ನಮ್ಮೊಳು
ಒಂದಾಗಿರದವರನು
ಕೊಂದು ಕೊಲ್ಲಿಸಿ ಕೊಳ್ಳಲು ತ್ರಿಶೂಲ
ಯುವಕಗೆ ಹಂಚುವನು
ಒಂದೇ ನೆಲದ ಮಕ್ಕಳ ಮಧ್ಯೆ
ದ್ವೇಷವ ಬಿತ್ತುವನು

ಚಾಕು ಚೂರಿ ಎಸೆ ಇರಿ ದೂರ
ಯಲ್ಲರು ನಾ ಒಂದೆ
ಬೇಕು ದುಡಿಯುವ ಕೈಗೆ ಕೆಲಸ
ಕೇಳುವ ಬನ್ನಿ ನೀವ್ ಮುಂದೆ

ಐಕ್ಯತೆ ನಮ್ಮ ಬದುಕಿನ ಭಾಗ್ಯ
ದೇಶದ ಒಗ್ಗಟ್ಟು
ಸಖ್ಯತೆ ಇಂದ ಸಾಗು ಮುಂದಕೆ
ಪ್ರಗತಿಯ ಗುರಿಮುಟ್ಟು

ನರಸಿಂಹಪ್ಪ, ಸಿಂಧನೂರು

'ಬಿಜೆಪಿ ದುಡಿಯುವ ವರ್ಗದ ಐಕ್ಯತೆ ಮುರಿಯುವ ಕೋಮುವಾದಿ'

ಒಂದು ಗೌರವಯುತ ಬದುಕು, ಸಾಮಾಜಿಕ ಭದ್ರತೆ, ಸಾಮಾಜಿಕ ನ್ಯಾಯ, ಶಾಂತಿ-ಸೌಹಾರ್ದತೆ ಒಟ್ಟಾರೆ ಎಲ್ಲರೂ ನೆಮ್ಮದಿಯಿಂದ ಜೀವನ ನಡೆಸುವ ವ್ಯವಸ್ಥೆಯ ಬದ್ಧ ವೈರಿಯಾದ ಕೋಮುವಾದಿ ಬಿಜೆಪಿಯನ್ನು ಈ ಚುನಾವಣೆಯಲ್ಲಿ ಸೋಲಿಸುವಂತೆ ಹಾಸನದ ಮೇ ದಿನಾಚರಣೆ ಸಂದರ್ಭದಲ್ಲಿ ಕರೆ ನೀಡಲಾಯಿತು.

ಹಾಸನದಲ್ಲಿ ಸಿಐಟಿಯು ಸಂಘಟಿಸಿದ್ದ ಮೇ ದಿನ ಆಚರಣೆ ಸಂದರ್ಭದಲ್ಲಿ ಕೇಂದ್ರದಲ್ಲಿ ಬಿಜೆಪಿ ಆಡಳಿತ ನಡೆಸಿದ ಕಾಲದಲ್ಲಿ ಕಾರ್ಮಿಕ ವರ್ಗದ ಮೇಲೆ ಮಾಡಿದ ಪ್ರಹಾರ ಹಾಗೂ ಜಾಗತೀಕರಣವನ್ನು ತ್ವರಿತಗತಿಯಲ್ಲಿ ಜಾರಿಗೊಳಿಸಿ ಇಡೀ ಭಾರತದ ಜನತೆಯನ್ನು ಲೂಟಿ ಮಾಡಲು ವಿದೇಶಿ ಕಂಪನಿಗಳಿಗೆ ಅವಕಾಶ ನೀಡುವುದರ ಜೊತೆಗೆ ಕಾರ್ಮಿಕ ಕಾನೂನುಗಳನ್ನು, ಕೃಷಿ ಕಾನೂನುಗಳನ್ನು ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಮಾರ್ಪಡಿಸಿದ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವುದರ ಜೊತೆಗೆ, ಜನರಿಂದಲೂ ದೂರ ಇಡುವಂತೆ ಸಿಐಟಿಯು ಕರೆ ನೀಡಿದೆ.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಸಾವಿರಾರು ಕಾರ್ಮಿಕರು ಕೆಂಬಾವುಟದ ಮೆರವಣಿಗೆ ನಡೆಸಿದರು. ಬೆಲೆ ಏರಿಕೆ ನಿಯಂತ್ರಿಸದ, ಕಾರ್ಮಿಕ ಕಾನೂನಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದ, ಅಸಂಘಟಿತ ವಲಯದ ಕಾರ್ಮಿಕ ಕಾನೂನುಗಳ ಜಾರಿಗೆ ಕ್ರಮ ವಹಿಸಿದ ಕೇಂದ್ರದ ಯುಪಿಎ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಯುಪಿಎ ಸರ್ಕಾರವು ಎನ್.ಡಿ.ಎ. ನೀತಿಗಳನ್ನು ಅನುಸರಿಸಬಾರದೆಂದು ಆಗ್ರಹಿಸಿಲಾಯಿತು.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾಧ್ಯಕರಾದ ಕಾಂ: ವಿ.ಸುಕುಮಾರ್ ವಹಿಸಿದ್ದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ: ಧರ್ಮೇಶ್, ಎಫ್‌ಎಂಆರ್‌ಎಐನ ವೀರಣ್ಣ ಹಳ್ಳಿ, ಸತ್ಯ ನಾರಾಯಣ, ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕಿಯರ ನಂತರ ಶಾಂತಲಕ್ಷ್ಮಿ, ಅಂತೋಣಿಯಮ್ಮ, ಆಸ್ಪತ್ರೆ ಕಾರ್ಮಿಕರ ಮುಖಂಡರಾದ ಶಾಂತ, ಎಸ್‌ಎಫ್‌ಐನ ವೃಥ್ವಿ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ನೌಕರರು, ತೋಟ ಕಾರ್ಮಿಕರು, ಆಸ್ಪತ್ರೆ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಕಾಫಿ ಕ್ಯೂರಿಂಗ್ ಕಾರ್ಮಿಕರು ಭಾಗವಹಿಸಿದ್ದರು.

-ಲಿಂಗರಾಜು, ಬಿ.ಎಸ್. ಹಾಸನ

ಜಂಟಿ ಸಿ.ಇ.ಟಿ. ಪ್ರಯೋಗ


ಟಿಕೆಟಿಗೆ ಭಾರೀ ಬೇಡಿಕೆ ಇದ್ದ ಪಕ್ಷಗಳಲ್ಲಿ ಎಂ.ಎಲ್.ಎ. ಟಿಕೆಟುಗಳನ್ನು ಹೇಗೆ ಕೊಟ್ಟರು ಎಂಬ ಕುತೂಹಲ ಎಲ್ಲರಿಗೂ. ನಮ್ಮ ವರದಿಗಾರ 'ಚಿತ್ರಗುಪ್ತ' ಒಂದು 'ಸ್ಕೂಪ್' ಮಾಡಿ ಪತ್ತೆ ಹಚ್ಚಿದ್ದಾನೆ. ಅವನ ವರದಿ ಪ್ರಕಾರ ಕರ್ನಾಟಕದ ಮೂರು ಪ್ರಮುಖ ಪಕ್ಷಗಳು ಒಟ್ಟಾಗಿ ಎಂ.ಎಲ್.ಎ. ಟಿಕೆಟು ಆಕಾಂಕ್ಷಿಗಳಿಗೆ ಒಂದು ಸಿ.ಇ.ಟಿ. ಪರೀಕ್ಷೆ ಮಾಡಿದರಂತೆ. ಟಿಕೆಟು ಸಿಗದ ಒಬ್ಬ ನಾಯಕರಿಂದ ಸಿ.ಇ.ಟಿ. ಕೊಶ್ಚನ್ ಪೇಪರ್ ಸಹ ಸಂಪಾದಿಸಿದ್ದಾನೆ. ಇಲ್ಲಿದೆ ನೋಡಿ:

ಕರ್ನಾಟಕ ಎಂ.ಎಲ್.ಎ. ಸಿ.ಇ.ಟಿ. – 2008

ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು. ಎಲ್ಲಾ ಪ್ರಶ್ನೆಗಳಿಗೆ ಈ ಕೆಳಗಿನ ನಾಲ್ಕು ಉತ್ತರಗಳಲ್ಲಿ ಒಂದನ್ನು ಆರಿಸಬೇಕು. ಇದರಲ್ಲಿ ಸರಿ ಉತ್ತರ ಅಂತಿಲ್ಲ, ಅತ್ಯಂತ ಸೂಕ್ತ ಉತ್ತರ ನೀಡಬೇಕು. ಕೆಲವು ಪ್ರಶ್ನೆಗಳ ಕೆಲವು ಉತ್ತರಗಳಿಗೆ ನೆಗೆಟಿವ್ ಮಾರ್ಕ್ ಇರಬಹುದು.

ಅ. ಹೌದು ಆ. ಅಲ್ಲ/ಇಲ್ಲ
ಇ. ಗೊತ್ತಿಲ್ಲ ಈ. ಇವೆಲ್ಲಾ ನಿಮಗ್ಯಾಕೆ ?

1. ನೀವು ಭೂ-ಮಾಫಿಯಾದ ಸದಸ್ಯರಾಗಿದ್ದೀರಾ?
2. ನೀವು ಗಣಿ-ಮಾಫಿಯಾದ ಸದಸ್ಯರಾಗಿದ್ದೀರಾ ?
3. ನೀವು ಆರೆಸ್ಸೆಸ್ ಸದಸ್ಯರಾಗಿದ್ದೀರಾ ?
4. ನೀವು ಇನ್ಯಾವುದೇ ಮಾಫಿಯಾದ ಸದಸ್ಯರಾಗಿದ್ದೀರಾ ?
5. ನಿ ವ ' ೦ ೢ ಆಸ್ತಿ-ಪಾಸ್ತಿ ರೂ. 10 ಕೋಟಿಗಿಂತ ಹೆಚ್ಚಿದೆಯೆ ?
6. ನೀವು ಈ ಮೂರು ಪ್ರಮುಖ ಪಕ್ಷಗಳಲ್ಲಿ ಕನಿಷ್ಠ ಎರಡರಲ್ಲಿ ಎಂ.ಎಲ್.ಎ. ಆಗಿದ್ದೀರಾ ?
7. ನೀವು ಈ ಮೂರು ಪ್ರಮುಖ ಪಕ್ಷಗಳಲ್ಲಿ ಕನಿಷ್ಠ ಎರಡರಲ್ಲಿ ಮಂತ್ರಿ ಆಗಿದ್ದೀರಾ?
8. ನಿಮಗೆ ಕನಿಷ್ಠ 10 ಎಂ.ಎಲ್.ಎ.ಗಳನ್ನು ಕನಿಷ್ಠ 6 ತಿಂಗಳಿಗೆ ಸಫಲವಾಗಿ ಪಕ್ಷಾಂತರ ಮಾಡಿಸಿದ ಅನುಭವ ಇದೆಯೆ ?
9. ನೀವು ಕನಿಷ್ಠ ಮೂರು ಕೋಮು ದಂಗೆ ಅಥವಾ ಇತರ ದಂಗೆಗಳನ್ನು ಪ್ರಚೋದಿಸಿದ್ದೀರಾ ?
10. ನಿಮ್ಮ ವಿರುದ್ಧ ಕನಿಷ್ಟ ಐದು ಗುರುತರ ಕ್ರಿಮಿನಲ್ ಅಥವಾ ಭ್ರಷ್ಟಾಚಾರದ ಆಪಾದನೆ ಇದೆಯೆ ?
11. ನೀವು ಟಿಕೇಟು ಬಯಸುವ ಕ್ಷೇತ್ರದಲ್ಲಿ ಇರುವ ಎರಡು ದೊಡ್ಡ ಕೋಮುಗಳಲ್ಲಿ ಒಂದಕ್ಕೆ ಸೇರಿದ್ದೀರಾ ?
12. ನೀವು ಯಾವತ್ತೂ ಜನರ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ಮಾಡಿಲ್ಲ. ಅಲ್ಲವೇ ?



ಇದಕ್ಕೆ ಸರಿ ಉತ್ತರ ಯಾವುದು ? ಈ ಪರೀಕ್ಷೆಯನ್ನು ಹೇಗೆ ಬಳಸಲಾಯಿತು ? ಎಂದು ಟಿಕೆಟು ಸಿಕ್ಕಿದವರು, ಸಿಗದವರನ್ನು ತನಿಖೆ ಮಾಡಿದ 'ಚಿತ್ರಗುಪ್ತ', ಈ ಕೆಳಗಿನ ಸಂಕೀರ್ಣ ಫಾರ್ಮುಲಾವನ್ನು ಟಿಕೆಟಿಗೆ 'ಇಂಟರ್ ವ್ಯೂ' ಗೆ ಕರೆಯಲು ಬಳಸಲಾಯಿತು ಎಂದು ಕಂಡು ಹಿಡಿದಿದ್ದಾನೆ. ಆ ಮೇಲೆ ಮೂರು ಪಕ್ಷಗಳ ಹಲವು ಸುತ್ತಿನ 'ಕೌನ್ಸೆಲಿಂಗ್' ಇತ್ತಂತೆ.

ಪ್ರತೀ ಟಿಕೆಟಿಗೆ ಪ್ರತಿ ಪಕ್ಷಕ್ಕೆ ತಲಾ 10 ಅಭ್ಯರ್ಥಿಗಳಿಗೆ 'ಇಂಟರ್ ವ್ಯೂ' ಗೆ ಕರೆ ಬಂದಿದೆ. ಮೊದಲ ನಾಲ್ಕು ಪ್ರಶ್ನೆಗಳಲ್ಲಿ ಒಂದಕ್ಕೆ 'ಹೌದು' ಎಂದು ಉತ್ತರಿಸಿ, ಅತ್ಯಂತ ಹೆಚ್ಚು 'ಹೌದು' ಉತ್ತರಗಳನ್ನು ಕೊಟ್ಟ ಐವರಿಗೆ, ಮೊದಲ ನಾಲ್ಕು ಪ್ರಶ್ನೆಗಳಿಗೆ 'ಅಲ್ಲ' ಎಂದು ಉತ್ತರಿಸಿದರೂ, ಅತ್ಯಂತ ಹೆಚ್ಚು 'ಹೌದು' ಉತ್ತರಗಳನ್ನು ಕೊಟ್ಟ ಮೂವರಿಗೆ, ಎಲ್ಲಾ ಪ್ರಶ್ನೆಗಳಿಗೆ 'ಗೊತ್ತಿಲ್ಲ' ಅಥವಾ 'ಇವೆಲ್ಲಾ ನಿಮಗ್ಯಾಕೆ ?' ಎಂಬ ಉತ್ತರ ಕೊಟ್ಟವರಲ್ಲಿ ತಲಾ ಒಬ್ಬರಿಗೆ ಲಾಟರಿ ತೆಗೆದು 'ಇಂಟರ್ ವ್ಯೂ' ಗೆ ಕರೆ ಕಳಿಸಲಾಗಿತ್ತಂತೆ. ಅಂದರೆ ಎಲ್ಲಾ ಪ್ರಶ್ನೆಗಳಿಗೆ 'ಅಲ್ಲ/ಇಲ್ಲ' ಎಂಬುದು ತಪ್ಪು ಉತ್ತರವೇ ? ಹಂಗೇನಿಲ್ಲ, ಐದಕ್ಕಿಂತ ಹೆಚ್ಚು 'ಅಲ್ಲ/ಇಲ್ಲ' ಉತ್ತರ ಕೊಟ್ಟವರಿಗೆ 'ಪಕ್ಷದ ಚುನಾವಣಾ ಪ್ರಚಾರದಲ್ಲಿ ನಿಮ್ಮಂತಹ ಪ್ರಾಮಾಣಿಕ ಕಾರ್ಯಕರ್ತರ ಆವಶ್ಯಕತೆ ಇದೆ' ಎಂದು ಪಕ್ಷದ ಅಧ್ಯಕ್ಷರು ಸ್ವತಃ ಸಹಿ ಮಾಡಿದ ಪತ್ರ ಹೋಗಿದೆಯಂತೆ.

ಮೂರು ಪಕ್ಷಗಳ ಈ ಜಂಟಿ ಸಿ.ಇ.ಟಿ. ಪ್ರಯೋಗ ಅತ್ಯಂತ ಯಶಸ್ವಿಯಾಗಿದೆ ಎಂದು ಮೂರೂ ಪಕ್ಷಗಳ ಅನಧಿಕೃತ ವಕ್ತಾರರು ಹೇಳಿದ್ದಾರೆ. ಇದನ್ನು ಮುಂದುವರೆಸುವುದಾಗಿ ಹೇಳಿದ್ದಾರೆ.

○ ನಕ್ಷತ್ರಿಕ

ಚುನಾವಣಾ ಕಣ ವೀಕ್ಷಣೆ ಕೋಲಾರ

ಬೇರಿಳಿಸಲು ಯತ್ನಿಸುತ್ತಿರುವ ಬಿಜೆಪಿ ಜಾತ್ಯಾತೀತ ಶಕ್ತಿಗಳೆದ್ದೇ ಮೇಲುಗೈ


ಎಂ.ಕೆ.

ಕೋಲಾರ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಸಚಿವ ಕೆ.ಶ್ರೀನಿವಾಸಗೌಡ ಮತ್ತು ಸ್ವತಂತ್ರ ಅಭ್ಯರ್ಥಿಯಾಗಿ (ಕಾಂಗ್ರೆಸ್ ಬಂಡಾಯ ಎಂತಲೂ ಹೇಳಬಹುದು) ಸ್ಪರ್ಧಿಸಿರುವ ಬೆಂಗಳೂರು ಜಿಲ್ಲೆ ವರ್ತೂರು ಜಿಲ್ಲಾ ಪಂಚಾಯಿತಿ ಸದಸ್ಯ ವರ್ತೂರು ಪ್ರಕಾಶ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಉಳಿದಂತೆ ಬಿಜೆಪಿ ಅಭ್ಯರ್ಥಿ ಸೊಣ್ಣೇಗೌಡ, ಜೆಡಿಎಸ್ ಅಭ್ಯರ್ಥಿಯಾಗಿರುವ ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ ನಸೀರ್ ಅಹಮದ್, ಬಿಎಸ್‌ಪಿ ಅಭ್ಯರ್ಥಿ ಸಾಜಿದ್ ಮತ್ತಿತರ ಪಕ್ಷೇತರ ಅಭ್ಯರ್ಥಿಗಳು ನಾಮಕಾವಸ್ಥೆ ಮಾತ್ರ.

ಹಣ ಹಿಡಿದು

ಕೋಲಾರ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿರುವ ಕುರುಬರು ಮತ್ತು ಅಲ್ಪಸಂಖ್ಯಾತರ ನಡುವೆ ಆರಂಭದಲ್ಲಿ ಪ್ರಕಾಶ್ ಪರವಾಗಿದ್ದ ಅಲೆ ಬರಬರುತ್ತಾ ಕಡಿಮೆಯಾಗಿದೆ. ಕುರುಬ ಜನಾಂಗದವರೇ ಅವರನ್ನು ಸೋಲಿಸಲು ಪಣತೊಟ್ಟು ನಿಂತಂತೆ ಕಾಣುತ್ತಿದೆ. ಮುಸ್ಲಿಂ ಜನಾಂಗದ ನಡುವೆಯೂ ಕಳೆದ ನಗರಸಭೆ ಚುನಾವಣೆ ಸಂದರ್ಭದಲ್ಲಿದ್ದ ಕಾಣುತ್ತಿದ್ದ ಬೆಂಬಲ ಕ್ಷೀಣಿಸಿದಂತೆ ಕಾಣುತ್ತಿದೆ. ಮುಸ್ಲಿಂ ಜನಾಂಗ ನೆಲೆಸಿರುವೆಡೆ ಅಲ್ಲಲ್ಲಿ ಸುತ್ತಾಡಿದರೆ ಪ್ರಕಾಶ್ ನೀಡುವ ಹಣ ಎಷ್ಟು ದಿನ ಇರುತ್ತೆ ಸ್ವಾಮಿ ಎಂಬ ಮಾತು ಕೇಳಿಬರುತ್ತಿದೆ. ಇನ್ನು ಪ್ರಕಾಶ್ ಈ ಹಿಂದೆ ಹಣ ಹಂಚಿದ್ದ ಹುತ್ತೂರು, ಹೋಳೂರು ಹಾಗೂ ಬಂಗಾರಪೇಟೆ ಕಸಬಾ ಹೋಬಳಿಗಳು ಕೋಲಾರ ಕ್ಷೇತ್ರದಲ್ಲಿ ಇಲ್ಲವಾಗಿರುವುದು ಬಾರಿ ಹೊಡೆತ ನೀಡಿದೆ. ವೇಮಗಲ್ ಕ್ಷೇತ್ರ ಇಲ್ಲವಾದ ಮೇಲೆ ಅಲ್ಲಿನ ವೇಮಗಲ್, ನರಸಾಪುರ, ವಕ್ಕಲೇರಿ ಹೋಬಳಿಗಳು ಕೋಲಾರ ಕ್ಷೇತ್ರದ ವ್ಯಾಪ್ತಿಗೆ ಬಂದಿದ್ದು ಈ ಹಿಂದಿನ ಕೋಲಾರ ನಗರ ಮತ್ತು ಕಸಬಾ ಮಾತ್ರ ಉಳಿದುಕೊಂಡಿದೆ. ಹಾಗಾಗಿ ಈ ಹೋಬಳಿಗಳಲ್ಲಿ ಕಾಂಗ್ರೆಸ್ ಸ್ವಲ್ಪ ಹೆಚ್ಚಿನ ಪ್ರಾಬಲ್ಯ ಹೊಂದಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಜನರಲ್ಲಿ ಇನ್ನೂ ಅಲ್ಪಸ್ವಲ್ಪ ನೈತಿಕ ಮೌಲ್ಯಗಳು ಉಳಿದುಕೊಂಡಿರುವುದರಿಂದ ಸಾರಾಸಗಟಾಗಿ ಹಣಕ್ಕಾಗಿ ಬಾಯಿ ತೆರೆಯುತ್ತಾ ಕೂತಿರುವುದಿಲ್ಲ. ಅಂತಹವನ್ನು ಧಿಕ್ಕರಿಸುವ ಜನ ಇನ್ನೂ ಸಮಾಜದಲ್ಲಿದ್ದಾರೆ ಎಂಬ ಮೂಲ ಅಂಶವನ್ನೇ ಪ್ರಕಾಶ್ ಮರೆತಂತಿದ್ದಾರೆ. ಇಷ್ಟು ಮಾತ್ರವಲ್ಲ ಈ ಹಿಂದಿನಿಂದಲೂ ಉದಯಿಸುತ್ತಿರುವ ಸೂರ್ಯ ನನ್ನ ಚುನಾವಣೆ ಚಿಹ್ನೆ ಎಂದು ಪ್ರಚಾರ ಮಾಡಿಕೊಂಡು ತಿರುಗುತ್ತಿದ್ದ ಪ್ರಕಾಶ್‌ಗೆ ಹೊಲಿಗೆ ಯಂತ್ರ ನೀಡಲಾಗಿದೆ. ಚುನಾವಣೆ ನೀತಿ ಸಂಹಿತೆ ಕಠಿಣವಾಗಿರುವುದರಿಂದ ಎಲ್ಲಿಯೂ ಬ್ಯಾನರ್, ಫ್ಲೆಕ್ಸ್ ಅಥವಾ ಗೋಡೆ ಬರಹಗಳ ಮೂಲಕ ತನ್ನ ಹೊಸ ಚಿಹ್ನೆಯನ್ನು ಜನತೆಗೆ ಪರಿಚಯ ಮಾಡಿಸುವುದು ಪ್ರಕಾಶ್‌ಗೆ ತಲೆನೋವಾಗಿ ಪರಿಣಮಿಸಿದೆ. ನೀತಿ ಸಂಹಿತೆ ಇರುವವರೆಗೂ ಎಲ್ಲಿಯೂ ಹಣವನ್ನೂ ಹಂಚುವಂತಿಲ್ಲ.


ಮಾಲೂರು ಬಿಜೆಪಿಯ ಎಸ್.ಎಸ್.ಕೃಷ್ಣಯ್ಯ


ಕೆಜಿಎಫ್‌ನಲ್ಲಿ ಸ್ಪರ್ಧಿಸಿರುವ ಸಿಪಿಐ(ಎಂ)ನ ಪಿ.ತಂಗರಾಜ್

ಕೋಮುವಾದದ ವಿಷ ಹಿಂಡುವವರು

ಬಿಜೆಪಿ ಅಭ್ಯರ್ಥಿ ಸೊಣ್ಣೇಗೌಡರನ್ನು ಅವರ ಹಿಂದಿರುವವರೇ ಸೋಲಿಸಲು ಶತ ಪ್ರಯತ್ನ ನಡೆಸಿದ್ದಾರೆ. ಮೊದಲಿಗೆ ಮಾಜಿ ನಗರಸಭೆ ಅಧ್ಯಕ್ಷ ಹಾಗೂ ಹಿಂದುಳಿದ ಆಯೋಗಗಳ ಅಧ್ಯಕ್ಷರಾಗಿದ್ದ ರಾಮರಾಜುಗೆ ಬಿಜೆಪಿ ಟಿಕೆಟ್ ನೀಡಲಾಗಿತ್ತು. ಕೆಲವು ಬಿಜೆಪಿ ನುಂಗುಬಾಕರು ಅಮಾಯಕ ಸೊಣ್ಣೇಗೌಡನಿಗೆ ಟಿಕೆಟ್ ಕೊಡಿಸಿ ತಿರುಪತಿ ಯಾತ್ರೆಗೆ ಕಳುಹಿಸಲು ಸರ್ವ ಸಿದ್ಧತೆ ನಡೆಸಿದ್ದಾರೆ. ಇಲ್ಲಿ ಬಿಜೆಪಿ ಮುಖ್ಯವಾಗಿ ಅಂತರಗಂಗೆಯನ್ನೇ ಹಿನ್ನಲೆಯಾಗಿಟ್ಟು ಕೊಂಡು ಕೋಮು ದ್ವೇಷ ಬೆಳೆಸುತ್ತಿದೆ. ಹಿಂದೆ ಕೋಲಾರ ನಗರದಲ್ಲಿ ಕೋಮುಗಲಭೆ ಹುಟ್ಟು ಹಾಕಿತ್ತು. ಅಂತಿಮವಾಗಿ ಜನ ಯಾರ ಕೊರಳಿಗೆ ಜಯಮಾಲೆ ಹಾಕುತ್ತಾರೆ ನೋಡಬೇಕು.

ಶ್ರೀನಿವಾಸಪುರ ಕ್ಷೇತ್ರದಲ್ಲಿ ಎಂದಿನಂತೆ ವೆಂಕಟಶಿವಾರೆಡ್ಡಿ ಮತ್ತು ರಮೇಶ್‌ಕುಮಾರ್ ನಡುವೆ ಜಿದ್ದಾಜಿದ್ದಿ ಆರಂಭವಾಗಿದೆ. ಇಲ್ಲಿ ಪಕ್ಷಗಳೂ ಮುಖ್ಯವಲ್ಲ. ತಾಲ್ಲೂಕಿನ ಅಭಿವೃದ್ಧಿಯೂ ಮುಖ್ಯವಲ್ಲ. ಉಳಿದಂತೆ ಬಿಜೆಪಿಯ ಲಕ್ಷ್ಮಣಗೌಡ, ಬಿಎಸ್‌ಪಿಯಿಂದ ಸ್ಪರ್ಧಿಸಿರುವ ಮಂಜುನಾಥ ಮತ್ತಿತರ ಸ್ವತಂತ್ರ ಅಭ್ಯರ್ಥಿಗಳು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ರಾಯಲಪಾಡು, ನೆಲವಂಕಿ ಹೋಬಳಿಗಳಲ್ಲಿ ಇಬ್ಬರ ನಡುವೆಯೂ ಸಮಬಲದ ಹೋರಾಟ ಇದ್ದರೆ, ರೋಣೂರು ಮತ್ತು ಸುಗಟೂರಿನಲ್ಲಿ ರಮೇಶ್‌ಕುಮಾರ ಪರ ಸ್ವಲ್ಪ ಒಲವು ಇದೆ. ಆರಂಭದಲ್ಲಿ ಹೋಳೂರು ಮತ್ತು ಸುಗಟೂರು ಹೋಬಳಿಗಳಲ್ಲಿ ಸೃಷ್ಟಿಯಾಗಿದ್ದ ಒಕ್ಕಲಿಗರೆಂಬ ಜಾತಿ ಅಲೆ ಬರಬರುತ್ತಾ ಕ್ಷೀಣಿಸುತ್ತಿದೆ. ಶ್ರೀನಿವಾಸಪುರ ಪಟ್ಟಣದಲ್ಲಿ ಮುಸ್ಲಿಂ ಸಮುದಾಯದ ಸರಿಸುಮಾರು 20 ಸಾವಿರ ಮತಗಳಿದ್ದು, ನಿರ್ಣಾಯಕ ಪಾತ್ರ ವಹಿಸುತ್ತವೆ. ಅವರ ಒಲವು ಎರಡೂ ಕಡೆ ಸಮಾನಾಂತರವಾಗಿದೆ. ಮತದಾನದ ಮುಂದೆ ಯಾವ ಬದಲಾವಣೆ ಕಾಣುವುದೆಂದು ಹೇಳಲಾಗುತ್ತಿಲ್ಲ. ಶ್ರೀನಿವಾಸಪುರ ಕ್ಷೇತ್ರವನ್ನು ಯಾವುದೋ ಒಂದು ಪಕ್ಷದ ಮೂಲಕ ಈ ಇಬ್ಬರೂ ಮುಖಂಡರು ಸತತವಾಗಿ ಪ್ರತಿನಿಧಿಸುತ್ತಿದ್ದಾರೆ. ಮಾವು, ತರಕಾರಿಗೆ ಹೆಸರುವಾಸಿಯಾಗಿದ್ದರೂ ಅದಕ್ಕೆ ಸಂಬಂಧಿಸಿದ ಕಾರ್ಖಾನೆಯೊಂದನ್ನು ಆರಂಭಿಸಿ ನ್ಯಾಯಯುತ ದರ ಕೊಡಿಸುವದರೊಂದಿಗೆ ಉದ್ಯೋಗಾವ ಕಾಶಗಳನ್ನು ಸೃಷ್ಟಿಸುವ ಗೋಜಿಗೆ ಯಾರೂ ಹೋಗಿಲ್ಲ. ಈ ಸಮಸ್ಯೆಗಳನ್ನು ಜನತೆ ಅರಿತು ಅದರ ಆಧಾರದಲ್ಲಿ ಮತ ಚಲಾಯಿಸುವರೇ ಕಾದು ನೋಡಬೇಕು. ಕೋಲಾರ ಜಿಲ್ಲೆಯಲ್ಲಿ ಎರಡೂ ಪಕ್ಷಗಳಲ್ಲಿ ಬಂಡಾಯದ ಬಿಸಿ ಇಲ್ಲದಿರುವ ಒಂದೇ ಒಂದು ಕ್ಷೇತ್ರ ಎಂದರೆ ಶ್ರೀನಿವಾಸಪುರ.

ಕಾವಲಿಯಲ್ಲಿ ಜನ

ಕಳೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರವಾಗಿದ್ದ ಈಗ ಮೀಸಲು ಕ್ಷೇತ್ರವಾಗಿರುವ ಮುಳಬಾಗಿಲಿನಲ್ಲಿ ಭ್ರಷ್ಟ ಅಧಿಕಾರಿಗಳದೇ ದರ್ಬಾರು. ನಿವೃತ್ತ ಎಂಜಿನಿಯರುಗಳು, ಅಧಿಕಾರಿಗಳು ತಮ್ಮ ಅದೃಷ್ಟ ಪರೀಕ್ಷೆಗೆ ಜನತೆ ಮುಂದೆ ತಲೆತಗ್ಗಿಸಿ ನಿಂತಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಯಾಗಿ ಅಂಬರೀಷ್, ಜೆಡಿಎಸ್ ಅಭ್ಯರ್ಥಿಯಾಗಿ ಮುನಿಆಂಜನಪ್ಪ, ಬಿಜೆಪಿ ಅಭ್ಯರ್ಥಿಯಾಗಿ ಮುನಿಕೃಷ್ಣಪ್ಪ ಮತ್ತು ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ದೊಡ್ಡಚೌಡಪ್ಪ ಸ್ಪರ್ಧೆಯಲ್ಲಿದ್ದಾರೆ ಹಾಗೂ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ವೆಂಕಟಮುನಿ ಸ್ಪರ್ಧೆಯಲ್ಲಿದ್ದಾರೆ. ಬಿಜೆಪಿ ಅಧಿಕೃತ ಮತ್ತು ಅನಧಿಕೃತ ಅಭ್ಯರ್ಥಿಗಳಿಬ್ಬರೂ ಕಣದಿಂದ ನಿವೃತ್ತರಾಗುವ ಯೋಜನೆ ರೂಪಿಸಿದ್ದರು. ಆದರೆ ಅಂತಿಮ ಗಳಿಕೆಯಲ್ಲಿ ಬಿಜೆಪಿ ಅಧಿಕೃತ ಮತ್ತು ಬಂಡಾಯ ನಡುವೆ ಉಂಟಾದ ಭಿನ್ನಾಭಿಪ್ರಾಯದಿಂದಾಗಿ ಇಬ್ಬರೂ ಕಣದಲ್ಲಿರುವಂತಾಗಿದೆ. ಎಂ.ವಿ.ವೆಂಕಟಪ್ಪ ಅಧಿಕೃತ ಅಭ್ಯರ್ಥಿಯನ್ನು ಬೆಂಬಲಿಸುತ್ತಿದ್ದರೆ, ಕೇಂದ್ರ ಸಚಿವ ಕೆ.ಹೆಚ್.ಮುನಿಯಪ್ಪ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗೆ ಪರೋಕ್ಷವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಇವರಿಬ್ಬರ ತಿಕ್ಕಾಟದಲ್ಲಿ ಯಾರು ಗೆಲ್ಲುವರೋ ನೋಡಬೇಕು. ಈ ಅಧಿಕಾರಗಳೋ ತಮ್ಮ ಇಡೀ ಸರ್ಕಾರಿ ಸೇವೆಯಲ್ಲಿ ಸಾರ್ವಜನಿಕ ಹಣ ಲೂಟಿ ಮಾಡಿದ್ದೇ ಇವರ ಇತಿಹಾಸ. ನಿವೃತ್ತ ಅಧಿಕಾರಿಗಳು ಊಹಿಸಲೂ ಅಸಾಧ್ಯ. ಇವರಿಂದ ಕ್ಷೇತ್ರದ ಅಭಿವೃದ್ಧಿ ಎಷ್ಟು ಮಾತ್ರವಾಗುತ್ತದೆ ಎಂದು ಯಾರಾದರೂ ಅರ್ಥೈಸಬಹುದಾಗಿದೆ. ಮೂರು ಅವಧಿಗಳಲ್ಲಿ ಇತರ ಪಕ್ಷಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಅವಧಿಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳೇ ಪ್ರತಿನಿಧಿಸಿರುವ ಈ ಕ್ಷೇತ್ರ ರಾಜ್ಯದಲ್ಲೇ ಅತ್ಯಂತ ಹಿಂದುಳಿದ ಕ್ಷೇತ್ರಗಳ ಪಟ್ಟಿಗೆ ಸೇರಿದೆ. ಈ ಹಿಂದೆ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಎಂ.ವಿ.ವೆಂಕಟಪ್ಪ ಸ್ಪೀಕರ್ ಆದರೂ, ಆಲಂಗೂರು ಶ್ರೀನಿವಾಸ ಜಿಲ್ಲಾ ಉಸ್ತುವಾರಿ ಸಚಿವರಾದರೂ ಕ್ಷೇತ್ರ ಮಾತ್ರ ಎಳ್ಳಷ್ಟೂ ಅಭಿವೃದ್ಧಿ ಕಂಡಿಲ್ಲ. ಎಲ್ಲಿ ನೋಡಿದರೂ ಕಿತ್ತು ಹೋದ ರಸ್ತೆಗಳೇ, ಕುಡಿಯಲು ನೀರಿಲ್ಲದ ಗ್ರಾಮಗಳೇ, ಮುಳಬಾಗಿಲು ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ವಿಸ್ತರಿಸಿದ್ದರೂ ದೊಡ್ಡ ಗ್ರಾಮದಂತೆ ಕಾಣುತ್ತ ಅಷ್ಟೆ. ಕೃಷಿಯೇ ಇಲ್ಲಿನ ಜನರ ಬದುಕು.


ಕೆಜಿಎಫ್ ಜೆಡಿಎಸ್ ನ ಭಕ್ತವತ್ಸಲಂ


ಕೋಲಾರ ಕಾಂಗ್ರೆಸ್‌ನ ಕೆ.ಶ್ರೀನಿವಾಸಗೌಡ

ಜಾಗತೀಕರಣದ ನಂತರವಂತೂ ಇಲ್ಲಿನ ಜನತೆಯ, ಅದರಲ್ಲೂ ರೈತರ ಬದುಕು ಕಾವಲಿನಲ್ಲಿ ಬೆಂದ ರೊಟ್ಟಿಯಂತಾಗಿದೆ. ತಾಲ್ಲೂಕಿನಲ್ಲಿ ಕುರುಡು ಮಲೆ, ನರಸಿಂಹತೀರ್ಥ, ವಿರೂಪಾಕ್ಷ, ದೊಡ್ಡ ಆಂಜನೇಯಸ್ವಾಮಿ ದೇವಸ್ಥಾನ ಸೇರಿದಂತೆ ಹಲವಾರು ಐತಿಹಾಸಿಕ ಪ್ರವಾಸಿ ತಾಣಗಳಿದ್ದರೂ ಕ್ಷೇತ್ರವನ್ನು ಪ್ರತಿನಿಧಿಸಿದ್ದವರು ಅವುಗಳ ಅಭಿವೃದ್ಧಿಗೆ ಮುಂದಾಗಿಲ್ಲ.

ಸಿಪಿಐ(ಎಂ) ಹೋರಾಟ

ಕೆಜಿಎಫ್ ನಲ್ಲಿ ಮೀಸಲು ಕ್ಷೇತ್ರದಲ್ಲಿ ಜಾತ್ಯಾತೀತ ಜನತಾದಳದಿಂದ ಭಕ್ತವತ್ಸಲಂ, ಆರ್‌ಪಿಐನಿಂದ ರಾಜೇಂದ್ರನ್ (ಇಬ್ಬರೂ ಮಾಜಿ ಶಾಸಕರು) ಸಿಪಿಎಂ ನಿಂದ ಕಾಂ: ಪಿ.ತಂಗರಾಜ್, ಬಿಜೆಪಿಯಿಂದ ಎನ್.ಸಂಪಂಗಿ ಮತ್ತು ಕಾಂಗ್ರೆಸ್‌ನಿಂದ ಮಂಜುನಾಥ್ ಸ್ಪರ್ಧಿಸಿದ್ದಾರೆ. ಭಕ್ತವತ್ಸಲಂ ಮತ್ತು ರಾಜೇಂದ್ರನ್ ಮತ್ತೆ ವಿಧಾನಸಭೆ ಪ್ರವೇಶಿಸಲು ತೀವ್ರ ಹಣಾಹಣಿ ನಡೆಸಿದ್ದಾರೆ ಇವರ ಮಧ್ಯೆ ದಲಿತ ಮುಖಂಡ ಎಂದು ಹೇಳಿಕೊಂಡು ಅಂಬೇಡ್ಕರ್ ಸಿದ್ದಾಂತಗಳಿಗೆ ತರ್ಪಣ ಬಿಟ್ಟು ಅವರದೇ ಪೋಟೋ ಹಾಕಿಕೊಂಡು ಬಿಜೆಪಿ ಪರವಾಗಿ ನಿಂತಿರುವ ಸಂಪಂಗಿ ಬೆಂಗಳೂರಿನಲ್ಲಿ ಗಳಿಸಿರುವ ಹಣವನ್ನು ತೊಡಗಿಸಿ ಜನರ ಮುಂದೆ ನಿಂತಿದ್ದಾರೆ. ಇನ್ನು ಕಾಂಗ್ರೆಸ್‌ನ ಮಂಜುನಾಥ್ ಅಷ್ಟೇನೂ ಪಳಗಿರುವ ಕುಳ ಅಲ್ಲ. ಯುವಕರಿಗೆ ಟಿಕೆಟ್ ನೀಡಬೇಕೆಂಬ ರಾಹುಲ್ ಗಾಂಧಿಯವರ ಕೃಪಾಕಟಾಕ್ಷದ ಮೇರೆಗೆ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾನೆ. ಇವರನ್ನು ಹೊರತುಪಡಿಸಿದರೆ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಪಿ.ತಂಗರಾಜ್ ವಿದ್ಯಾರ್ಥಿ ದೆಸೆಯಿಂದಲೂ ಹಲವಾರು ಹೋರಾಟಗಳ ಮೂಲಕ ಬೆಳೆದುಬಂದವರು. ಹಿಂದೆ ಸಿಪಿಎಂನ ಶಾಸಕರಾಗಿ ಆಯ್ಕೆಯಾಗಿದ್ದರು. ಸ್ವಾತಂತ್ರ ಪೂರ್ವದಿಂದಲೂ ಕಮ್ಯೂನಿಸ್ಟರ ದಟ್ಟ ಪ್ರಭಾವದಲ್ಲಿದ್ದ ಕೆಜಿಎಫ್ ಕ್ಷೇತ್ರದಲ್ಲಿ ಈಗಲೂ ಚಳುವಳಿಯ ಆಧಾರದಲ್ಲಿ ಕಣಕ್ಕಿಳಿದಿದ್ದಾರೆ. ಅಲ್ಲಿನ ಗಣಿ ಕಾರ್ಮಿಕರು, ಬೆಮೆಲ್ ಕಾರ್ಮಿಕರು ಪ್ರಮುಖ ಮತದಾರರಾಗಿದ್ದಾರೆ. ಈ ಹಿಂದೆ ಬೇತಮಂಗಳ ಕ್ಷೇತ್ರದಲ್ಲಿದ್ದ ಬೇತಮಂಗಳ ಮತ್ತು ಕ್ಯಾಸಂಬಳ್ಳಿ ಹೋಬಳಿಗಳು ಈಗ ಕೆಜಿಎಫ್‌ಗೆ ಸೇರಿವೆ. ಈ ಹೋಬಳಿಗಳಲ್ಲಿ ಸಂಘಟಿಸಿರುವ ಅಕ್ಷರದಾಸೋಹ, ಅಂಗನವಾಡಿ, ಗ್ರಾಮ ಪಂಚಾಯಿತಿ ನೌಕರರು ಸಹ ಹೆಚ್ಚಿನ ಪ್ರಮಾಣದಲ್ಲಿ ಮತ ಚಲಾಯಿಸುವುದರಿಂದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಗಣನೀಯ ಪ್ರಮಾಣದ ಮತಗಳನ್ನು

ಪುಟ 7 ಕ್ಕೆ

ಇಮ್ಮಡಿಸಿದ ಉತ್ಸಾಹ : ಉತ್ತಮ ಜನಸ್ಪಂದನ

ಮಂಗಳೂರು ದಕ್ಷಿಣ ಮತ್ತು ಮಂಗಳೂರು ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳಿಗೆ ಉತ್ತಮ ಪ್ರತಿಕ್ರಿಯೆ

ಕ್ಷೇತ್ರ ಪುನರ್ ವಿಂಗಡಣೆಗೊಂಡ ನಂತರ ದ.ಕ. ಜಿಲ್ಲೆಯಲ್ಲಿ ಒಟ್ಟು ಸ್ಥಾನಗಳ ಸಂಖ್ಯೆ ಎಂಟು. ವಿಟ್ಲ ಕ್ಷೇತ್ರವನ್ನು ವಿಂಗಡಿಸಿ ಮಂಗಳೂರು ಮತ್ತು ಬಂಟ್ವಾಳಕ್ಕೆ ಸೇರಿಸಲಾಗಿದೆ. ಸಿಪಿಐ(ಎಂ) ಈ ಮೊದಲಿನ ಉಳ್ಳಾಲ ಕ್ಷೇತ್ರದ ನೇತ್ರಾವತಿ ನದಿಯ ಹತ್ತಿರ ದಕ್ಷಿಣದ ಭಾಗವಾದ ಮಂಗಳೂರು ಎಂಬ ನೂತನ ಹೆಸರಿನ ಕ್ಷೇತ್ರದಲ್ಲೂ, ಭೌಗೋಳಿಕವಾಗಿ ಮಧ್ಯ ಭಾಗವಾದ 38 ಮಹಾನಗರ ಪಾಲಿಕೆ ವಾರ್ಡ್‌ಗಳಿರುವ ಮಂಗಳೂರು ದಕ್ಷಿಣ ಕ್ಷೇತ್ರಕ್ಕೆ ಸ್ಪರ್ಧಿಸುತ್ತಿದೆ. ಕ್ರಮವಾಗಿ ಕೆ.ಯಾದವ ಶೆಟ್ಟಿ ಮತ್ತು ನ್ಯಾಯವಾದಿ ಯಶವಂತ ಮರೋಳಿ ಯವರು ಸಿಪಿಐ(ಎಂ)ನ ಅಭ್ಯರ್ಥಿಗಳು.

ಮಂಗಳೂರು ದಕ್ಷಿಣ ಕ್ಷೇತ್ರ: ಇಲ್ಲಿ ಸಿಪಿಐ(ಎಂ)ನ ಅಭ್ಯರ್ಥಿಯಾದ ಯಶವಂತ ಮರೋಳಿಯವರು ಮಾನವತಾ ವೇದಿಕೆ ಮತ್ತು ಅಖಿಲ ಭಾರತ ವಕೀಲರ ಸಂಘದ ಜಿಲ್ಲಾಧ್ಯಕ್ಷರಾಗಿ ಬಡವರ ವಕೀಲರೆಂದೇ ಪ್ರಖ್ಯಾತರು.

ಯೋಜನಾಬದ್ಧವಾದ ಚುನಾವಣಾ ಕೆಲಸಗಳಿಂದಾಗಿ ಈಗಾಗಲೇ ಮಾಧ್ಯಮಗಳು ಮತ್ತು ಇತರ ಪಕ್ಷದ ಅಭ್ಯರ್ಥಿಗಳಿಂದ ಸಾಕಷ್ಟು ಮುಂದೆ ಸಾಗಿದ್ದಾರೆಂಬ ಸಾರ್ವತ್ರಿಕ ಅಭಿಮತ ಕೇಳಿ ಬರುತ್ತಿದೆ. ಸಂಘಟನೆ ಇರುವ ಮತ್ತು ಇಲ್ಲದೆ ಇರುವ ಕಡೆಗಳಲ್ಲಿ ಚುನಾವಣಾ ಸಮಿತಿ ರೂಪಿಸಲು ಸಾಧ್ಯವಾಗಿದ್ದು ಈಗಾಗಲೇ ಮನೆ ಮನೆ ಭೇಟಿ ನಡೆದಿದೆ. ಪ್ರತ್ಯೇಕ ಪ್ರತ್ಯೇಕವಾಗಿ ಕುಟುಂಬ ಸಭೆ, ವಕೀಲರ ಸಭೆ, ಕಕ್ಷಿಗಾರರ ಸಭೆ ಹಾಗೂ ಅಲ್ಪಸಂಖ್ಯಾತ ಮುಂದಾಳುಗಳ ಸಭೆಗಳನ್ನು ನಡೆಸಿ ಸಿಪಿಐ(ಎಂ) ಪರ ಮತಯಾಚನೆಯನ್ನು ನಡೆಸಲಾಗುತ್ತಿದೆ ಕಾಂಗ್ರೆಸ್ಸಿನಿಂದ ಐವನ್ ಡಿಸೋಜಾ ಅಭ್ಯರ್ಥಿಯಾಗಿರುವುದರಿಂದ ಒಂದು ದೊಡ್ಡ


ಚುರುಕಿನ ಪ್ರಚಾರ: ಯಶವಂತ ಮರೋಳಿ ಮತ್ತು ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರು

ವಿಭಾಗ ತಟಸ್ಥವಾಗಿರುವುದೇ ಅಲ್ಲದೆ ಸಿಪಿಐ(ಎಂ)ನ್ನು ಬೆಂಬಲಿಸುವ ಸಾಧ್ಯತೆ ಇದೆ. ಮೂರು ಬಾರಿ ಗೆದಿದ್ದ ಬಿಜೆಪಿಯ ಯೋಗೀಶ್ ಭಟ್‌ರವರ ವಿರುದ್ಧ ಆಕ್ರೋಶ ಬಂಡಾಯ ಕೇಳಿ ಬರುತ್ತಿದೆ. ಸಿಪಿಐ(ಎಂ)ನ ಅಭ್ಯರ್ಥಿ ಅತ್ಯಂತ ಉತ್ತಮ ಅಭ್ಯರ್ಥಿ ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿದೆ. ಇಲ್ಲಿ ಸಿಪಿಐ(ಎಂ)ಗೆ ಜನತಾದಳ(ಎಸ್) ಸಿಪಿಐ ಹಾಗೂ ಸಮಾಜವಾದಿ ಪಕ್ಷ ಬೆಂಬಲ ಘೋಷಿಸಿವೆ. ಯಶವಂತ ಮರೋಳಿಯವರನ್ನು ಶತಾಯಗತಾಯ ವಿಜಯಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಆರ್‌ಎಸ್‌ಎಸ್ ನ ಸಿದ್ಧಾಂತ ರಾಜ್ಯಕ್ಕೆ ಪ್ರವೇಶ ಗೈದ ಪ್ರದೇಶವೇ ಮಂಗಳೂರಿನ ಕಾರ್‌ಸ್ಟ್ರೀಟ್, ಡೊಂಗರಕೇರಿ, ಮಣ್ಣುಗುಡ್ಡೆ ಮೊದಲಾದ ಪ್ರದೇಶಗಳನ್ನೊಳಗೊಂಡ ಸ್ಥಳದಿಂದಲೇ ಕೆಂಬಾವುಟ ವಿಜಯ ಪತಾಕೆ ಹಾರಿಸಲೇಬೇಕು ಎಂಬ ಉದ್ದೇಶದಿಂದ ಈ ಪ್ರದೇಶಗಳಲ್ಲಿ ಚುನಾವಣಾ ಸಮಿತಿ ರಚಿಸಲು ಸಾಧ್ಯವಾಗಿರುವುದೇ ಕಾರ್ಯಕರ್ತರಿಗೆ ಸ್ಫೂರ್ತಿ ನೀಡಿರುವ ಅಂಶವಾಗಿದೆ.

ಮಂಗಳೂರು ಕ್ಷೇತ್ರ : ಇಲ್ಲಿ ಕೆ.ಯಾದವಶೆಟ್ಟಿ ಅಭ್ಯರ್ಥಿಯಾಗಿದ್ದು ಜನಸಾಮಾನ್ಯರ ಮಧ್ಯೆ ಅಲ್ಪಸಂಖ್ಯಾಂತರ ಮಧ್ಯ ಸಾಕಷ್ಟು ಅನುಕಂಪ, ಪ್ರಭಾವಗಳಿಸಿರುವುದೂ ಸಹ ಪಕ್ಷದ ಸಿಪಿಐ(ಎಂ) ಪ್ರಚಾರಕ್ಕೆ ಸಹಕಾರಿಯಾದ ಅಂಶವಾಗಿದೆ. ಈ ಕ್ಷೇತ್ರದ 14 ಗ್ರಾಮಗಳಲ್ಲಿ ಪಕ್ಷ ಸಂಘಟನೆಗಳು ಇದ್ದು ಚುನಾವಣೆಯ ವಿವಿಧ ಹಂತದ ಕೆಲಸಗಳಲ್ಲಿ ಹೆಚ್ಚಿನ ಅನುಭವಗಳನ್ನು ಹೊಂದಿದ್ದು ರಣತಂತ್ರದೊಂದಿಗೆ ದುಡಿಯುತ್ತಿದ್ದಾರೆ. ವಿಟ್ಲ, ಫಿರ್ಕಾದ ಕೆಲವು ಗ್ರಾಮಗಳು, ಹಾಗೂ ಈ ಮೊದಲಿನ ಬಂಟ್ವಾಳ ಕ್ಷೇತ್ರದ ಕೆಲವು ಗ್ರಾಮಗಳೂ ಈ ಕ್ಷೇತ್ರಕ್ಕೆ ಒಳಪಟ್ಟಿದ್ದು ಹಾಲಿ ಶಾಸಕರುಗಳಾಗಿ ಕಾಂಗ್ರೆಸ್ಸಿನ ಯು.ಟಿ.ಖಾದರ್ (ಉಳ್ಳಾಲ) ಮತ್ತು ಬಿಜೆಪಿಯ ಪದ್ಮನಾಭರವರುಗಳಲ್ಲದೇ, ಜೆಡಿಎಸ್, ಜೆಡಿಯು ಹಾಗೂ ಬಿಎಸ್ಪಿ ಅಭ್ಯರ್ಥಿಗಳಿದ್ದಾರೆ. ಆದರೆ ಸಿಪಿಐ(ಎಂ) ಬಿಜೆಪಿ, ಕಾಂಗ್ರೆಸ್, ಮಧ್ಯೆ ತ್ರಿಕೋನ ಸ್ಪರ್ಧೆ ನಡೆಯಲಿದೆ.

– ಕೃಷ್ಣಪ್ಪ ಕೊಂಚಾಡಿ

ಚುನಾವಣಾ ಪ್ರಚಾರ ಭಾಷಣಗಳನ್ನು ಕೇಳಿ, ನೋಡಿ

ದೂರದರ್ಶನ	05.05.08	ರಾತ್ರಿ 7.15 - 7.45	ವಿಜೆಕೆ ನಾಯರ್
	06.05.08	ರಾತ್ರಿ 7.15 - 7.25	ಎಸ್.ವೈ.ಗುರುಶಾಂತ್
	12.05.08	ರಾತ್ರಿ 7.15 - 7.25	ಕೆ.ನೀಲಾ
	19.05.08	ರಾತ್ರಿ 7.15 - 7.25	ಮಾರುತಿಮಾನ್ಪಡೆ
ಆಕಾಶವಾಣಿ	05.05.08	ರಾತ್ರಿ 9.30 - 9.45	ನಿತ್ಯಾನಂದಸ್ವಾಮಿ
	13.05.08	ರಾತ್ರಿ 9.30 - 9.45	ಬಿ.ಮಾಧವ
	17.05.08	ರಾತ್ರಿ 7.45 - 7.55	ಎಸ್. ವರಲಕ್ಷ್ಮಿ
	19.05.08	ರಾತ್ರಿ 9.30 - 9.45	ಜಿ.ಎನ್.ನಾಗರಾಜ್

ಈ ಮೇಲ್ಕಂಡ ಸಮಯಗಳಲ್ಲಿ ದೂರದರ್ಶನ ಮತ್ತು ಆಕಾಶವಾಣಿಗಳಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಮುಖಂಡರ ಚುನಾವಣಾ ಪ್ರಚಾರ ಕಾರ್ಯಕ್ರಮಗಳಿರುತ್ತವೆ. ಗಮನಿಸಿ.

ಮುಸ್ಲಿಮರ ಅಭಿವೃದ್ಧಿಗೆ ಅಡ್ಡಿ ವಿಷಾದಕರ

- ಸೈಯದ್ ಅಬ್ದುಲ್ ಜಬ್ಬಾರ್

ದೇಶದಲ್ಲಿ 13.80 ಕೋಟಿ ಮುಸ್ಲಿಮರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿರುವ ಸಾಚಾರ್ ಸಮಿತಿ ವರದಿಯನ್ನು ಜಾರಿಗೊಳಿಸಬೇಕೆಂದು ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿ ಸಂಯೋಜಿಸಿದ್ದ ಮುಸ್ಲಿಮ್ ಅಲ್ಪ ಸಂಖ್ಯಾತರ ಹಕ್ಕುಗಳಿಗಾಗಿ ನಡೆದ ಸಮಾವೇಶ ಒತ್ತಾಯಿಸಿದೆ.

ಏಪ್ರಿಲ್ 9 ರಂದು ಕನ್ನಡ ಭವನದಲ್ಲಿ ನಡೆದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಆಂಧ್ರಪ್ರದೇಶದ ಅವಾಜ್ ಸಂಘಟನೆಯ ಸೈಯದ್ ಅಬ್ದುಲ್ ಜಬ್ಬಾರ್ ಅವರು ಸ್ವಾತಂತ್ರ್ಯ ಬಂದು 6 ದಶಕ ಕಳೆದರೂ ಮುಸ್ಲಿಮರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಕೆಲ ರಾಜಕೀಯ ಪಕ್ಷಗಳು ಪ್ರಜ್ಞಾಪೂರ್ವಕವಾಗಿ ಮುಸ್ಲಿಮರ ಅಭಿವೃದ್ಧಿಗೆ ಅಡ್ಡಿಪಡಿಸುತ್ತಿದ್ದಾವೆ ಎಂದು ಖೇದ ವ್ಯಕ್ತಪಡಿಸಿದರು. ಮುಸ್ಲಿಮರ ಅಭಿವೃದ್ಧಿಯಾಗಬೇಕಾದರೆ ಸಾಚಾರ್ ಸಮಿತಿ ವರದಿ ಅನುಷ್ಠಾನಗೊಳ್ಳಬೇಕೆಂದು ಆಗ್ರಹಿಸಿದರು. ಮುಸ್ಲಿಮರ ಹೆಸರನ್ನು ಬಳಸಿ ದೇಶದಲ್ಲಿ ಸಮಾಜಘಾತುಕ ಚಟುವಟಿಕೆ ನಡೆಸುತ್ತಿರುವವರಿಗೆ ಮುಸ್ಲಿಂ ಸಮುದಾಯದ ಬೆಂಬಲವಿಲ್ಲ ಎಂದೂ ಸಹ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.



ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮಾರುತಿ ಮಾನ್ಪಡೆ ಕಾಂಗ್ರೆಸ್ ಪಕ್ಷ ಮೃದು ಹಿಂದುತ್ವ ವಾದ ಅಳವಡಿಸಿಕೊಂಡಿದ್ದ ರಿಂದಲೇ ಬಿಜೆಪಿ ಪ್ರಬಲವಾಗಿ ಬೆಳೆಯಲು ಕಾರಣವಾಗಿದೆ. ಗುಜರಾತ್ ಮುಂಬೈ, ಕೋಮು ಗಲಭೆಗಳು ನಡೆದರೂ ಕಾಂಗ್ರೆ ಪ್ರತಿಭಟಿಸುವ ಗೋಜಿಗೆ ಹೋಗದಿರುವುದು ವಿಪರ್ಯಾಸವೆಂದರು. ಮುಸ್ಲಿಮರ ಬೆಳವಣಿಗೆ ಕಾಂಗ್ರೆಸ್‌ಗೆ ಬೇಕಾಗಿಲ್ಲ. ಅದಕ್ಕಾಗಿ ಸಾಚಾರ್ ಸಮಿತಿ ವರದಿ ಜಾರಿಗೊಳಿಸಲು ಮೀನಾಮೇಷ ಎಣಿಸುತ್ತಿದೆ ಎಂದು ಟೀಕಿಸಿದರು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಪ್ರಭಾವವಿರುವ 140 ಮತ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸುವುದೇ ನಮ್ಮ ಮೂಲ ಧ್ಯೇಯವಾಗಿದೆ. ಈ ಸಂಬಂಧ ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಣಯ ಅಂಗೀಕರಿಸಿದೆ ಎಂದರು. ದಲಿತರ ಅಭಿವೃದ್ಧಿಗೆ ಜಾರಿ ಮಾಡಿರುವ ಯೋಜನೆಗಳಂತೆ ಮುಸ್ಲಿಮರ ಅಭಿವೃದ್ಧಿಗೆ ಯೋಜನೆ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಅಮಾನುಲ್ಲಾಖಾನ್ ಮಾತನಾಡಿ ಮುಸ್ಲಿಮರಲ್ಲಿ ಪದವಿ ಓದಿದವರು ತೀರಾ ಕಡಿಮೆ, ಆಟೋ ಚಾಲನೆ, ಗ್ಯಾರೇಜ್ ಕೆಲಸ, ತರಕಾರಿ ಮಾರಾಟ ಸೇರಿದಂತೆ ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಾ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ. ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ನಿವೃತ್ತ ನ್ಯಾಯಾಧೀಶ ರಾಜೇಂದ್ರ ಸಿಂಗ್ ಸಾಚಾರ್ ಅವರು ಮುಸ್ಲಿಮರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಗೆ ವರದಿಯಲ್ಲಿ ಮಾರ್ಗೋಪಾಯಗಳನ್ನು ಸೂಚಿಸಿದ್ದು ವರದಿಯನ್ನು ಜಾರಿಗೊಳಿಸಿ ಮುಸ್ಲಿಮರ ಏಳಿಗೆಗಾಗಿ ಸಂಕಲ್ಪ ಮಾಡಬೇಕೆಂದು ಒತ್ತಾಯಿಸಿದರು. ಮುಸ್ಲಿಮರು ಜಾಗೃತರಾಗಬೇಕೆಂದು ಸಲಹೆ ನೀಡಿದರು.

ಸಮಾವೇಶದ ಕೊನೆಯಲ್ಲಿ ಸಾಚಾರ್ ಸಮಿತಿಯ ವರದಿಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಬೇಕೆಂದು ಆಗ್ರಹಿಸಿ ನಿರ್ಣಯ ಕೈಗೊಳ್ಳಲಾಯಿತು.

ಈ ಸಮಾವೇಶದಲ್ಲಿ ಶೇಖ ಅಬ್ದುಲ್ ಸುಭಾನ್, ರಶೀದ್ ಜಾಮೀದ್ಸಾಬ್, ಮಂಜೂರ ಪಟೇಲ್ ಹೆಬಳಿ, ಜೈಯಲಾಲ ತೋಟದಮನಿ, ಮೆಹರಾಜ ಪಟೇಲ್ ಉಪಸ್ಥಿತರಿದ್ದರು.

ಸತ್ಯಬೋಧ ಕಾಗಲಕರ
ಗುಲ್ಬರ್ಗಾ

ಬಿಜೆಪಿ ಪ್ರಣಾಳಿಕೆ

ನಯವಂಚಕ, ಶ್ರೀಮಂತ ಪರ, ಮುಚ್ಚಿಟ್ಟ ಕೋಮುವಾದಿ ಕಾರ್ಯಸೂಚಿ

64 ಪುಟಗಳಷ್ಟು ದೀರ್ಘವಾದ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆ ಎನ್ನುವುದು ಎಷ್ಟು ಮುಖ್ಯವೋ ಅದರಲ್ಲಿ ಹೇಳದೇ ಬಿಟ್ಟಿರುವುದು ಜನತೆಯ ಬದುಕಿನ ದೃಷ್ಟಿಯಿಂದ ಅದಕ್ಕಿಂತ ಬಹಳ ಮುಖ್ಯವಾಗಿದೆ.

ಜಿ.ಎನ್.ನಾಗರಾಜ್

ಚೆನ್ನದ ಕಡೆಯಿಂದ ಚೆನ್ನಾದ ಕೈಗಳ ಇಕ್ಕಲದಾಂಗ
ಮುಗಿದವನೋ
ಹುಲಿ ಮೀಸೆ, ಮೈತುಂಬಾ ಬಂಡಾರ ಬಡಕೊಂಡ
ಹಸುವಿನ ಹೆಜ್ಜ್ಯಾಗ ನಡೆದವನೋ
ನೆತ್ತ್ಯಾಗ ಕಣ್ಣನದರ ಮುಗಿಲಿನಲಿ
ತ್ರಿಪುರ ಕನಸುಗಳ ತೋರ್‍ಯಾನ
ಮಾತಿನ ಏಣಿಯ ಗಟ್ಟಿಮುಟ್ಟ ಅಂಟಿಸಿ
ತೋರುದಕೇರ್‍ಯೇರಿ ಇಳದಾನ

–ಚಂದ್ರಶೇಖರ ಕಂಬಾರ

2008ರ ವಿಧಾನಸಭಾ ಚುನಾವಣೆಗಳಿಗೆ ಸಂಬಂಧಿಸಿ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯ ಮೊದಲ ಕಂತು ಎಂಬ ಹೆಸರಿನಲ್ಲಿ ತರಾತುರಿಯಿಂದ 2 ರೂ.ಗೆ ಅಕ್ಕಿ, ಟಿ.ವಿ. ನಿರುದ್ಯೋಗ ತರಬೇತಿ, ಶೇ.3 ರ ಬಡ್ಡಿಗೆ ಸಾಲ, ಕೃಷಿಗೆ ಉಚಿತ ವಿದ್ಯುತ್, ಯಶಸ್ವಿನಿ ಯೋಜನೆ, ಆಶ್ರಯ ಮನೆ ಇತ್ಯಾದಿ ಜನಪ್ರಿಯ ಯೋಜನೆಗಳನ್ನು ಪ್ರಕಟಿಸಿತು. ಆ ಮೂಲಕ ರಾಜಕೀಯ ಪಕ್ಷಗಳ ನಡುವೆ ಪ್ರಣಾಳಿಕೆ ಸ್ಪರ್ಧೆ ಅಥವಾ ಅಗ್ಗದ ಜನಪ್ರಿಯ ಯೋಜನೆಗಳನ್ನು ಘೋಷಿಸುವ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ ಮತ್ತು ಜನಪ್ರಿಯ ಯೋಜನೆಗಳ ವಿಷಯದಲ್ಲಿ ತಾನು ಇನ್ನೂ ಒಂದು ಹೆಜ್ಜೆ ಮುಂದು ಎಂದು ತೋರಿಸಿಕೊಳ್ಳಲೇಬೇಕೆಂಬ ಹಠದಿಂದ ತನ್ನ ಪ್ರಣಾಳಿಕೆಯನ್ನು ರೂಪಿಸಿದೆ.

ಬಿಜೆಪಿಯ ಈ ಪ್ರಣಾಳಿಕೆಯನ್ನು ನೋಡಿದರೆ ಚಂದ್ರಶೇಖರ ಕಂಬಾರರ ಕವಿತೆಯೊಂದರ ಮೇಲಿನ ಸಾಲುಗಳು ಪ್ರಣಾಳಿಕೆಯನ್ನು ನೋಡಿಯೇ ಬರೆದಿರಬೇಕೆನ್ನಿಸುತ್ತದೆ. 64 ಪುಟಗಳಷ್ಟು ದೀರ್ಘವಾದ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆ ಎನ್ನುವುದು ಎಷ್ಟು ಮುಖ್ಯವೋ ಅದರಲ್ಲಿ ಹೇಳದೇ ಬಿಟ್ಟಿರುವುದು ಜನತೆಯ ಬದುಕಿನ ದೃಷ್ಟಿಯಿಂದ ಅದಕ್ಕಿಂತ ಬಹಳ ಮುಖ್ಯವಾಗಿದೆ.

ಚುನಾವಣಾ ಪ್ರಣಾಳಿಕೆಯೆಂದರೆ ಅದೊಂದು ರಾಜಕೀಯ ಘೋಷಣೆ. ಪಕ್ಷವೊಂದರ ರಾಜಕೀಯ ನಿಲುವುಗಳನ್ನು ಮುಚ್ಚುಮರೆಯಿಲ್ಲದೇ ಜನರ ಮುಂದೆ ದಿಟ್ಟವಾಗಿ ಘೋಷಿಸಿ ಆ ನಿಲುವುಗಳಿಗೆ ಜನರ ಬೆಂಬಲಗಳಿಸಿ ಆರಿಸಿ ಬರುವುದು ಪ್ರಜಾಸತ್ತಾತ್ಮಕ ಪ್ರಕ್ರಿಯೆ. ಬಿಜೆಪಿ ಒಂದು ರಾಷ್ಟ್ರೀಯ ಪಕ್ಷ. ರಾಷ್ಟ್ರೀಯ ಪಕ್ಷವಾಗಿ ಅದು ಇಲ್ಲಿಯವರೆವಿಗೂ ತೆಗೆದುಕೊಳ್ಳುತ್ತಾ, ಪ್ರತಿಪಾದಿಸುತ್ತಾ ಬಂದಿರುವ ನಿಲುವು ಆ ನಿಲುವಿನ ಅನುಸಾರವಾಗಿ ಅದು ಕೈಗೊಂಡ ಚಟುವಟಿಕೆ, ಕಾರ್ಯಕ್ರಮಗಳು ಇವುಗಳನ್ನು ಜನರ ಮುಂದೆ ನಿವೇದಿಸಿ ಅವರ ಬೆಂಬಲ ಗಳಿಸಬೇಕು. ಆದರೆ ಬಿಜೆಪಿ ಪ್ರಕಟಿಸಿರುವ ಚುನಾವಣಾ ಪ್ರಣಾಳಿಕೆ ಈ ಕೆಲಸ ಮಾಡಿದೆಯೇ? ಮತ್ತು ಅದು ಯಾವುದನ್ನು ಚುನಾವಣಾ ಪ್ರಣಾಳಿಕೆ ಎಂದು ಪ್ರಕಟಿಸಿದೆಯೋ ಅದರಲ್ಲಿರುವ ಅಂಶಗಳು ಬಿಜೆಪಿಯ ಮೂಲಭೂತ ನೀತಿಯೇ? ಬಿಜೆಪಿಯ ಪ್ರಣಾಳಿಕೆಯನ್ನು ಗಮನಿಸಿದ ಯಾರಿಗಾದರೂ ಅದರಲ್ಲಿ ಬಿಜೆಪಿಯ ಪ್ರಧಾನ ನೀತಿಗಳು -ಅದರ ಹೃದಯವೇ ಕಾಣೆಯಾಗಿದೆ ಎಂದೆನಿಸುವುದು ಸಹಜ.

ಹಿಂದೂ ಕೋಮುವಾದವೇ ಬಿಜೆಪಿಯ ಜೀವನಾಧಾರವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇತ್ತೀಚೆಗೆ ಬಿಜೆಪಿಯ ರಾಷ್ಟ್ರೀಯ ಸಮಾವೇಶವೊಂದರಲ್ಲಿ ನಾವು ಮತ್ತೆ ಹಿಂದುತ್ವದ ಕಾರ್ಯಸೂಚಿಗೆ ಮರಳಬೇಕು ಎಂಬ ನಿರ್ಧಾರವನ್ನು ಬಿಜೆಪಿ ಮಾಡಿತು. ಇದೇ ನೀತಿಯ ಭಾಗವಾಗಿ ಕರ್ನಾಟಕದಲ್ಲಿ ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದ, ಬಾಬಾಬುಡನ್‌ಗಿರಿಯ ವಿವಾದ, ನಾಲ್ಕು ದತ್ತಾತ್ರೇಯ ಸ್ಥಾನಗಳಿಂದ ಜಾತಾ, ಗೋಹತ್ಯೆ, ಟಿಪ್ಪುಸುಲ್ತಾನ್ ಬಗ್ಗೆ ವಿವಾದ, ಹೀಗೆ ಹಲವಾರು ರಾಜ್ಯ ಮಟ್ಟದ ವಿವಾದಗಳ ಜೊತೆಗೆ



ಹಂಪಿಯಲ್ಲಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ತುಮಕೂರು, ಹಾವೇರಿ, ಗುಲ್ಬರ್ಗ, ಬೆಳಗಾಂ ಹೀಗೆ ಅಸಂಖ್ಯ ಪ್ರದೇಶಗಳಲ್ಲಿ ಸೂಫಿದರ್ಗಾ, ಸ್ಮಶಾನ, ಮಸೀದಿ, ಜಟ್ಟಿಗನ ಸ್ಥಾನ ಇತ್ಯಾದಿಗಳ ಹೆಸರಿನಲ್ಲಿ ವಿವಾದ ಎಬ್ಬಿಸಿದೆ. ಅನೇಕ ಕೋಮುಗಲಭೆಗಳಿಗೆ ಕಾರಣ ವಾಗಿದೆ. ಅದು ಅಧಿಕಾರ ಹಂಚಿಕೊಂಡ 20 ತಿಂಗಳುಗಳಲ್ಲಿ ಮಂಗಳೂರು, ಬೆಂಗಳೂರು ಕೋಮು ಗಲಭೆಗಳು, ವಿರಾಟ್ ಹಿಂದೂ ಸಮಾವೇಶಗಳು ಇತ್ಯಾದಿಯಾಗಿ ತನ್ನ ಕೋಮುವಾದಿ ಧಾಳಿಯನ್ನು ಎಸಗಿದೆ. ಮುಸ್ಲಿಂ ಅಲ್ಪಸಂಖ್ಯಾತರು, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ನಿರಂತರವಾಗಿ ಅನೇಕ ಕಾರಣಗಳನ್ನೊಡ್ಡಿ ಬಿಜೆಪಿಯ ಹಿಂಬಾಲಕರು ಧಾಳಿಗಳನ್ನೆಸಗುತ್ತಾ ಬಂದಿದ್ದಾರೆ.

ಕೋಮುವಾದಿ ಚಟುವಟಿಕೆಗಳೇ ಕರ್ನಾಟಕದಲ್ಲಿಯೂ ಅವರ ಪ್ರಧಾನ ಕೆಲಸವಾಗಿದೆ ಎನ್ನುವಾಗ ಬಿಜೆಪಿಯ ಕಾರ್ಯಪ್ರಣಾಲಿಯಲ್ಲಿ ಅದು ಕಾಣೆಯಾಗಿದ್ದು ಹೇಗೆ? ಏಕೆ? ಕರ್ನಾಟಕದ ಬಿಜೆಪಿಯ ನಾಯಕರಲ್ಲಿ ಏನಾದರೂ ಹೃದಯ ಪರಿವರ್ತನೆಯಾಗಿದೆಯೇ? ಬಿಜೆಪಿಯ ರಾಷ್ಟ್ರೀಯ ನೀತಿಯ ವಿರುದ್ಧ ದಂಗೆಯೆದ್ದಿದ್ದಾರೆಯೇ? ಇತ್ತೀಚೆಗೆ ತಾನೆ ಕರ್ನಾಟಕಾದ್ಯಂತ ಸಭೆ, ಸಮಾವೇಶಗಳನ್ನು ನಡೆಸಿದ ಬಿಜೆಪಿ ಬಾಬಾಬುಡನ್‌ಗಿರಿಯನ್ನು ಅಯೋಧ್ಯೆ ಮಾಡುತ್ತೇವೆ, ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಹೇಳಿಕೊಂಡು ತಿರುಗಿದ್ದು ಎಲ್ಲರಿಗೂ ಗೊತ್ತಿದೆ.

ಈ ಹಿನ್ನೆಲೆಯಲ್ಲಿ ಬಿಜೆಪಿಯ ಪ್ರಣಾಳಿಕೆಯಲ್ಲಿ ತನ್ನ ಪ್ರಧಾನ ನೀತಿ, ಚಟುವಟಿಕೆಯ ರಂಗವಾದ ಕೋಮು ವಾದವನ್ನು ಸೇರಿಸದೆ ತನ್ನ ನಿಜ ಉದ್ದೇಶವನ್ನು ಕರ್ನಾಟಕದ ಜನರಿಂದ ಮುಚ್ಚಿಡಬಯಸಿದೆ ಎಂದೇ ಅರ್ಥ. ಅಕಸ್ಮಾತ್ ಬಿಜೆಪಿಗೆ ತಾನು ಮುಂದೆ ಸರ್ಕಾರದಲ್ಲಿರುವಾಗ ಈ ಅಂಶವನ್ನು ಕೈಬಿಡುತ್ತೇವೆಂಬ ಉದ್ದೇಶವಿದ್ದರೆ ಅದನ್ನು ಸ್ಪಷ್ಟವಾಗಿ ಹೇಳಬೇಕಾಗಿತ್ತು. ನಾವು ಕೋಮು ಸೌಹಾರ್ದವನ್ನು ಕಾಪಾಡುತ್ತೇವೆ. ಕೋಮುಗಲಭೆಗಳಾಗಲು ಅವಕಾಶ ನೀಡುವುದಿಲ್ಲ. ಬಾಬಾಬುಡನ್‌ಗಿರಿಯ ಸೂಫಿ ಸ್ವರೂಪವನ್ನು ಕಾಪಾಡುತ್ತೇವೆ. ಈದ್ಗಾ ವಿವಾದವನ್ನು ಕೆದಕುವುದಿಲ್ಲ ಇತ್ಯಾದಿಯಾಗಿ ಬಹಿರಂಗ ಘೋಷಣೆಯನ್ನು ಚುನಾವಣಾ ಪ್ರಣಾಳಿಕೆಯ ಮೂಲಕ ಮಾಡಬೇಕಾಗಿತ್ತು. ಬಿಜೆಪಿ ಪಾಲುದಾರವಾಗಿದ್ದ ಸಮ್ಮಿಶ್ರಸರ್ಕಾರ ಕನಿಷ್ಠ ಸಾಮಾನ್ಯ ಕಾರ್ಯಕ್ರಮದಲ್ಲಿ ಇಂತಹ ಕೆಲವು ವಾಕ್ಯಗಳಾದರೂ ಇತ್ತು ಎಂಬುದನ್ನು ನೆನಪಿಸಿಕೊಳ್ಳೋಣ.

ಹೀಗೆ ತಮ್ಮ ನಿಜ ಸ್ವರೂಪ ಹಾಗೂ ಉದ್ದೇಶವನ್ನು ಬಚ್ಚಿಡುವ ಕೆಲಸ ಬಿಜೆಪಿಗೆ ಹೊಸದೇನಲ್ಲ. ತಾವು ಆರೆಸ್ಸೆಸ್‌ನ ರಾಜಕೀಯ ಮುಖ, ನಮ್ಮೆಲ್ಲಾ ತೀರ್ಮಾನಗಳೂ ಸಚಿವ ಸಂಪುಟದ ಆಯ್ಕೆ, ಖಾತೆಗಳು, ನೀತಿಗಳು ಆರೆಸ್ಸೆಸ್‌ನ ಆಜ್ಞೆಗೆ ಬದ್ಧವಾಗಿರುತ್ತದೆ ಎಂದು ಅವರು ಎಲ್ಲಿಯಾದರೂ ಹೇಳಿದ್ದಾರೆಯೇ? ಹೇಳುತ್ತಾರೆಯೇ? ಮಾಡಿ ತೋರಿಸುತ್ತಾರಷ್ಟೆ.? ಹೀಗೆ ತನ್ನ ನಿಜ ಸ್ವರೂಪವನ್ನು ಬಚ್ಚಿಟ್ಟು ಕೊಳ್ಳುವ ಗೋಮುಖವ್ಯಾಘ್ರ ಬಿಜೆಪಿ ಎಂಬುದು ಕಂಬಾರರ ಕವನದ ಈ ಸಾಲುಗಳಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಹುಲಿ ಮೀಸಿ, ಮೈತುಂಬ ಬಂಡಾರ ಬಡಕೊಂಡ ಹಸುವಿನ ಹೆಜ್ಜ್ಯಾಗ ನಡೆದವನೋ!!!

ಹೀಗೆ ತನ್ನ ನಿಜ ಸ್ವರೂಪವನ್ನು ಮುಚ್ಚಿಕೊಳ್ಳುವ ಎಷ್ಟೇ ಯತ್ನ ಮಾಡಿದರೂ ಅಲ್ಲಲ್ಲಿ ಸಂದಗೊಂದುಗಳಲ್ಲಿ ವ್ಯಾಘ್ರದ ಪಟ್ಟೆಗಳು ಕಂಡೇ ಕಾಣುತ್ತವೆ. ಹಾಗೆಯೇ ರಾಜ್ಯಾದ್ಯಂತ ಗೋಹತ್ಯೆಯ ಹೆಸರಿನಲ್ಲಿ ಸಂಘ ಪರಿವಾರ ಎಸಗುತ್ತಿರುವ ಅಮಾನವೀಯ ಕೃತ್ಯಗಳ ಪ್ರಸ್ತಾಪ ಪ್ರಣಾಳಿಕೆಯಲ್ಲಿ ಬಂದಿದೆ. ಗೋಹತ್ಯೆ ನಿಷೇಧಿಸುತ್ತೇವೆ. ಗೋ ಹಾಗೂ ಗೋತಳಿ ರಕ್ಷಣೆಗೆ ಕ್ರಮಗಳು, ಮಠಗಳು ನಡೆಸುವ ಸಂಸ್ಥೆಗಳಿಗೆ ನೂರು ಕೋಟಿ ರೂ. ಸಹಾಯ, ದೇವಾಲಯ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಿಸಿದ ಕಾನೂನು ತಿದ್ದುಪಡಿ, ಸಂಸ್ಕೃತ ವಿಶ್ವವಿದ್ಯಾಲಯ ಇತ್ಯಾದಿ.

ಕರ್ನಾಟಕದಲ್ಲಿ ಶೇ.30 ಕ್ಕಿಂತ ಹೆಚ್ಚು ಕೆಳ ಜಾತಿಗಳ ಅಲ್ಪಸಂಖ್ಯಾತರ ಜನರ ಆಹಾರವಾದ ದನದ ಮಾಂಸದ ಮೇಲೆ ಕೆಂಗಣ್ಣು ಬೀರುವ ಮೂಲಕ ದಲಿತರು, ಅಲ್ಪಸಂಖ್ಯಾತ ವರ್ಗಗಳಲ್ಲಿರುವ ಬಡವರ ಮುಖ್ಯ ಪೋಷಕಾಂಶವನ್ನು ಕಸಿಯುವ ಪ್ರಯತ್ನ ಒಂದು ಕಡೆ, ನಿರುಪಯುಕ್ತ ದನಗಳನ್ನು ನಿವಾರಿಸಿಕೊಳ್ಳಲಾಗದೆ ಒದ್ದಾಡುವ ರೈತರು ಮತ್ತು ಇದೇ ಕೃಷಿ ಪಶುಸಂಗೋಪನಾ ವ್ಯವಸ್ಥೆ ಮತ್ತೊಂದು ಕಡೆ. ಹೀಗೆ ಕರ್ನಾಟಕದ ಜನ ಸಮುದಾಯದ ಬದುಕಿಗೆ ಕೊಡಲಿ ಪೆಟ್ಟು ಹಾಕುವ ಪ್ರಯತ್ನ ಬಿಜೆಪಿಯದು. ಇದನ್ನು ಉಪಯೋಗಿಸಿ ಅಲ್ಪಸಂಖ್ಯಾತರಿಗೆ ಕಿರುಕುಳ ನೀಡುವ, ಧಾಳಿ ಮಾಡುವ, ಅವರನ್ನು ಭಯದಲ್ಲಿಡುವ ತಮ್ಮ ರಾಕ್ಷಸೀ ಉದ್ದೇಶವನ್ನು ಸಾಧಿಸುವುದು ಸಂಘ ಪರಿವಾರದ ಗುರಿ.

ಹೀಗೆ ಹುಲಿಯ ಆಕ್ರಮಣಕಾರಿ, ಕ್ರೂರ ಮನಸ್ಸನ್ನು ಬಚ್ಚಿಟ್ಟು ಬಿಜೆಪಿಯ ಪ್ರಣಾಳಿಕೆಯ ಗೋಮುಖವಾಡವನ್ನು ಕಿತ್ತೆಸೆಯಬೇಕು ಹಾಗೂ ಬಿಜೆಪಿಯನ್ನು ಸೋಲಿಸಿ ಎಂಬ ರಣಕಹಳೆ ಮೊಳಗಬೇಕು. ❍

ಕೋಲಾರ ಚುನಾವಣ ಕಣ....

ಪುಟ 5 ರಿಂದ

ಪಡೆಯುವ ವಿಶ್ವಾಸ ಹೊಂದಿದ್ದಾರೆ. ಸಿಪಿಎಂ ಪಕ್ಷದ ಚುನಾವಣೆ ಪ್ರಚಾರವೇ ಅಲ್ಲಿನ ಮತದಾರರಲ್ಲಿ ವಿಶೇಷ ಆಕರ್ಷಣೆ. ಪಳಗಿರುವ ರಾಜೇಂದ್ರನ್ ಮತ್ತು ಭಕ್ತನ್ ತಮ್ಮದೆ ತಂತ್ರಗಳಲ್ಲಿ ಮುಳುಗಿದ್ದಾರೆ. ಆರ್‌ಪಿಐ ಗೆ ನಗರ ಪ್ರದೇಶದಲ್ಲಿ ಗಣನೀಯ ಶಕ್ತಿಯಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಜಾತ್ಯಾತೀತ ಜನತಾದಳ ಬಲಿಷ್ಠವಾಗಿದೆ. ಅಂತಿಮ ಹೋರಾಟ ಇವರಿಬ್ಬರ ನಡುವೆ ಏರ್ಪಡುವಂತಿದೆ. ಹಾಗಿದ್ದರೂ ಕಾಂಗ್ರೆಸ್‌ನ್ನು ಕಡೆಗಾಣಿಸುವಂತಿಲ್ಲ. ಬಿಜೆಪಿ ಕೋಮು ಮತ್ತು ಉನ್ನತ ಜಾತಿಗಳ ಮತಗಳನ್ನೇ ನೆಚ್ಚಿಕೊಂಡಿರುವುದರೊಂದಿಗೆ, ಡಿಎಸ್‌ಎಸ್ ಹೆಸರಿನಲ್ಲಿ ದಲಿತರ ಮತಗಳಿಗೆ ಲಗ್ಗೆ ಹಾಕಲು ಹಣಿಸುತ್ತಿದೆ.

ಮಾಲೂರಿನಲ್ಲಿ ಕಾಂಗ್ರೆಸ್ ಬಂಡಾಯವೇ ಬಿಜೆಪಿಗೆ ವರದಾನವಾಗಿದೆ. ಅಂದೆ ಕೋಮುಗಲಭೆ ನಡೆದ ಹಿನ್ನೆಲೆ ಇದೆ. ಕಾಂಗ್ರೆಸ್ ಪಕ್ಷದಿಂದ ಕೃಷ್ಣಸಿಂಗ್‌ಗೆ ಟಿಕೆಟ್ ನೀಡಿರುವುದರಿಂದ ಮಾಜಿ ಶಾಸಕ ಎ.ನಾಗರಾಜ್ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಆದರೂ ಬಿಜೆಪಿ ಕೃಷ್ಣಯ್ಯಶೆಟ್ಟಿ ಈ ಹಿಂದಿನಿಂದಲೂ ಹಣದ ಹೊಳೆ ಹರಿಸುವುದನ್ನು ನಿಲ್ಲಿಸದಿರುವುದರಿಂದ ಗೆಲುವಿನ ಅಭ್ಯರ್ಥಿಯಾಗಿಯೇ ಮುಂದುವರೆದಿದ್ದಾರೆ. ಕೃಷ್ಣಯ್ಯಶೆಟ್ಟಿ ಎಲ್ಲಿ ಏನು ಮಾಡಿದ್ದಾನೋ ಗೊತ್ತಿಲ್ಲ. ಅಂತೂ ಮಾಲೂರಿನ ಜನತೆಗೆ ಪೂಜೆ ಪುನಸ್ಕಾರಗಳಿಗೆ,ಜಾತ್ರೆಗಳಿಗೆ, ತೀರ್ಥಯಾತ್ರೆಗಳಿಗೆ ಹೋಗಲು ಹಣ ನೀಡುವುದನ್ನು ನಿಲ್ಲಿಸಿಲ್ಲ. ಬಿಜೆಪಿಗೆ ಸಂಘಟನಾ ಶಕ್ತಿ ಇಲ್ಲದಿದ್ದರೂ ಹಣಬಲವನ್ನೇ ನೆಚ್ಚಿಕೊಂಡಿದೆ. ಒಂದು ಅವಧಿಯಲ್ಲಿ ಮಾಲೂರಿನಲ್ಲಿ ಬಲಿಷ್ಠವಾಗಿದ್ದ ಜನತಾ ಪರಿವಾರ ಇಂದು ಹೇಳಹೆಸರಿಲ್ಲದಂತಾಗಿದೆ.

ಎರಡು ಹೋಬಳಿಗಳನ್ನು ಕಳೆದುಕೊಂಡು, ಹಿಂದೆ ಕೋಲಾರ ಕ್ಷೇತ್ರಕ್ಕೆ ಸೇರಿದ ಕಸಬಾ ಹೋಬಳಿಯನ್ನು ಹೊಸದಾಗಿ ಸೇರಿಸಿಕೊಂಡು ಬಂಗಾರಪೇಟೆ ಕ್ಷೇತ್ರ ಮರುರಚನೆಯಾಗಿದೆ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಸ್ಪರ್ಧೆ ಏರ್ಪಟ್ಟಿದೆ. ಕಾಂಗ್ರೆಸ್ ಪರವಾಗಿ ಮಾಜಿ ಶಾಸಕ ನಾರಾಯಣಸ್ವಾಮಿ ಮತ್ತು ಬಿಜೆಪಿ ಪರವಾಗಿ ಮಾಜಿ ಶಾಸಕ ಬಿ.ಪಿ.ವೆಂಕಟಮುನಿಯಪ್ಪ ಸ್ಪರ್ಧಿಸಿದ್ದಾರೆ. ಇಬ್ಬರ ನಡುವೆ ಸ್ಪರ್ಧೆಯಿದೆ. ಉಳಿದೆಲ್ಲ ಅಭ್ಯರ್ಥಿಗಳು ಕೇವಲ ನಾಮಕಾವಸ್ಥೆ ಮಾತ್ರ. ❍

ಜನಶಕ್ತಿ ಕನ್ನಡ ವಾರಪತ್ರಿಕೆ

ಮೋದಿ ಮೋಡಿ ನಡೀತಿಲ್ಲ ನೋಡಿ

ನರೇಂದ್ರ ಮೋದಿ ಎಂಬ ಬಿಜೆಪಿಯ ಹೀರೋ, ಸಂಘ ಪರಿವಾರದ ಕಣ್ಮಣಿ ಗುಜರಾತಿನ ಜನತೆಗೆ ಮಾಡಿರುವ 'ಮೋಡಿ'ಯ ಬಗ್ಗೆ ನಮಗೆಲ್ಲಾ ಗೊತ್ತೇ ಇದೆ.

ಆತನ 'ಮೋಡಿ' ಗೆ ಒಳಗಾದ ಜಹೀರಾ ಎಂಬ ಯುವತಿ ನ್ಯಾಯಾಲಯದ ಕಟಕಟೆಯಲ್ಲಿ ಏನೇನೆಲ್ಲಾ ಮಾತು ಆಡಿದಳು. ತನ್ನ ಬಂಧು ಬಾಂಧವರನ್ನು 'ಬೆಸ್ಟ್ ಬೇಕರಿ' ಯೊಳಗೆ ಬ್ರೆಡ್ ಬೇಯಿಸಿದಂತೆ ಬೇಯಿಸಿ ಹಾಕಿದ್ದಕ್ಕೆ ಈಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದಾಳೆ. ಇಂಥ ಪ್ರತ್ಯಕ್ಷ ಸಾಕ್ಷಿಯೆ ನ್ಯಾಯಾಲಯದ ಕಟಕಟೆಯಲ್ಲಿ ನ್ಯಾಯಮೂರ್ತಿಗಳಿಗೆ ಗೊಂದಲ ಆಗೋ ಹಾಗೆ ಬಗೆಬಗೆಯಲ್ಲಿ ಬಣ್ಣ ಬದಲಿಸಿ ಬಿಟ್ಟಳು. ತನ್ನ ಬಂಧುಗಳನ್ನು ಜೀವಂತ ಸುಟ್ಟಿದ್ದನ್ನ ನಾನೇ ನೋಡಿದೆ ಅಂತ ಒಂದು ಸಾರಿ. ಅವರು ಹೇಗೆ ಸತ್ತರೋ ನಾನು ನೋಡಲಿಲ್ಲ ಅಂತ ಒಂದು ಸಾರಿ. ಓಹೋಹೋ.. ಎಷ್ಟು ಬೆಲೆ ಬಾಳುವ ಮಾತದು! ಬಿಜೆಪಿಗೆ 18 ಲಕ್ಷ ಖರ್ಚಾಗಿದೆ ಆಕೆಯ ಬಾಯಿಂದ ಇಂಥದ್ದೊಂದು ಮಾತು ಹೊರಡಿಸೋದಕ್ಕೆ. ಅಬ್ಬ ಹಿಂದೂ ರಾಷ್ಟ್ರ ಎಷ್ಟು ದುಬಾರಿ!

ತಮಗೆ ಬಹುಮತ ಸಿಗೋಕ್ಷರ ಕಾಣ್ತಾ ಇಲ್ಲ ಅಂತಾ ಬಿಜೆಪಿಯ ರಾಜ್ಯ ರಾಷ್ಟ್ರ ನಾಯಕರಿಗೂ ಅನಿಸುತ್ತಿದೆ. ಅವರ ಮಾತಲ್ಲೇ ಅದು ಕಂಡುಬರ್ತಾ ಇದೆ. ನರೇಂದ್ರ ಮೋದಿ, ಯಡಿಯೂರಪ್ಪ ಮುಂತಾದವರ ಸಭೆಗೆ ಸೇರಿದ ಜನಸಂಖ್ಯೆ ನೋಡಿದರೂ ಹಾಗೆ ಅನಿಸುತ್ತಿದೆ.



ಅವರು ಕಲಿತ ಶಾಲೆಯೇ ಕಾರಣ ಅನಿಸಿತ್ತೋ ಏನೋ. ಈ ಸರ್ಕಾರಿ ಶಾಲೆಯನ್ನೇ ಹರಾಜಿಗಿಡಲು ಯತ್ನಿಸಲಾಯಿತಾದರೂ ಸಾಧ್ಯ ಆಗದೆ ಅರ್ಥ ವ್ಯದಾನವನ್ನು ಮಾರಿಬಿಡಲಾಗಿದೆ ಅದು ಬೇರೆ ವಿಚಾರ.

ಇಂತಹ ಖ್ಯಾತಿಯ ಮೋದಿಯನ್ನು ಕರ್ನಾಟಕದ ಹಿಂದುತ್ವದ ಪ್ರಯೋಗಶಾಲೆ ಯಾಗಿರುವ ಕರಾವಳಿಗೆ ಕರೆಸಿದರೆ ಹೇಗೆ ಅಂತ ಯೋಚಿಸಿದ ಸಂಘ ಪರಿವಾರ ಮೊನ್ನೆ ಕರೆಸೇ ಬಿಟ್ಟಿತು ನೋಡಿ.

ಮಾಡೋವಾಗ ಇದೆಲ್ಲಾ ಗೊತ್ತೇ ಆಗಿರಲಿಲ್ಲ!!

'ವಾಸ್ತವ' ಏನು ಅಂತ ತಿಳ್ಕೊಳ್ಳದೇ ಬಿಜೆಪಿ ಸಭೆಯಲ್ಲಿ ಜನ ಇಲ್ಲ ಅಂತ 'ಇದ್ದದ್ದು ಇದ್ದಂಗೆ' ವರದಿ ಮಾಡಿಬಿಟ್ಟರೆ ಟಿ.ವಿ.ಯವರು ಹಿಂದುತ್ವ ವೀರರು ಸುಮ್ಮನೆ ಬಿಡ್ತಾರೆಯೇ? ಊಹುಃ ಆಗೋ 'ಮೋದಿ' ಸ್ಟೈಲ್‌ನಲ್ಲೇ ಧಮಕಿಗಳು. ಟಿ.ವಿ. ವರದಿಗಾರನ ಮೇಲೆ. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಪುತ್ತೋರಲ್ಲೇನೋ ಆಕಸ್ಮಾತ್ ಜನ ಸೇರಲಿಲ್ಲ. ಏನೋ ಮಾಜಿ ಶಾಸಕಿ ಶಕುಂತಲ ಶೆಟ್ಟಿಗೆ ಟಿಕೆಟ್ ಕೊಟ್ಟಿಲ್ವಲ್ಲ. (ಶಕುಂತಲಾ ಶೆಟ್ಟಿಗೆ ಟಿಕೆಟ್ ಕೊಡ ಬಹುದಿತ್ತು. ಆದರೆ ಆಕೆ ಮತ್ತೆ ಒಮ್ಮೆ ಶಾಸಕಿಯಾಗಿ ಗೆದ್ದು ಬಿಟ್ರೆ ಆಗ ಹಿರಿಯ ಶಾಸಕಿಯಾಗಿರೋ ಶಕುಂತಲ ಶೆಟ್ಟಿಯನ್ನು ಬಿಟ್ಟು ಇಲ್ಲಿ ಯಡಿಯೂರಪ್ಪನವರ ಮನೆಪಕ್ಕದ ಕ್ಷೇತ್ರ ಯಶವಂತಪುರದಲ್ಲಿ ಗೆಲ್ಲುವ 'ಕಿರಿಯ' ಶಾಸಕರಿಗೆ

ಗುಜರಾತ್ ಎಂಬ ಪ್ರಯೋಗ ಶಾಲೆಯಲ್ಲಿ 'ಹಿಂದುತ್ವ' ಎಂಬ ಸೂತ್ರದ ಆಧಾರದಲ್ಲಿ ಈ ಬೆಸ್ಟ್ ಬೇಕರಿಯಲ್ಲಿ ತಯಾರಿಸಲಾದ ಈ ಭಕ್ಷ್ಯವನ್ನು ಕಂಡಳೆ 'ಸೆಕ್ಯೂಲರ್ ರೋಗಿ' ಗಳಿಗೆ ವಾಕರಿಕೆಯಾದರೆ ವಿಹೆಚ್‌ಪಿ ಭಜರಂಗದಳ ಮುಂತಾದ ಜನರಿಗೆ ಅದುವೇ ಅಮೋಘ ತಿನಿಸುಗಳು. ರುಚಿ ರುಚಿ ಭಕ್ಷ್ಯಗಳು. ಅರೆಬೆತ್ತಲೆ

ಫಕೀರ, ಮಹಾತ್ಮ ಗಾಂಧೀ ಎಂಬ ತ್ರಿಶೂಲ ಹಂಚಿದ ರಾಮಭಕ್ತ ಈ ಊರಿನಲ್ಲೇ ಹುಟ್ಟಿದ್ದು ಅಂತ ಇವತ್ತು ಯಾರು ಕಲ್ಪನೆ ಕೂಡ ಮಾಡಿಕೊಳ್ಳಲಾಗದ ಮಟ್ಟಕ್ಕೆ ಗುಜರಾತನ್ನು ಈ ನರೇಂದ್ರ ಮೋದಿ 'ಅಭಿವೃದ್ಧಿ' ಪಡಿಸಿದ್ದಾರೆ. ಶಾಂತಿ ಸೌಹಾರ್ದತೆ ಅಂತ 'ಕೆಲಸಕ್ಕೆ ಬಾರದ' ಸಿದ್ಧಾಂತ ಹೇಳುವ ಗಾಂಧಿಯಂತಹ

ಆರ್.ರಾಮಕೃಷ್ಣ



ಗುಜರಾತ್ ಮಾದರಿಯ ಒಂದು ತುಣುಕು

ಮುದುಕರು ಅಪ್ಪಿ ತಪ್ಪಿ ತಮ್ಮ ಜನ್ಮ ಸ್ಥಳ ಹುಡುಕುತ್ತಾ ಮತ್ತೆ ಅಲ್ಲಿಗೆ ಬಂದು ಬಿಟ್ಟರೆ ಅಲ್ಲೇ ಎದೆ ಒಡೆದು ಹೋಗಬೇಕು ಅಂತಹ ಮೋಡಿ ಮೋದಿಯದು ಗುಜರಾತ್‌ನಲ್ಲಿ.

ಈ ಬಾಪೂಜಿ ನಮಗೆ ಹೇಳಿಕೊಟ್ಟ ಪಾಠಗಳಿಗೆಲ್ಲಾ

ಪುತ್ತೂರು ಹೇಳಿ ಕೇಳಿ ಬಿಜೆಪಿ ರಾಜ್ಯ ಅಧ್ಯಕ್ಷರಾದ ಸದಾ-ಆನಂದಗೌಡರ ಊರು. ಅಲ್ಲೊಂದು ಮೋದಿ ಸಭೆ. ಹತ್ತಾರು ಸಾವಿರ ಜನರ ದೊಡ್ಡ ಸಭೆ ಆಗುತ್ತೆ ಅನ್ಕೊಂಡ್ರೆ ಸಭೆಯಲ್ಲಿ ಜನ ಇಲ್ಲದೆ ನೊಣ ಹೊಡೀಬೇಕೇ? ಸದಾ-ಆನಂದಗೌಡರ ಎದೆಯಲ್ಲಿ ಈಗ ಪುಕ ಪುಕ.

ಅಯ್ಯೋ ಇದೇನು ಕತೆ, ಅಂತ ಬಿಜೆಪಿ, ಆರೆಸ್ಸೆಸ್ ಕಟ್ಟಾಳುಗಳೆಲ್ಲಾ ಪರಿಶೀಲನೆ ಮಾಡಿ ನೋಡಿದರೆ ಆಗ ಗೊತ್ತಾಯ್ತು. ಆವತ್ತು ಪುತ್ತೂರಿನ ಕಲ್ಯಾಣ ಮಂಟಪಗಳಲ್ಲೆಲ್ಲಾ ಮದುವೆಯೋ ಮದುವೆಯಂತೆ. ಪಾಪ ಅದುವರೆಗೂ ಅದು ಅವರಿಗೆ ಗೊತ್ತೇ ಆಗಲಿಲ್ಲ.!! ಟಿವಿ, ಪೇಪರ್‌ಗಳವರಿಗೆ ಸಮಜಾಯಿಷಿ ಕೊಡಬೇಕಾಗಿ ಬಂಡಾಗ ಈ ವಿಷಯ ಗೊತ್ತಾಯ್ತು. ಮೋದಿ ಸಭೆ ಬಗ್ಗೆ ವಿಚಾರ, ಪ್ರಚಾರ

ಮಂತ್ರಿ ಪದವಿ ಕೊಡೋಕ್ಕಾಗುತ್ತದೆಯೇ?) ಅದಕ್ಕೆ ಸ್ವಲ್ಪ ಜನ ಕಡಿಮೆ ಆಗಿದ್ದಾರೆ ಕಾರ್ಕಳದಲ್ಲಿ ಜನ ಸೇರ್‍ತಾರೆ ಅಂತ ಮನಸೊಳಗೆ ಸಮಾಧಾನ ಮಾಡಿಕೊಂಡು ಅಲ್ಲಿಗೆ ಬಂದರೆ ಬಿಜೆಪಿ ಧುರೀಣರು, ಆಶ್ಚರ್ಯ! ಅಲ್ಲೂ ಅದೇ ಥರ! ಓಹೋ ಏನೋ ಎಡವಟ್ಟಾಗಿದೆ. ಕರಾವಳಿಯಲ್ಲೇ ಮೋದಿ ಮೋಡಿ ನಡೀತಾಯಿಲ್ಲ. ಇನ್ನೂ ಕರ್ನಾಟಕದ ಇತರೇ ಭಾಗದಲ್ಲಿ ನಡೀಬಹುದಾ?

ಅಯ್ಯೋ ಇದೇನಪ್ಪಾ ಆ ಕಡೆ ಯಡಿಯೂರಪ್ಪನವರು 'ಹಳೇ ಮೈಸೂರು ಭಾಗದಿಂದಲೇ ಚುನಾವಣೆ ಪ್ರಚಾರ ಶುರುಮಾಡ್ತೀವಿ ಭರ್ಜರಿಯಾಗಿ ಅಂತ ಹೋಗಿದ್ರಲ್ಲಾ! ಅದೇ ಹನೂರು ಅಲ್ಲೂ ಕೂಡ ಸರಿಯಾಗಿ ಜನ ಸೇರದೆ ಸಭೆ ಬಣ ಬಣ

ಪುಟ 14 ಕ್ಕೆ

ಪ್ರಮಿಳಕ್ಕ ಮತ್ತು ಮಂತ್ರಿಸಿದ ಐದು ನಿಂಬೆ ಹಣ್ಣು

ನಮ್ಮ ಪ್ರಮೀಳಕ್ಕ ಗೊತ್ತಲ್ಲ. ಯಾರೂ ಅಂತಿರಾ ಅದೇ ಜೆಡಿ(ಎಸ್), ಬಿಜೆಪಿ ಸರ್ಕಾರದಲ್ಲಿ ಯಾರೊಬ್ಬರೂ ಮಹಿಳೆಯರು ಮಂತ್ರಿಗಳಿಲ್ಲ ಅಂತ ಆಕ್ಷೇಪ,ಕೊಡಬೇಕು ಅಂತಾ ಒತ್ತಾಯ ಶುರು ಆದಾಗ ಹೆಸರು ಚಾಲ್ತಿಗೆ ಬಂದಿತ್ತಲ್ಲ ಪ್ರಮೀಳ ನೇಸರ್ಗಿ ಅಂತ ಅವರೇ.

ಇನ್ನೂ ಜ್ಞಾಪಕಕ್ಕೆ ಬರಲಿಲ್ಲವಾ? ಅದೆ ಮಂತ್ರಿ ಸ್ಥಾನ ಕೊನೆಗೂ ಸಿಗದೇ ಹೋದ್ರು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ್ರು ನೋಡಿ ಅವರೇ. ಅದೇ ರೇಣುಕಾಚಾರ್ಯ ನರಸಕ್ಕನ ಪ್ರಕರಣ ಹೇಳಿದರೆ ನಿಮಗೆ ಖಂಡಿತಾ ಜ್ಞಾಪಕ ಒಂದೇ ಬರುತ್ತೆ. ಜಯಲಕ್ಷ್ಮಿ ಅನ್ನೋ ನರ್ಸ್ ಒಬ್ಬಾಕೆ. ತನಗೆ ಶಾಸಕ ಆಚಾರ್ಯರಿಂದ ಕಿರುಕುಳ ಆಗ್ತಾ ಇದೆ. ಆತ ತನ್ನ ಆಸ್ತಿ ಬರೆದು ಕೊಡೋದಕ್ಕೆ ಪೀಡಿಸ್ತಾ ಇದಾನೆ. ಮಹಿಳಾ ಆಯೋಗ ಕ್ರಮ ತಗೋಬೇಕು. ಅಂತಾ ದೂರು ಕೊಟ್ಟಾಗ ನೇಸರ್ಗಿ ಬಹಳ ತತ್ವ ಬದ್ಧ ನಿಲುವು ತಗೊಂಡಿದ್ರು.

ರೇಣುಕಾಚಾರ್ಯ ಬಿಜೆಪಿ ಪಕ್ಷದೋರು. ಆಚಾರ್ಯ ಅಂತ ಹೆಸರು. ಇರೋದ್ರಿಂದ ಬ್ರಹ್ಮಚಾರಿ ಅಂದ್ಕೋಬೇಡಿ. ಅವರಿಗೆ ಒಂದು ಮದುವೆ ಆಗಿತ್ತು. ಹೌದು ಒಂದು ಮದ್ವೆ. ಇನ್ನೊಂದು ಬರಿ ಹೊಂದಾಣಿಕೆ ಅಷ್ಟೆ. ಮದುವೆ ಅಲ್ಲ. ಆ ನರ್ಸ್ ಜಯಲಕ್ಷ್ಮಮ್ಮನೇ ಇದನ್ನೆಲ್ಲಾ ಹೇಳಿದ್ದು. ನಮ್ಮ ರೇಣುಕಪ್ಪ ಇದೆಲ್ಲಾ ಸುಳ್ಳು ಅಂತ ಅಂದಾಗ ಅವರು ತಮ್ಮ 'ಪ್ರಣಯ ಪರಸಂಗ' ದ ಸಿಡಿಯನ್ನು ರಿಲೀಸ್ ಮಾಡಿ ಬಿಟ್ಟು ಸಾಕ್ಷಿ ತೋರಿಸಿದರು. ಕಿರುಕುಳದ ಬಗ್ಗೆ ತನಿಖೆಯಾಗಬೇಕು. ಆಚಾರ್ಯರು ನನಗೆ ಕಿರುಕುಳ ಕೊಡ್ತಾ ಇದ್ದಾರೆ ಅಂದಿದ್ರು.



ಮಹಿಳಾ ಆಯೋಗದ ಅಧ್ಯಕ್ಷರಾಗಿ ನೇಸರ್ಗಿ ಏನು ಮಾಡಬೇಕಿತ್ತು. ದೂರನ್ನು ಸೀರಿಯಸ್ಸಾಗಿ ತಗೊಂಡು ವಿಚಾರಣೆ ಮಾಡಿ ಮಹಿಳೆಗೆ ಧೈರ್ಯ ಹೇಳಬೇಕಲ್ಲವೇ? ಊಹುಂ ಅವರು ಇದ್ಯಾವುದೇ ಇಲ್ಲದೇ ಅತ್ಯಂತ 'ತತ್ವಬದ್ಧ' ನಿಲುವು ತೆಗೆದುಕೊಂಡು ಜಯಲಕ್ಷ್ಮಿ ಆರೋಪ ಎಲ್ಲಾ ಸುಳ್ಳು ಅಂತ ಘೋಷಿಸಿ ಬಿಟ್ಟರು.

ಇಲ್ಲಿ ತತ್ವಬದ್ಧತೆ ಏನಪಾ ಅಂದರೆ ರೇಣುಕಾಚಾರ್ಯರು ಬಿಜೆಪಿ ಶಾಸಕರು. ತಾನೂ ಬಿಜೆಪಿಯ ಮಾಜಿ ಶಾಸಕಿ, ಭವಿಷ್ಯದಲ್ಲಿ ಸಚಿವ ಸ್ಥಾನಾಕಾಂಕ್ಷಿ. ಹಾಗೆಲ್ಲಾ ತನ್ನ ಪಕ್ಷದ ಶಾಸಕರ ವಿರುದ್ಧವೇ ತನಿಖೆ ಮಾಡೋಕಾಗುತ್ತಾ!

ಈಗ ನೇಸರ್ಗಿ ಅಂದರೆ ನಿಮಗೆ ನೆನಪಾಗಿರಲೇ ಬೇಕು. ಅವರ ಬಗೆಗೆ ಸದ್ಯದ ಸಮಾಚಾರ ಏನಪ್ಪಾ ಅಂದ್ರೆ ಬೆಂಗಳೂರಿನ ವಿಜಯನಗರ ಕ್ಷೇತ್ರದಿಂದ ಸ್ಪರ್ಧೆ ಮಾಡ್ತಾ ಇದ್ದಾರೆ.

ಅದರಲ್ಲೇನು ವಿಶೇಷ ಅಂತೀರಾ. ಸ್ವಲ್ಪ ವಿಶೇಷ ಇದೆ. ರಾಜಕಾರಣಿಗಳು ಜ್ಯೋತಿಷಿ, ಮಂತ್ರವಾದಿಗಳ ಬಳಿ ಹೋಗೋದು. ಅವರು ಕೊಡುವ ತಾಯತ , ವಿಭೂತಿ ಇತ್ಯಾದಿ ಧರಿಸುವುದು ಇವೆಲ್ಲಾ ಮಾಮೂಲಿ. ಆದರೆ ನಮ್ಮ ನೇಸರ್ಗಿಯವರು ನಾಮಪತ್ರ ಸಲ್ಲಿಸೋಕೆ ಕಛೇರಿಗೆ ಬಂದಾಗ ಅವರ ಕೈಲಿ ಐದು ನಿಂಬೆಹಣ್ಣುಗಳಿದ್ದವಂತೆ.

ಯಾಕೆ ಐದು ನಿಂಬೇಹಣ್ಣು ಅಂತದ್ದಿ ದಟ್ಸ್ ಕನ್ನಡ.ಕಾಂ ಅಂತರ್ಜಾಲದಲ್ಲಿ ಪ್ರಕಟವಾದ ಸುದ್ದಿಯೊಂದರಲ್ಲಿದೆ. ಒಂದು ಶನಿಕಾಟ ತಪ್ಪಿಸೋದಕ್ಕಂತೆ. ಎರಡನೇಯದು ಚುನಾವಣಾ ಮತಗಟ್ಟೆ ಅಧಿಕಾರಿಯನ್ನು ಮರುಳು ಮಾಡ್ಕೋದಕ್ಕಂತೆ, ಮೂರನೇಯದು ಮತದಾರರಲ್ಲಾ ತನಗೆ ಮತ ಹಾಕಲಿ ಅಂತ.

ನಾಲ್ಕನೇಯದು ಗೆದ್ದು ಬಂದ ಮೇಲೆ ಸಚಿವೆ ಆಗಬೇಕೂಂತ. ಐದನೆಯದು ಯಾಕಪ್ಪಾ ಅಂದ್ರೆ ಚುನಾವಣೆ ತಲೆ ಬಿಸಿ ಜಾಸ್ತಿ ಆದರೆ ನಿಂಬೆಹಣ್ಣಿನ ಷರಬತ್ತು ಮಾಡಿಕೊಂಡು ಕುಡಿದು ತಂಪು ಮಾಡಿಕೊಳ್ಳೊಕಂತೆ ಚೆನ್ನಾಗಿದೆ. ಅಲ್ವಾ.

ಬರೀ ನೇಸರ್ಗಿ ಅಲ್ಲ-ಡಿ.ಕೆ.ಶಿ. ಸಾಹೇಬರಿಗೂ


ಇಂಥದ್ದೆಲ್ಲಾ ಬರೀ ಬಿಜೆಪಿ ಪಕ್ಷಕ್ಕೆ ತಗುಲಿ ಕೊಂಡಿರೋ ನಂಬಿಕೆಗಳೇನೂ ಅಲ್ಲ. ನಮ್ಮ ಕಾಂಗ್ರೆಸ್‌ನ ಡಿ.ಕೆ.ಶಿ. ಯವರು - ಅದೇ ಎಸ್.ಎಂ.ಕೆ. ಅವರ ಮಾನಸ ಪುತ್ರ. ಅವರ ಅನಧಿಕೃತ ವಕ್ತಾರ ಬೆಂಗಳೂರಿನಲ್ಲಿ ಒಂದು ಭರ್ಜರಿ ಹೋಮ ನಡೆಸುತ್ತಾ ಇದ್ದಾರಂತೆ. ಅದು 7 ದಿನಗಳ ಹೋಮ. ಕಾಸರಗೋಡು, ದಕ್ಷಿನ ಕನ್ನಡ ಜಿಲ್ಲೆಯಿಂದ 82 ಜನ ವೈದಿಕರನ್ನ ಕರೆಸಿ ಅವರು ಕೇಳಿದ್ದನ್ನೆಲ್ಲಾ ಕೊಡಿಸಿ ಈ ಹೋಮ ನಡೆಸ್ತಾ ಇದ್ದಾರಂತೆ.

ಅಂತೂ ಮಂತ್ರಿಗಿರಿ, ಮುಖ್ಯಮಂತ್ರಿ ಗಿರಿಗಳಿಗೆ ಇರೋ ಅಡ್ಡಿ ನಿವಾರಿಸೋದರಲ್ಲಿ ಈ ಹೋಮದಿಂದಾಗಿ ಮೇಲೇಳೋ ಹೊಗೆ ಯಾವ ರೀತಿ ಸಹಾಯ ಮಾಡುತ್ತೋ ನೋಡಬೇಕು.

ಹೋಮದ ಪ್ರತಿಫಲವೋ ಏನೋ

ಪುಟ 15ಕ್ಕೆ


ಇದು ಗುಜರಾತ್ ಮಾದರಿ !



- ಅಂಬಾನಿಯಂತಹ ಮೂವರು ಕೋಟ್ಯಾಧೀಶ್ವರರಿಗೆ 45 ಸಾವಿರ ಕೋಟಿ ರೂಪಾಯಿ ತೆರಿಗೆ ವಿನಾಯಿತಿ
- ಪ್ರತಿ ಗುಜರಾತಿಯ ತಲೆಯ ಮೇಲೆ 17 ಸಾವಿರ ರೂಪಾಯಿ ಸಾಲ
- ಆರ್ಥಿಕವಾಗಿ ಮೂರನೇ ಸ್ಥಾನ, ಕೃಷಿಯಲ್ಲಿ ಹದಿಮೂರನೇ ಸ್ಥಾನ
- ಸಾಮಾಜಿಕ ಕ್ಷೇತ್ರದಲ್ಲಿ ಹಣ ಹೂಡಿಕೆಯಲ್ಲಿ 12ನೇ ಸ್ಥಾನದಿಂದ 17ನೇ ಸ್ಥಾನಕ್ಕೆ
- ವಿದ್ಯುತ್ ಬಾಕಿ ಕಟ್ಟಲಾರದ ಒಂದೂವರೆ ಲಕ್ಷ ರೈತರು ಜೈಲಿಗೆ !



- ಮಹಿಳೆಯರ ಮೇಲೆ ಹೀನಾಯ ಸಾಮೂಹಿಕ ಅತ್ಯಾಚಾರಗಳು
- ಎರಡು ಸಾವಿರ ಕೊಲೆ - ಎರಡು ಲಕ್ಷ ನಿರಾಶ್ರಿತರು
- ಮೂರು ಸಾವಿರ ಕೋಟಿ ರೂಪಾಯಿ ಆಸ್ತಿಪಾಸ್ತಿ ನಷ್ಟ
- ಹದಿನಾಲ್ಕು ಕೇಸುಗಳ ಮರುವಿಚಾರಣೆಗೆ ಸುಪ್ರೀಂಕೋರ್ಟ್ ಆದೇಶ, ಹಲವು ಬಾರಿ ಛೀಮಾರಿ
- ನಕಲಿ ಎನ್‌ಕೌಂಟರ್ ರಾಜ್ಯಭಾರ





ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬಾರದಂತೆ ತಡೆಯೋಣ - ಶಾಂತಿ ಸಾಮರಸ್ಯದ ಕರ್ನಾಟಕವನ್ನು ಉಳಿಸೋಣ



ಸ್ತ್ರೀ ಶಕ್ತಿಯೆಂಬ ಸೊಡರು

"ಜನರು ಘನತೆಯಿಂದ ಬದುಕಲು ಸಾಧ್ಯವಾಗಬೇಕು. ಅಂದರೆ ಸರ್ವ ಜನತೆಯು ಉತ್ಪಾದನಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಜನರ ತಲಾ ಆದಾಯ ವೃದ್ಧಿಯಾಗಬೇಕು. ಜನರ ಕೊಳ್ಳುವ ಶಕ್ತಿ ಹೆಚ್ಚಾಗಬೇಕು. ಈ ಪ್ರಕ್ರಿಯೆಯು ಕ್ರಮಬದ್ಧವಾಗಿ ಸಮತೋಲನದಲ್ಲಿ ಸಾಗಿದರೆ, ದೇಶಿ ಮಾರುಕಟ್ಟೆಯು ಬಲಗೊಳ್ಳುವ ಸಾಧ್ಯತೆಯಿದೆ ಮತ್ತು ಜಾಗತೀಕರಣದ ಈ ಹೊತ್ತಲ್ಲಿ ದೇಶಿ ಮಾರುಕಟ್ಟೆಯನ್ನು ಬಲಗೊಳಿಸುತ್ತಾ ವಿದೇಶಿ ಮಾರುಕಟ್ಟೆಯ ಅನಿವಾರ್ಯತೆಯನ್ನು ಅರಿಯುತ್ತ ಜನಪರವಾದ ಅರ್ಥ ವ್ಯವಸ್ಥೆಯನ್ನು ಕಟ್ಟಲು ಸಾಧ್ಯವಾಗಬೇಕಿದೆ.'

ಅಮಿತ್ ಮಾಧುರಿ ಹೀಗೆಂದು ಬರೆಯುತ್ತಾರೆ. ಜನಶಕ್ತಿಯನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ತರಬೇತುಗೊಳಿಸುತ, ಹೆಚ್ಚೆಚ್ಚು ಕುಶಲರಾಗಿಸುತ, ಎಲ್ಲರಿಗೂ ಉದ್ಯೋಗ ಕಲ್ಪಿಸುತ, ಜೀವನಾವಶ್ಯಕವಿರುವುದನ್ನು ಕೊಳ್ಳುವ ಶಕ್ತಿಯನ್ನು ಕಡ್ಡಾಯವಾಗಿ ಹೆಚ್ಚಿಸುತ ಈ ದೇಶದ ದುಡಿವ ಜನತೆಯೇ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಾರೆ.

ಲಕ್ಷ ಮೀರಿ ಸಂಘಗಳು

ಈಚೆಗೆ ಅಂಗನವಾಡಿ ಅಕ್ಕಂದಿರು, ಜನವಾದಿಯ ಗೆಳತಿಯರು ರಾಜ್ಯದ ತುಂಬ ಓಡಾಡಿ ಸ್ತ್ರಿ ಶಕ್ತಿ ಮತ್ತು ಸ್ವಸಹಾಯ ಸಂಘಗಳ ಮಹಿಳೆಯರನ್ನು ಸಂಘಟಿಸುತ್ತಿದ್ದಾರೆ. ಈ ಹೊತ್ತಿನಲ್ಲಿ ಸಿಕ್ಕ ಅಂಕಿ ಅಂಶಗಳು ನಿಮ್ಮ ಹುಬ್ಬೇರಿಸುತ್ತವೆ. ಕರ್ನಾಟಕದಲ್ಲಿ ಒಟ್ಟು (1ಲಕ್ಷ 30 ಸಾವಿರ) ಸ್ತ್ರೀ ಶಕ್ತಿ ಸಂಘಗಳಿವೆ. ಈ ಸಂಘಗಳನ್ನು ಕಟ್ಟಲು ಸರ್ಕಾರ ಆದೇಶ ಹೊರಡಿಸಿದ್ದಕ್ಕಾಗಿ ಸುಮಾರು 50 ಸಾವಿರ ಮಹಿಳೆಯರು ಈ ಹೆಚ್ಚುವರಿ ಕೆಲಸವನ್ನು ತುಂಬ ತಾಳ್ಮೆಯಿಂದ ನಿರ್ವಹಿಸಿದ್ದಾರೆ. ಸರ್ಕಾರದ ಬೊಕ್ಕಸದಲ್ಲಿ 5.28 ಕೋಟಿ ರೂಪಾಯಿಗಳು ಈ ಬಡ ಗ್ರಾಮೀಣ ಮಹಿಳೆಯರ ಉಳಿತಾಯದ ಹಣವಿದೆ. ಇನ್ನು ಇತರೆ ಎನ್‌ಜಿಓಗಳು, ಬ್ಯಾಂಕುಗಳು, ಬೇರೆ ಬೇರೆ ಇಲಾಖೆಗಳು ರಚಿಸಿದ ಸಹಾಯ ಗುಂಪುಗಳು 80 ಸಾವಿರದಷ್ಟಿವೆ. ಇವರೆಲ್ಲ ಕಡ್ಡಾಯವಾಗಿ ಪ್ರತಿವಾರ ಕನಿಷ್ಠ ರೂ.10 ಉಳಿತಾಯ ಮಾಡಿದ್ದಾರೆ. ಮಾಡುತ್ತಿದ್ದಾರೆ.

ಧೋರಣೆಯೇನು?

ಮೊಬೈಲ್ ಚೀಲಗಳು, ಪರ್ಸುಗಳು, ಹೆಗಲ ಚೀಲಗಳು, ವೈವಿಧ್ಯಮಯ ಕಲಾತ್ಮಕ ಕರಕುಶಲತೆಯಿಂದ ಕಂಗೊಳಿಸುವ ಬಣ್ಣ ಬಣ್ಣದ ಬ್ಯಾಗುಗಳು. ಮೊಬೈಲ್ ಇಡಲು, ಹಣ ಇಡಲು, ಪೆನ್ ಇಡಲು ಪ್ರತ್ಯೇಕ ವಿಭಾಗಗಳಿರುವ ಪರ್ಸುಗಳು... ಎಲ್ಲಿಗೆ ಹೋದರೂ ದೊಡ್ಡ ಬ್ಯಾಗಿನೊಳಗೆ ಈ ಎಲ್ಲ ವಸ್ತುಗಳು. ಅವರು ನಿಂತಲ್ಲೇ ವ್ಯಾಪಾರ ಶುರು. ಕೂತಲ್ಲಿ ಅಂಗಡಿ ಶುರು. ಜಾತಿ-ಧರ್ಮದಂತರದ ಮೇಲು-ಕೀಳಿನ ಭಾವನೆ ಬಿಟ್ಟು, ನಗುತ ಹರಟುತ ಕೆಲಸ ಮಾಡುವ ಪರಿಗೆ ಖಂಡಿತ ಖುಷಿಯಾಗುತ್ತದೆ.

ಹಾಗಾದರೆ ಇಷ್ಟೊಂದು ಅಗಾಧ ಸಂಖ್ಯೆಯ ಹಣದ ಉಳಿತಾಯ ಮತ್ತು ಜನರ ಶಕ್ತಿಯ ಕುರಿತು ಸರ್ಕಾರದ ಧೋರಣೆಯೇನು...? ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಈ ಹಣ ಮತ್ತು ಜನ ಎರಡನ್ನೂ ಹೇಗೆ ಬಳಸಬಹುದೆಂದು ಕಾರ್ಯ ಯೋಜನೆ ರೂಪಿಸಿದೆಯೋ? ಎಂದರೆ ನಿರಾಶೆಯ ಉತ್ತರ ಸಿಗುತ್ತದೆ. ಅಲ್ಲಲ್ಲಿ ಸಾಲ ವಿತರಿಸಿದ್ದು, ಆರ್ಥಿಕ ಸ್ವಾವಲಂಬನೆಗೆ ನೆರವು ನೀಡಿದ್ದು ನಡೆದಿದೆ. ಆದರೆ ಗರಿಷ್ಠ ಪ್ರಮಾಣದ ಜನರ ಹಣವನ್ನು ಬೊಕ್ಕಸದಲ್ಲಿಟ್ಟುಕೊಂಡು, ಜನರ ಸ್ವಾವಲಂಬನೆಗೆ ಸಹಾಯ ಮಾಡಿದ್ದು ಅತ್ಯಂತ ಕಡಿಮೆ ಪ್ರಮಾಣ. ಅಭಿವೃದ್ಧಿಗೆ ಪೂರಕವಾಗಿ ಬರಬೇಕಾದ ಈ ಸಂಪನ್ಮೂಲವನ್ನು ಕಡೆಗಣಿಸಲು ಕಾರಣವಿಷ್ಟೆ; ಜನ ಓಟ್ ಬ್ಯಾಂಕ್‌ಗಳಾಗಬೇಕು. ಸ್ವಾವಲಂಬಿ ಸ್ವಾಭಿಮಾನಿ ಶಕ್ತಿಗಳಾಗಬಾರದು ಎಂಬುದು ಸರ್ಕಾರದ ಧೋರಣೆಯಾಗಿದೆ. ಆದ್ದರಿಂದಲೇ ಹಿಂದೊಮ್ಮೆ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ಸೋನಿಯಾ, ಸ್ತ್ರೀ ಶಕ್ತಿ ಸಂಘಗಳ ಬೃಹತ್ ಸಮಾವೇಶ ಕರೆದು ಅಂಗೈ ಬೀಸಿ ಮೋಡಿ ಮಾಡಲು ಹವಣಿಸಿದ್ದು ಯಾರಿಗೆ ಗೊತ್ತಿಲ್ಲ.... ಆದರೆ ಹಿಂದಿನ ಕಾಂಗ್ರೆ ಸರ್ಕಾರ, ಬಿಜೆಪಿ-ಜೆಡಿ(ಎಸ್)ನ ಅಪವಿತ್ರ ಮೈತ್ರಿಯ ಸರ್ಕಾರ ಇವರಾರೂ ಈ ಮಹಿಳೆಯರ ಜೀವನ ಹಸನುಗೊಳಿಸಲು ಯೋಜನೆ ರೂಪಿಸಲಿಲ್ಲ.

ಅವರ ನೆನಪು

ಇದೇ ಸಮಯದಲ್ಲಿ ನನಗೆ ಪಶ್ಚಿಮ ಬಂಗಾಳದ ಎಐಜೆಎಂಎಸ್ ರಾಜ್ಯ ಕಾರ್ಯದರ್ಶಿಯಾಗಿದ್ದ ರೇಖಾ ಗೋಸ್ವಾಮಿ ನೆನಪಾಗುತ್ತಾರೆ. ಅಲ್ಲಿಯ ಸಿಪಿಐ(ಎಂ) ನೇತೃತ್ವದ ಸರ್ಕಾರವು ಸ್ವ ಸಹಾಯ ಸಂಘಗಳ ಶ್ರೇಯೋಭಿವೃದ್ಧಿಗಾಗಿ ನೀತಿ ರೂಪಿಸಲು ಒಂದು ಸಚಿವ ಖಾತೆಯನ್ನೇ ತೆರೆದಿವೆ. ರೇಖಾ ಅದರ ಸಚಿವರಾಗಿರುವರು. ಮೂರು ವರ್ಷದ ಹಿಂದೆಯೇ ರೇಖಾ, ದೇಶದ ಸ್ವ ಸಹಾಯ ಸಂಘಗಳ ಅಧ್ಯಯನ ನಡೆಸಿದ್ದರು. ಅಂತೆಯೇ ಕೇರಳದಲ್ಲಿ ಈ ಗುಂಪುಗಳನ್ನು ಉತ್ಪಾದನಾ ಚಟುವಟಿಕೆಯಲ್ಲಿ ನಿರಂತರಗೊಳಿಸಲು, ತಲಾ ಆದಾಯ ಹೆಚ್ಚಿಸಲು ವಹಿಸಿದ ಶ್ರಮ ಫಲ ಕೊಡುತ್ತಿದೆ. ತುಂಬ ಹೆಮ್ಮೆಯಿಂದ ಅಲ್ಲಿಯ ಮಹಿಳೆಯರು ಬದುಕು ಸಾಗಿಸುತ್ತಿದ್ದಾರೆ. ಕರ್ನಾಟಕದಲ್ಲಿ ಯಾಕೆ ಸಾಧ್ಯವಾಗಬಾರದು?

ನಾನು ಅನೇಕ ಗ್ರಾಮಗಳಿಗೆ ಭೇಟಿ ಕೊಡುವಾಗ ಖುಷಿಯೊಂದಿಗೆ ನೋವಿನ ಕಾವೂ ಹಿಂಬಾಲಿಸುತ್ತದೆ. "ಹೆಣ್‌ಭಾರಿಗೆ ನಿನಗೇನೂ ತಿಳ್ಯಾದಿಲ್ಲ. ಹೇಳಿದ್ದು ಕೇಳ್ಕೊಂಡು ಬಿದ್ದಿರು" ಎಂಬ ಬಯ್ಗಳ ಈಗಲೂ ಕೇಳಿ ಬರುತ್ತದೆ. ಆದರೆ ಸಂಜೆ ಹೊತ್ತು, ಸಮಯಕ್ಕೆ ಸರಿಯಾಗಿ ಸಭೆ ಬರುವ ರೈತಾಪಿ ಮತ್ತು ಕೂಲಿ ಕಾಯಕದ ಅಕ್ಕಂದಿರರು. ಗೋಲಾಕಾರ ಸಭೆ ಸ್ವಾಗತ ಒಬ್ಬಳಿಂದ, ವಿಷಯ ಮಂಡನೆ ಹಿರಿಯ ತಿಳುವಳಿಕೆಸ್ಥ ಮಹಿಳೆಯಿಂದ. ಒಬ್ಬರಾದ ಮೇಲೆ ಒಬ್ಬರು ಶಾಂತರಾಗಿ ಮಾತಾಡುವ ಪರಿ. ತಂದ ಹಣವನ್ನು ಕೊಟ್ಟು ಖಾತೆಯಲ್ಲಿ ಬರೆಸುವ ಎಚ್ಚರಿಕೆ. ಈ ವಾರ ಹೊಸದಾಗಿ ಇಬ್ಬರು ಬ್ಯಾಂಕಿಗೆ ಹೋಗಲು ನಿರ್ಣಯ. ಹಾಡು ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯ. ಇಳಕಲ್ ಸೀರೆ ಸೆರಗೊದ್ದು, ತುಂಬು ಬಳೆಗಳ ಗಲ ಗಲ ಸದ್ದು ಮಾಡುತ, "ಒಕ್ಕಲತನ ನಡಿವಲ್ದು, ಸರ್ಕಾರದಿಂದ ಏನಾರ ನೆರವು ತಗೋಬೋಕು" ಅಂತ ಮಾತಾಡುತ ಮನೆಗೆ ಹೊರಡುವರು. ಎಂಥ ಅದ್ಭುತ ಬದಲಾವಣೆ. ಇದೊಂದು ಮೌನ ಕ್ರಾಂತಿಯೇ ಹೌದು.

ಅಹಿತಕರ ಘಟನೆಗಳು

ಆದರೆ ಇದೇ ಸಂದರ್ಭದಲ್ಲಿ ಅಹಿತಕರ ಘಟನೆಗಳೂ ನೋಡಿದ್ದೇನೆ. ಕೂಡಿದ್ದ ಹಣವನ್ನು ಕಡಿಮೆ ಬಡ್ಡಿ (ಶೇ.2) ಯಲ್ಲಿ ಸಾಲ ಕೊಡುವರು ಎಷ್ಟೋ ಬಾರಿ ಸದಸ್ಯರ ಮನೆಯ ಗಂಡಸರೇ ಪಡೆದ ಸಾಲ ವಾಪಸ್ಸು ಮಾಡದೇ ಇರುವುದು. ಹೊರಗಡೆ ಕೊಟ್ಟ ಸಾಲಕ್ಕೂ ವಾಪಸ್ಸಾಗದೇ ನೂರು ಸಂಚಕಾರ ಎದುರಿಸಿರುವುದು. ಇದರಿಂದ ಮಹಿಳೆಯರ ನಡುವೆ ವೈಮನಸ್ಸು ಜಗಳ ಕಡೆಗೆ ಸಂಘವೇ ಮುರಿದಿದ್ದು ಇದೆ. ಕೆಲವು ಕಡೆಯಂತು ಸರ್ಕಾರದಿಂದ ಬರಬೇಕಾದ ಸುತ್ತು ನಿಧಿ ಬರದೇ ಇದ್ದಾಗ, ಒಂದು ಗುಂಪಿಗೆ ಸಾಲ ಮೊದಲು ಸಿಕ್ಕು, ಇನ್ನೊಂದು ಗುಂಪಿಗೆ ಸಿಗದೇ ಇದ್ದಾಗ ಇದಕ್ಕೆಲ್ಲ ಸಂಘ ಮಾಡಿಕೊಟ್ಟ ಅಂಗನವಾಡಿ ಟೀಚರ್ರೇ ಕಾರಣವೆಂದು ಅನಾವಶ್ಯಕ ಜಗಳ ಮಾಡಿದ್ದಿದೆ. ಆಗೆಲ್ಲ ಅಂಗನವಾಡಿ ಅಕ್ಕಂದಿರರು ತುಂಬ ನೊಂದಿದ್ದಾರೆ. ಆದಾಗ್ಯೂ ಸಂಘಗಳನ್ನು ಬಲಿಷ್ಠಗೊಳಿಸಲು ಮತ್ತೆ ಮತ್ತೆ ನಿಂತಿದ್ದಾರೆ. ಅವರಿಗೊಂದು ಲಾಲ್ ಸಲಾಂ ಹೇಳಲೇಬೇಕು.

ನಿಂತಲ್ಲಿ ವ್ಯಾಪಾರ - ಕುಂತಲ್ಲಿ ಅಂಗಡಿ

ಹಾಗೆಯೇ ಯಶಸ್ವಿ ಸಂಘಗಳೂ ಇವೆ. ಸಾಮಾಜಿಕ ಪ್ರಜ್ಞೆ ಇರುವ ಬ್ಯಾಂಕ್ ಮ್ಯಾನೇಜರ್ ಏನಾದರೂ ಮಾಡಬೇಕೆಂಬ ಉಲ್ಲಾಸದ ಸದಸ್ಯರು ಇದ್ದಾಗ ಖಂಡಿತ ಏನೆಲ್ಲ ಸಾಧಿಸಿದ್ದಿದೆ. ಬೀದರ್ ಜಿಲ್ಲೆಯ ಚಿಟಗುಪ್ಪಾ ಊರು. ಜನವಾದಿಯೊಂದಿಗೆ 35 ಸಂಘಗಳಿವೆ. ಮುನ್ಸಿಪಾಲಿಟಿಯ ಅಧಿಕಾರಿಯಾಗಿದ್ದ ಮೀನಾಕುಮಾರಿ. ಬ್ಯಾಂಕ್ ಅಧಿಕಾರಿ ಮತ್ತು ಊರಿನ ಜನತೆ ಪರಸ್ಪರ ಜನಪರ ಕಾಳಜಿಯಿಂದ ಕೆಲಸ ಮಾಡಿದ್ದಿದೆ. ಜನವಾದಿಯ ರಾಜ್ಯ ಸಮ್ಮೇಳನ ಬೀದರಿನಲ್ಲಿ ಕಳೆದ ವರ್ಷ ಆಗಸ್ಟ್‌ನಲ್ಲಿ ನಡೆಯಿತು. ಪ್ರತಿನಿಧಿಗಳಿಗೆ ಕೊಡುವ ಬ್ಯಾಗುಗಳು ನಮ್ಮ ಮಹಿಳೆಯರೇ ತಯಾರಿಸಬೇಕೆಂಬ ಕನಸಿತ್ತು. ಪ್ರಕೃತಿ ಸ್ವಸಹಾಯ ಸಂಘದ ಮಹಿಳೆಯರು ಸಿದ್ಧರಾದರು. ಮನೆಯ ಅಂಗಳ ಪಡಸಾಲೆ, ಕಾರ್ಯಾಗಾರ (ವರ್ಕ್‌ಶಾಪ್) ವಾಯ್ತು. ಪ್ರತಿನಿಧಿ ಬ್ಯಾಗುಗಳು ಮಾತ್ರವಲ್ಲ, ಮೊಬೈಲ್ ಚೀಲಗಳು, ಪರ್ಸುಗಳು, ಹೆಗಲ ಚೀಲಗಳು, ವೈವಿಧ್ಯಮಯ ಕಲಾತ್ಮಕ ಕರಕುಶಲತೆಯಿಂದ ಕಂಗೊಳಿಸುವ ಬಣ್ಣ ಬಣ್ಣದ ಬ್ಯಾಗುಗಳು. ಮೊಬೈಲ್ ಇಡಲು, ಹಣ ಇಡಲು, ಪೆನ್ ಇಡಲು ಪ್ರತ್ಯೇಕ ವಿಭಾಗಗಳಿರುವ ಪರ್ಸುಗಳು... ಎಲ್ಲಿಗೆ ಹೋದರೂ ದೊಡ್ಡ ಬ್ಯಾಗಿನೊಳಗೆ ಈ ಎಲ್ಲ ವಸ್ತುಗಳು. ಅವರು ನಿಂತಲ್ಲೇ ವ್ಯಾಪಾರ ಶುರು. ಕೂತಲ್ಲಿ ಅಂಗಡಿ ಶುರು. ಜಾತಿ-ಧರ್ಮದಂತರದ ಮೇಲು-ಕೀಳಿನ ಭಾವನೆ ಬಿಟ್ಟು, ನಗುತ ಹರಟುತ ಕೆಲಸ ಮಾಡುವ ಪರಿಗೆ ಖಂಡಿತ ಖುಷಿಯಾಗುತ್ತದೆ. ಅಂಬುಬಾಯಿ, ಸುವರ್ಣಾ, ಅನೀತಾ, ಉಮಾದೇವಿ, ರೇಶ್ಮಾ, ಭಾಬೀ, ಹೀಗೆ ಹತ್ತಾರು ಜನ ಮಹಿಳೆಯರು ತರಹೇವಾರಿ ಬ್ಯಾಗುಗಳ ತಯಾರಿಕೆಯಲ್ಲಿ ತೊಡಗಿದರು. ಬೀದರಿನ ವಸ್ತು ಪ್ರದರ್ಶನ ಮಳಿಗೆಯಲ್ಲಿ ಇವರದ್ದೂ ಒಂದು. "ಇದೊಂದೇ ಕೆಲಸ ಮಾಡಿದ್ರ ಮಸ್ತ ಲಾಭ ಆಗ್ತದರೀ..." ಅನ್ನುವ ಉಮಾದೇವಿಗೆ ಇಂಥ ಚೆಂದನ ವಸ್ತುಗಳಿಗೆ ಸರಕಾರ ಮಾರ್ಕೆಟ್ ಕೊಡಬೇಕು. ಇಲ್ಲಿ ತಾವೇ ಖರೀದಿ ಮಾಡಬೇಕು. ಅನ್ನುತ್ತಾರೆ. ಖಾರಾ...ಅರಿಶಿನ ಪೌಡರ್‌ನ ಪ್ಯಾಕ್ ಮಾಡುವ ಚೆನ್ನಮ್ಮ "ಭಾಳ ಶ್ರಮಪಡ್ತೀವಿ. ಸರ್ಕಾರ ಇನ್ನೂ ಸ್ವಲ್ಪ ನೆರವು ಕೊಟ್ರ. ಅನೇಕ ಹೆಣ್ಮಕ್ಕಳಿಗೆ ಉದ್ಯೋಗ ಕೊಡ್ತೀವಿ".. ಎಂದು ಹೇಳುವಾಗ ಅವರ ಕಣ್ಣಲ್ಲಿ ವಿಶ್ವಾಸದ ಹೊಳಪಿತ್ತು. ಇಲ್ಲಿಯ ಮಹಿಳೆಯರು ಹೈದರಾಬಾದಿನ ಎನ್.ಐ.ಆರ್.ಡಿ. (National Institute of Rural Development) ಗೂ ಹೋಗಿ ಅನುಭವ ಹಂಚಿ ಬಂದರು.

ಈ ರೀತಿಯಲ್ಲಿ ಸಾವಿರಾರು ಸಂಘಗಳಿವೆ. ಎಲ್ಲರಿಗೂ ಕೆಲಸ ಮಾಡುವ ತವಕ. ಆದರೆ ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ? ಚಿಂತೆ ಇದೆ. ತರಬೇತಿ, ಮಾರುಕಟ್ಟೆ, ಸರ್ಕಾರವೇ ಖರೀದಿಸುವುದು, ಬಡ್ಡಿ ರಹಿತ ಸಾಲ, ಶೇ.50 ಸಬ್ಸಿಡಿ, ಈ ಸೌಲಭ್ಯಗಳು ಕಲ್ಪಿಸಿದಲ್ಲಿ ಖಂಡಿತ ಈ ಪುಟ್ಟ ಪುಟ್ಟ ಹಣತೆಗಳು ರಾಜ್ಯ ಬೆಳಗುವ ದೇದೀಪ್ಯಮಾನ ಜ್ಯೋತಿಗಳಾಗುತ್ತವೆ.

ದುಡಿವ ವರ್ಗದ ದನಿಗಳು...

ಪುಟ 2 ರಿಂದ

ಎಂಬ ಬಲವಾದ ಆಕಾಂಕ್ಷೆಯೊಂದಿಗೆ ಪಕ್ಷದ ಪೂರ್ಣಾವಧಿ ಕಾರ್ಯಕರ್ತ ರಾದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್‌ಐ) ಸೇರುವ ಮುನ್ನವೇ ತನ್ನ ಊರಾದ ಪಕ್ಕಲಡ್ಕದಲ್ಲಿ ಯುವಕ ಮಂಡಲದ ಸಕ್ರಿಯ ಕಾರ್ಯಕರ್ತರಾಗಿ ಆದರ ಅಧ್ಯಕ್ಷರೂ ಆಗಿದ್ದರು. ಮಂಡಲ ಪಂಚಾಯತ್ ಅಸ್ತಿತ್ವದಲ್ಲಿದ್ದಾಗ ಅತ್ಯಂತ ಕಿರಿಯ ವಯಸ್ಸಿನಲ್ಲಿ ಎರಡು ಬಾರಿ ಮಂಡಲ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಸಂಘ ಪರಿವಾರವು ನಡೆಸುತ್ತಿರುವ ಕೋಮುಗಲಭೆಗೆ ತುತ್ತಾಗಿರುವ ದ.ಕ. ಜಿಲ್ಲೆಯಲ್ಲಿ ಕೋಮು ಸೌಹಾರ್ದತೆಗಾಗಿ ಸಿ.ಪಿ.ಐ(ಎಮ್) ಕೈಗೊಂಡ ಎಲ್ಲಾ ಚಟುವಟಿಕೆಗಳಲ್ಲಿ ಯಾದವ ಶೆಟ್ಟಿಯವರು ಸಕ್ರಿಯವಾಗಿ ಭಾಗಿಯಾಗಿರುತ್ತಾರೆ. ಜಿಲ್ಲೆಯಲ್ಲಿ ಸೌಹಾರ್ದತೆಗಾಗಿ ರಚಿತವಾಗಿರುವ ಮಾನವತಾ ವೇದಿಕೆಯ ಕಾರ್ಯದರ್ಶಿಯೂ ಆಗಿರುತ್ತಾರೆ.

4 ತಿಂಗಳುಗಳ ಹಿಂದೆ ನಡೆದ ದ.ಕ.ಜಿಲ್ಲಾ ಸಿ.ಪಿ.ಐ(ಎಮ್) ಸಮ್ಮೇಳನದಲ್ಲಿ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದ ಯಾದವ ಶೆಟ್ಟಿಯವರು ರೈತ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಂತೆಯೇ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ, ರಾಜ್ಯಸಮಿತಿಯ ಸದಸ್ಯರಾಗಿ ಸಕ್ರಿಯರಾಗಿದ್ದಾರೆ. ಜಿಲ್ಲೆಯಲ್ಲಿ ಗ್ರಾಮ ಪಂಚಾಯತಿ ನೌಕರರನ್ನೂ ಕೂಡಾ ಸಂಘಟಿಸುತ್ತಾ ಬಹುಮುಖ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಯಾದವ ಶೆಟ್ಟಿಯವರು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿಯೂ ಆಗಿದ್ದಾರೆ.

ಕಾವಿ ಸಂವಿಧಾನ

ಹಲವರಿಗೆ ಸಹಜವೇ ಭೂಮಿಯಲಿ ನೋವು
ಬಹುಬೇಗ ಸ್ವರ್ಗಕ್ಕೆ ಕಳಿಸುವೆಂದು ನಾವು
ಕೆಲವರಿಗೆ ಇಲ್ಲಿಯೇ ಸ್ವರ್ಗ ಸೋಪಾನ
ಕಾವಿ ಪರಿವಾರದ್ದು ಈ ಸಂವಿಧಾನ

ಜನಸಂಖ್ಯೆ

ಅಸಂಖ್ಯ ದೇವ ದೇವತೆಗಳ ಸಂಸಾರ
ಧರೆಗಿಳಿದು ಹೂಡಿಹವು ಇಲ್ಲಿ ಬಿಡಾರ
ಹೀಗಾಗಿ ಬಡ ದಲಿತ ಜನಗಳಿಗೆ ಎಲ್ಲ
ಸ್ಥಳವಿಲ್ಲ ಹಿಡಿಕೂಳು ತಿಳಿ ನೀರು ಇಲ್ಲ

- ವಿಡಂಬಾರಿ

ಜನಶಕ್ತಿ ಕನ್ನಡ ವಾರಪತ್ರಿಕೆ

ಚುನಾವಣಾ ಕಣ ವೀಕ್ಷಣೆ : ಚಿಕ್ಕಬಳ್ಳಾಪುರ


ಇಲ್ಲಿದೆ ಭಿನ್ನ ರಾಜಕೀಯ ಮಾದರಿ

ಜನಪರ ಕಾರ್ಯಕ್ರಮ ಹೋರಾಟಗಳ ಆಧಾರದಲ್ಲಿ ಮತ ಕೇಳುವವರೇ ಕಡಿಮೆ. ಹೇಗಾದರೂ ಗೆಲ್ಲಬೇಕೆಂಬುದೇ ಹೆಚ್ಚಿನ ಪಕ್ಷ, ಅಭ್ಯರ್ಥಿಗಳ ಗುರಿ. ಆದರೆ ಸಿಪಿಐ(ಎಂ) ಪಕ್ಷದ್ದು ಭಿನ್ನ ರಾಜಕೀಯ.

2004 ವಿಧಾನಸಭೆ ಚುನಾವಣೆ ನಂತರ ಐದು ವರ್ಷಗಳ ಅವಧಿ ಪೂರ್ಣಗೊಳ್ಳುವ ಮೊದಲೇ ಬಂದಿರುವ ಈ ವಿಧಾನಸಭೆ ಚುನಾವಣೆ ಸಂದರ್ಭ ಸಾಧಕರ ಪಾಪದ ಕೂಸಾಗಿದೆ. ರಾಜ್ಯದ ಸಂಪನ್ಮೂಲವನ್ನು ಕೊಳ್ಳೆ ಹೊಡೆಯಲು ಜನಾದೇಶದ ವಿರುದ್ಧವಾಗಿ ನಡೆದ ಹಲವಾರು ಅನೈತಿಕ ಮೈತ್ರಿಗಳು ವಿಫಲವಾಗಿ, ಲೂಟಿ ಸಂಸ್ಕೃತಿಯನ್ನು ರಿನಿವಲ್ ಮಾಡಿಕೊಳ್ಳಲು ಅವರು ಮತ್ತೊಮ್ಮೆ ಮತದಾರರ ಮುಂದೆ ಹಲ್ಲು ಗಿಂಜುತ್ತಿದ್ದಾರೆ.

ಪತ್ರಿಕೆ ನಿಮ್ಮ ಕೈ ತಲುಪುವ ವೇಳೆಗೆ ಅಂತಿಮ ಹೋರಾಟ ಸಿದ್ಧವಾಗಿರುತ್ತದೆ. ಜಿದ್ದಾಜಿದ್ದಿ ರಾಜಕೀಯಕ್ಕೆ ಹೆಸರಾದ ಹೊಸದಾಗಿ ಜಿಲ್ಲೆಯಾಗಿ ರೂಪುಗೊಂಡಿರುವ ಚಿಕ್ಕಬಳ್ಳಾಪುರ ಜಿಲ್ಲೆ ಚಾರಿತ್ರಿಕ ಘಟನೆಗಳನ್ನು ಒಡಲಲ್ಲಿ ತುಂಬಿಕೊಂಡಿದ್ದರೂ ಅದರ ಅರಿವಿಲ್ಲದ ಸಮಕಾಲೀನ ರಾಜಕಾರಣಗಳು (ರಾಜಕೀಯ ಉದ್ಯಮಿಗಳು ಎನ್ನಬಹುದು) ಹೂಡಿಕೆ-ಗಳಿಕೆ ಕಾರ್ಯತಂತ್ರದಡಿ ಕಣಕ್ಕಿಳಿದಿದ್ದಾರೆ.

ಗೌರಿಬಿದನೂರು ತಾಲ್ಲೂಕಿನ ರಾಜಕಾರಣದಲ್ಲಿ ಹಲವಾರು ದಶಕಗಳಿಂದ ಪ್ರಾಬಲ್ಯ ಮುಂದುವರೆಸಿಕೊಂಡು ಬರುತ್ತಿರುವ ನಾಗಸಂದ್ರ ಕುಟುಂಬದ ಮೂವರು ಅಭ್ಯರ್ಥಿಗಳು ಜನತೆಗೆ ಮಣ್ಣೆರಚಲು ತುದಿಗಾಲಲ್ಲಿ ನಿಂತಿದ್ದಾರೆ. ಜಾತ್ಯಾತೀತ ಜನತಾದಳದಿಂದ ಜ್ಯೋತಿರೆಡ್ಡಿ ಸ್ಪರ್ಧಿಸಿದ್ದರೆ ಅವರ ಸಂಬಂಧಿ ಎನ್.ಹೆಚ್. ಶಿವಶಂಕರರೆಡ್ಡಿ ಕಾಂಗ್ರೆಸ್ ಪಕ್ಷದ ಹುರಿಯಾಳು. ಅದೇ ಕುಟುಂಬದ ರವಿನಾರಾಯಣ ರೆಡ್ಡಿ ಬಿಜೆಪಿ ಪಕ್ಷದಿಂದ ಕಣಕ್ಕಿಳಿದಿದ್ದಾನೆ. ಬಿಜೆಪಿ ಪಕ್ಷ ಎಷ್ಟು ಅನಾಗರಿಕವಾಗಿದೆಯೋ ಅಭ್ಯರ್ಥಿಯೂ ಅದಕ್ಕಿಂತಲೂ ಹೆಚ್ಚು ಅನಾಗರಿಕನಾಗಿದ್ದಾನೆ. ಮೂರು ತಿಂಗಳ ಹಿಂದೆ ಗೌರಿಬಿದನೂರಿನಲ್ಲಿ ಬಿಜೆಪಿ



ಏರ್ಪಡಿಸಿದ್ದ ಸಮಾವೇಶದಲ್ಲಿ ಸರಿಸುಮಾರು ನೂರು ಮಂದಿ ಇಹಲೋಕ ತ್ಯಜಿಸಬೇಕಾಗಿತ್ತು. ಸಮಾವೇಶಕ್ಕೆ ಆಗಮಿಸಿದ್ದವರಿಗೆ ಇಚ್ಛಾನುಸಾರ ಮದ್ಯ ಕುಡಿಸಿ ಪ್ರಜ್ಞೆ ಇಲ್ಲದೆ ಬೀದಿಗಳಲ್ಲಿ, ಚರಂಡಿಗಳಲ್ಲಿ ಬೀಳುವಂತೆ ಮಾಡಿದ್ದರು. ಒಂದೇ ಕುಟುಂಬದವರಾದ ಈ ಮೂವರು ಮೂರು ಪಕ್ಷಗಳಲ್ಲಿ ನಿಂತಿದ್ದು ಒಂದೇ ವರ್ಗ, ಜಾತಿಯ ಮತಗಳ ಮೇಲೆ ಕಣ್ಣಿಟ್ಟಿದ್ದಾರೆ. ಇದರ ಹೊರತಾಗಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಶೋಕ್ ಮತ್ತು ಸಿಪಿಎಂ ಪಕ್ಷದ ವತಿಯಿಂದ ಕಣಕ್ಕಿಳಿದಿರುವ ಸಿದ್ಧಗಂಗಪ್ಪ ಇತರ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ. ಸಿಪಿಐ(ಎಂ)ಗೆ ಚಳುವಳಿಯ ಒಲವೇ ಆಧಾರ. ಹಿಂದೆ ಇಲ್ಲಿನ ಕೆಲವು ಪ್ರದೇಶಗಳು ಬಾಗೇಪಲ್ಲಿ ಕ್ಷೇತ್ರದ ಭಾಗವಾಗಿದ್ದು, ಸಿಪಿಐ(ಎಂ)ನ್ನು ಜನ ಬೆಂಬಲಿಸಿದ್ದರು.

ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗೆ ಚಿಕ್ಕಬಳ್ಳಾಪುರ ಸಂಸದ ಜಾಲಪ್ಪ ಕೃಪಾಕಟಾಕ್ಷವಿದೆ. ಕುಬೇರನಾಗಿರುವ ಜಾಲಪ್ಪ ಮತ್ತು ಪಟ್ಟಣದ ಉದ್ಯಮಿ ಇಸ್ತೂರಿ ಕುಟುಂಬದ ಬೆಂಬಲವನ್ನು ನೆಚ್ಚಿಕೊಂಡು ವಿಧಾನಸಭೆ ಪ್ರವೇಶಿಸುವ ಕನಸನ್ನು ಅಶೋಕ್ ಕಾಣುತ್ತಿದ್ದಾರೆ. ಜಾಲಪ್ಪ ಸಪೋರ್ಟ್ ಮಾಡಿದ ಅಶ್ವಥ ನಾರಾಯಣರೆಡ್ಡಿಗೆ ಟಿಕೆಟ್ ನೀಡಲಿಲ್ಲ ಎಂಬ ಕಾರಣಕ್ಕಾಗಿಯೇ ಅಶೋಕ್‌ರನ್ನು ಕಣಕ್ಕಿಳಿಸಿದ್ದಾರೆ. ಬಿಜೆಪಿ, ಜಾತ್ಯಾತೀತ ದಳ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ಒಂದೇ ಕುಟುಂಬಕ್ಕೆ ಸೇರಿದ್ದು ಎಲ್ಲ ರಾಜಕೀಯ ಅವರಿಗೆ ಇರಬೇಕೆ ಎಂಬ ಪ್ರಶ್ನೆಯೂ ಅಲ್ಲಲ್ಲಿ ಕೇಳಿ ಬರುತ್ತಿದೆ. ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರಗಳಿಗೆ ತಾವು ಹೇಳಿದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿಲ್ಲ ಎಂಬ ಕಾರಣದಿಂದಾಗಿ ಎಲ್ಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗಳು ಸ್ಪರ್ಧೆಗಿಳಿದಿದ್ದಾರೆ. ಇದು ಮತ್ತೊಂದು ರೀತಿಯಲ್ಲಿ ವಿರೋಧಿ ಪಕ್ಷಗಳಿಗೆ ಸಹಕಾರಿಯಾಗಿದೆ. ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಭಿನ್ನಮತದ ಲಾಭ ಪಡೆದು ವಿಧಾನಸಭೆ ಪ್ರವೇಶಿಸುವ ಕನಸನ್ನು ಜ್ಯೋತಿ ರೆಡ್ಡಿ ಮತ್ತು ಬಿಜೆಪಿಯ ರವಿನಾರಾಯಣರೆಡ್ಡಿ ಕಾಣುತ್ತಿದ್ದಾರೆ. ಸಿಪಿಎಂ ಅಭ್ಯರ್ಥಿ ಸಿದ್ದಗಂಗಪ್ಪ ಮಾತ್ರ ಹೋರಾಟದ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಕೃಷಿ ಕಾರ್ಮಿಕರು, ರೈತರು, ಅಂಗನವಾಡಿ, ಅಕ್ಷರ ದಾಸೋಹ, ಗ್ರಾಮ ಪಂಚಾಯಿತಿ ನೌಕರರನ್ನು ಸಮಸ್ಯೆಗಳ ಈಡೇರಿಕೆಗೆ ಅವರನ್ನು ಸಂಘಟಿಸಲು ಹಗಲು ರಾತ್ರಿ ತಾಲ್ಲೂಕಿನಾದ್ಯಂತ ಓಡಾಡಿದವರಾಗಿದ್ದಾರೆ. ಸಿಪಿಎಂ ಪಕ್ಷ ನಡೆಸಿರುವ ಹೋರಾಟಗಳು ಮತ್ತು ಸಂಘಟನಾ ಶಕ್ತಿಯ ಆಧಾರದಿಂದಲೇ ಸಿದ್ಧಗಂಗಪ್ಪ ಚುನಾವಣಾ ಹೋರಾಟಕ್ಕೆ ಧುಮುಕಿದ್ದಾರೆ. ಇವರ ಹೊರತಾಗಿ ಬಿಎಸ್‌ಪಿ ಮತ್ತು ಎಸ್‌ಪಿ ಪಕ್ಷಗಳು ತಮಗೆ ಬರುವ ಮತಗಳನ್ನು ಮತ್ತೊಬ್ಬರ ಪರವಾಗಿ ಅಥವಾ ವಿರುದ್ಧವಾಗಿ ಹಾಕಿಕೊಳ್ಳಲು ಕಣದಲ್ಲಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿಯೂ ಕಾಂಗ್ರೆಸ್ ಬಂಡಾಯ ಆರಂಭವಾಗಿದೆ. ಗೌರಿಬಿದನೂರಿನ ಅಶ್ವಥನಾರಾಯಣರೆಡ್ಡಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಕಾಂಗ್ರೆಸ್ ಟಿಕೆಟ್‌ಗಾಗಿ ಪ್ರಯತ್ನಿಸಿದ ನವೀನ್ ಕಿರಣ್, ಯಲವಳ್ಳಿ ರಮೇಶ್ ಟಿಕೆಟ್ ವಂಚಿತರಾಗಿದ್ದಾರೆ. ಜಾಲಪ್ಪ ತನ್ನ



ಅಳಿಯ ನಾಗರಾಜ್‌ಗೆ ಟಿಕೆಟ್ ಕೊಡಿಸಲು ಪ್ರಯತ್ನಿಸಿ ವಿಫಲರಾಗಿದ್ದಾರೆ. ಹಾಗಾಗಿ ಇಲ್ಲಿಯೂ ಬಂಡಾಯದ ಅಲೆ ಎದ್ದಿದೆ. ಜಾತ್ಯಾತೀತ ಜನತಾದಳ ಅಭ್ಯರ್ಥಿ ಕೆ.ಪಿ.ಬಚ್ಚೇಗೌಡ ಕ್ಷೇತ್ರದಾದ್ಯಂತ ಚಿರಪರಿಚಿತ ವ್ಯಕ್ತಿಯಾಗಿದ್ದಾರೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಚಿಕ್ಕಬಳ್ಳಾಪುರ ದಲ್ಲಿ ಮೊದಲಿನಿಂದಲೂ ಜನತಾದಳದ ಗಾಳಿ ಹೊಂದಿರುವ ಕ್ಷೇತ್ರವಾಗಿದೆ. ಕೋಲಾರ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷರಾದ ಕೆ.ವಿ.ನಾಗರಾಜ್ ಸಹ ಜೆಡಿಎಸ್ ಟಿಕೆಟ್‌ನ ಆಕಾಂಕ್ಷಿಯಾಗಿದ್ದರು. ಈ ಎಲ್ಲ ಸಕಾರಾತ್ಮಕ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಬಚ್ಚೆಗೌಡ ವಿಧಾನಸಭೆ ಪ್ರವೇಶಿಸುವ ಹವಣಿಕೆಯಲ್ಲಿದ್ದಾರೆ. ಇದರ ಮಧ್ಯೆ ತಾನೂ ಒಂದು ಕೈ ನೋಡುವ ಪ್ರಯತ್ನವಾಗಿ ಬಿಜೆಪಿ ಸ್ಪರ್ಧೆಗಿಳಿದಿದೆ. ಅಷ್ಟೇನೂ ಪ್ರಭಾವ ಇಲ್ಲದಿದ್ದರೂ ಧರ್ಮಾಧಾರಿತ ಮತಗಳನ್ನೇ ನಂಬಿಕೊಂಡಿದ್ದಾರೆ. ಬಣಜಿಗ ಮತ್ತು ಒಕ್ಕಲಿಗ ಪರಿಶಿಷ್ಟ ಜಾತಿ ವರ್ಗದ ಸಮುದಾಯ ಕ್ಷೇತ್ರದಲ್ಲಿ ಗಣನೀಯ ಪರಿಣಾಮದಲ್ಲಿದ್ದು ಹೆಚ್ಚು ಕಾಂಗ್ರೆಸ್ ಪರ ಒಲವು ಹೊಂದಿದ್ದಾರೆ. ಒಕ್ಕಲಿಗ ಸಮುದಾಯ ದಳ ಪರ ಹೆಚ್ಚು ಒಲವು ಹೊಂದಿರುವಂತೆ ಕಾಣುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡು ವಿಧಾನಸಭೆ ಪ್ರವೇಶಿಸುವ ಲೆಕ್ಕಾಚಾರದಲ್ಲಿ ಅಶ್ವಥ ನಾರಾಯಣರೆಡ್ಡಿ ಮುಳುಗಿದ್ದಾರೆ. ಇನ್ನು ಹಣ, ಮದ್ಯ ಹೇಳುವಂತೆಯೇ ಇಲ್ಲ. ಯಾರೂ ಯಾರಿಗೂ ಕಡಿಮೆ ಇಲ್ಲ. ಎಲ್ಲ ದೊಡ್ಡ ಕುಳಗಳೇ.


ದೋಚುವವರು ಎದುರು ದುಡಿಯುವ ವರ್ಗದ ರಾಜಕೀಯ ಕಹಳೆ


ಚಿಕ್ಕಬಳ್ಳಾಪುರ ಮಾತ್ರವಲ್ಲ ಕರ್ನಾಟಕ ರಾಜ್ಯದಲ್ಲೇ ಗಮನ ಸೆಳೆದಿರುವ ಕ್ಷೇತ್ರಗಳಲ್ಲಿ ಬಾಗೇಪಲ್ಲಿಯೂ ಒಂದು. ಸಿಪಿಎಂ ಪಕ್ಷದ ಕಾಂ: ಜಿ.ವಿ.ಶ್ರೀರಾಮರೆಡ್ಡಿ ಮತ್ತು ಉಳಿದೆಲ್ಲ ಪಕ್ಷಗಳ ನಡುವೆ ನೇರ ಹಣಾಹಣಿ. ಸಂಘಟನಾ ಶಕ್ತಿ, ಕ್ಷೇತ್ರದಲ್ಲಿ ಕೈಗೊಂಡಿರುವ ಜನಪರ ಕಾರ್ಯಗಳೇ ಪ್ರಮುಖ ಅಜೆಂಡಾ. ವಿದ್ಯಾರ್ಥಿ ದೆಸೆಯಿಂದಲೂ ಹೋರಾಟವನ್ನೇ ಬದುಕಾಗಿ ಸ್ವೀಕರಿಸಿರುವ ಜಿವಿಎಸ್ ಮೂರನೇ ಬಾರಿ ವಿಧಾನಸಭೆಯಲ್ಲಿ ಸಿಪಿಎಂ ಪಕ್ಷವನ್ನು ಪ್ರತಿನಿಧಿಸಲು ಪಕ್ಷ ಅವರನ್ನು ಕಣಕ್ಕಿಳಿಸಿದೆ. ಭಾಗೇಪಲ್ಲಿಯಲ್ಲಿ ಈ ಹಿಂದೆ ನಡೆದ ಹಲವಾರು ಭೂಮಿ ಹೋರಾಟಗಳಿಗೆ ನೇತೃತ್ವ ನೀಡಿರುವ ಸಿಪಿಎಂ ಕ್ಷೇತ್ರದ ಜನತೆಗಾಗಿ ಇಂದೂ ತಮ್ಮ ಅವಿರತ ಹೋರಾಟ ಮುಂದುವರೆಸಿದೆ. ಅನ್ಯ ಪಕ್ಷಗಳಿಗೆ ಚುನಾವಣೆ ಉದ್ಯಮವಾದರೆ ಸಿಪಿಎಂ ಪಕ್ಷಕ್ಕೆ ಚುನಾವಣೆ ಎಂಬುದು ಮತ್ತೊಂದು ಹೋರಾಟ.

ಬಾಗೇಪಲ್ಲಿ ತಾಲ್ಲೂಕಿಗೆ ಸೇರಿರುವ, ಕಳೆದ ವಿಧಾನಸಭೆ ಚುನಾವಣೆ ಮತ್ತು ಶಿಡ್ಲಘಟ್ಟ ವಿಧಾನಸಭೆ ಕ್ಷೇತ್ರಗಳಿಗೆ ಸೇರಿದ್ದ ಚೇಳೂರು ಮತ್ತು ಮಿಟ್ಟೇಮರಿ ಹೋಬಳಿ ಕ್ಷೇತ್ರ ಮರುವಿಂಗಡನೆ ನಂತರ ಬಾಗೇಪಲ್ಲಿಗೆ ಸೇರಿವೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಸಂಪಂಗಿ, ಬಿಜೆಪಿ ಅಭ್ಯರ್ಥಿಯಾಗಿ ಚಿತ್ರನಟ ಸಾಯಿಕುಮಾರ್, ಜೆಡಿಎಸ್ ಅಭ್ಯರ್ಥಿಯಾಗಿ ನಾಗರಾಜರೆಡ್ಡಿ ಸ್ಪರ್ಧೆಗಿಳಿದಿದ್ದರೆ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸುಬ್ಬಾರೆಡ್ಡಿ ಕಣಕ್ಕಿಳಿದ್ದರು. ಇವರ್‍ಯಾರೂ, ಹೋರಾಟ, ಸಮಾಜಸೇವೆ, ಜನಪರ ಕಾಳಜಿ ಹೊಂದಿಲ್ಲ. ಯಾವುದೇ ನೀತಿ, ನಿಯಮ, ಸಿದ್ಧಾಂತ ಇಲ್ಲ. ರಾಜ್ಯ ಮತ್ತು ರಾಷ್ಟ್ರಮಟ್ಟದ ಕಾಂಗ್ರೆಸ್ ಮುಖಂಡರಿಗೆ ಬಕೇಟ್‌ಗಳನ್ನು ಹಿಡಿಯುತ್ತಾ, ಅಗತ್ಯವಾದ 'ಸಹಕಾರ'ಗಳನ್ನು ಮಾಡುತ್ತಾ ಬಂದಿರುವವರು. ಒಮ್ಮೆ ಶಾಸಕನಾಗಿದ್ದರೂ ಕ್ಷೇತ್ರದಲ್ಲಿ ಗುರುತರವಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ. ಅಲ್ಲಿ ಇಲ್ಲಿ ಕೆಲವು ಹಳ್ಳಿಗಳಿಗೆ ಬಸ್‌ಗಳನ್ನು ಹಾಕಿಸಿ ಪ್ರಚಾರ ಗಿಟ್ಟಿಸಿಕೊಂಡು ಅದನ್ನೇ ಬಂಡವಾಳ ಮಾಡಿಕೊಂಡು ಮತಯಾಚಿಸುತ್ತಿದ್ದಾರೆ. ಜಾತಿಯಲ್ಲಿ ಬಣಜಿಗನಾಗಿರುವ ಸಂಪಂಗಿ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿರುವ ಬಣಜಿಗರ ಮತಗಳನ್ನೇ ನಂಬಿಕೊಂಡಿದ್ದಾರೆ. ಚಿತ್ರನಟ, ಡೈಲಾಗ್ ಕಿಂಗ್ ಸಾಯಿಕುಮಾರ್‌ಗೆ ಬಾಗೇಪಲ್ಲಿ ಎಲ್ಲಿದೆ ಎಂದು ಅಭ್ಯರ್ಥಿಯಾದ ನಂತರವೇ ತಿಳಿದಿರುವುದು. ಈತ ಸಹ ಬಣಜಿಗ ಜಾತಿಗೆ ಸೇರಿದ್ದು ಅವರ ಮತಗಳನ್ನೇ ನಂಬಿಕೊಂಡು ವಿಧಾನಸಭೆ ಪ್ರವೇಶಿಸುವ ಕನಸು ಕಾಣುತ್ತಿದ್ದಾರೆ. ಬಿಜೆಪಿ ಗಣಿ ದೊರೆಗಳಾದ ಜನಾರ್ಧನ ರೆಡ್ಡಿ ಲಿಸ್ಟ್ ಮಾಡಿರುವ ನೂರು ಕ್ಷೇತ್ರಗಳಲ್ಲಿ ಬಾಗೇಪಲ್ಲಿಯೂ ಸೇರಿದೆ. ಬೆಂಗಳೂರಿನಲ್ಲಿ ಜನಾರ್ಧನರೆಡ್ಡಿ ಮತ್ತು ಬಿಜೆಪಿ ಮುಖಂಡರು ಮಾಡಿರುವ ಲ್ಯಾಂಡ್ ಮಾಫಿಯಾಗಳನ್ನೆಲ್ಲ ಬಯಲಿಗೆಳೆದ ಜಿವಿಎಸ್ ಅವರನ್ನು ವಿಧಾನಸಭೆ ಪ್ರವೇಶಿಸದಂತೆ ತಡೆಯುವುದೇ ಅವರ ಪ್ರಮುಖ ಅಜೆಂಡಾ ಆಗಿದೆ. ಅದಕ್ಕಾಗಿ ಎಷ್ಟು ಕೋಟಿಗಳಾದರೂ ಚೆಲ್ಲಲು ಸಿದ್ಧವಾಗಿದ್ದಾರೆ. ಇನ್ನು ಜೆಡಿಎಸ್‌ನ ನಾಗರಾಜರೆಡ್ಡಿ ಗ್ರಾನೈಟ್ ಕುಳ. ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದು ಸೋತಿದ್ದವರು. ನಾನು ಈಗಾಗಲೇ ಗೆದ್ದುಬಿಟ್ಟಿದ್ದೇನೆ ಎಂದು ಬೆಂಗಳೂರಿನಲ್ಲೆಲ್ಲಾ ಟಾಂ ಟಾಂ ಹೊಡೆದುಕೊಂಡು ಓಡಾಡುತ್ತಿದ್ದಾರೆ. ಒಕ್ಕಲಿಗರ ಮತಗಳ ಮೇಲೆ ಕಣ್ಣಿಟ್ಟಿದ್ದಾರೆ. ಎಷ್ಟು ಬೇಕಾದರೂ ಹಣ ಸುರಿಯಲು ಸಿದ್ಧ. ಎರಡು ವರ್ಷಗಳ ಹಿಂದಿನಿಂದಲೇ ಉಚಿತ ಸಾಮೂಹಿಕ ಮದುವೆಗಳನ್ನು ಮಾಡಿಸುವುದು, 'ಸಮಾಜಸೇವಾ' ಕಾರ್ಯಗಳನ್ನು ಕೈಗೊಳ್ಳುವುದು, ಕಂಡ ಕಂಡ ದೇವಾಲಯಗಳಿಗೆ ಹಣ ನೀಡುವುದು ಮಾಡಿಕೊಂಡು ಬಂದಿದ್ದಾರೆ. ಇದನ್ನೇ ತನ್ನ ಬಂಡವಾಳ ಮಾಡಿಕೊಂಡು ಪ್ರಚಾರದಲ್ಲಿ ತೊಡಗಿದ್ದಾರೆ. ಬಿಎಸ್‌ಪಿ ಅಭ್ಯರ್ಥಿಯೂ ಕಣದಲ್ಲಿದ್ದಾರೆ.

ಶಾಲಾ, ಕಾಲೇಜು - ಶಿಕ್ಷಣಕ್ಕೆ ಆದ್ಯತೆ







ಪ್ರಕಾಶಕರು: ಪುಸ್ತಕ ಪ್ರಕಾಶನ, ಮೈಸೂರು

ಅದು ಯಾರೇ ಆಗಿರಲಿ ಆಹಾರಾಭ್ಯಾಸಗಳು ಅವರವರ ಖಾಸಗಿ ವಿಚಾರ. ಅದರಲ್ಲಿ ಮೇಲು, ಕೀಳು ಎಂಬ ಪಾಲು ಮಾಡಿ ನೋಡುವುದೇನೂ ಅಗತ್ಯವಿಲ್ಲ. ಪ್ರತಿಯೊಂದು ಆಹಾರ ಪದ್ಧತಿಯನ್ನು ಗೌರವಿಸಬೇಕು. ಆದರೆ ಪುರೋಹಿತಶಾಹಿಗಳು ಇದನ್ನು ಒಪ್ಪಬೇಕಲ್ಲ! ಪುರೋಹಿತಶಾಹಿ ಮೌಲ್ಯ ಮೌಢ್ಯ ಎರಡೂ ಸೇರಿ ಬಿಟ್ಟರೆ ಮುಗಿದೇ ಹೋಯಿತು. ಕುವೆಂಪು ಅವರ ಕುರಿತ, ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ಕೃತಿಯಲ್ಲಿ ಈ ಆಹಾರ ಪದ್ಧತಿಯ ಸಂಬಂಧ ಬಹಳ ಸ್ವಾರಸ್ಯಕರ ಸಂಗತಿಗಳಿವೆ. ವೇದೋಪನಿಷತ್ತುಗಳನ್ನು ಬರೆದವರು ದನದ ಮಾಂಸ ತಿನ್ನುತ್ತಿದ್ದರೂ ಎಂದಿರುವ ಕುವೆಂಪು ಮಾತು, ಇಲ್ಲಿ ದಾಖಲಾಗಿದೆ. ಜನರ ಆಹಾರ ಪದ್ಧತಿಗಳನ್ನು ಕೋಮುದ್ವೇಷ ಹರಡುವುದಕ್ಕೆ ಕೋಮುಗಲಭೆಗೆ ಬಳಸಲಾಗುತ್ತಿರುವ ಈ ಸಂದರ್ಭದಲ್ಲಿ ನಿಮಗಾಗಿ ಪುಸ್ತಕದ ಅಧ್ಯಾಯವೊಂದರ ಆಯ್ದ ಭಾಗ.

ಅಸತೋಮ ಸದ್ಗಮಯ

ಅಣ್ಣ ಸಾಧಾರಣವಾಗಿ ಮಾರ್ಕೆಟ್ಟಿಗೆ ದಿನಸಿ ತರ್ಕಾರಿ ಇವುಗಳನ್ನು ಕೊಳ್ಳಲು ಹೋಗುತ್ತಿರಲಿಲ್ಲ. ನಾವೆಲ್ಲ ಬಹಳ ಚಿಕ್ಕವರಿದ್ದಾಗ ಎಲ್ಲೋ ಒಂದೆರಡುಸಾರಿ ನಮ್ಮನ್ನು ಕರೆದುಕೊಂಡು ಹೋಗಿದ್ದು ನನಗೆ ಜ್ಞಾಪಕ. ಮೊದಲಾಗಿ ಅಣ್ಣನಿಗೆ ಇವಕ್ಕೆಲ್ಲಾ ಕಾಲ ವ್ಯಯಿಸುವಷ್ಟು ಪುರುಸೊತ್ತು ಇರುತ್ತಿರಲಿಲ್ಲ. ಮೊದಲಾಗಿ ಅಣ್ಣನಿಗೆ ಗಲಾಟೆ, ಗಲಿಬಿಲಿ, ಅಲ್ಲಿ ಮಾರಾಟ ಮಾಡುವವರ ಬಳಿ ಮಾಡಬೇಕಾದ ಚೌಕಾಶಿ ಇವನ್ನೆಲ್ಲಾ ಕಂಡರೆ ಆಗುತ್ತಿರಲಿಲ್ಲ. ಅಣ್ಣನ ಕೈ ಹಿಡುಕೊಂಡು ಓಡಾಡುತ್ತಿದ್ದ ನಮಗೆ ಕೈ ಬಿಟ್ಟರೆ ಕಳದೇ ಹೋಗುವಷ್ಟು ದಿಗಿಲು, ಅಷ್ಟೊಂದು ಮೈಸೂರು ಮಾರ್ಕೆಟ್ಟಿನಲ್ಲಿ ನೂಕುನುಗ್ಗಲು. ಮಾಂಸ ಮತ್ತು ಮೀನಿನ ಮಾರ್ಕೆಟ್ಟಿಗಂತೂ ಮರ್ಯಾದಸ್ತರೂ, ಹೆಂಗಸರು ಮಕ್ಕಳು ತಲೆ ಹಾಕುವಂತೆಯೇ ಇರಲಿಲ್ಲ. ಕುರಿಮಾಂಸ ತಲೆಕೆಳಕಾಗಿ ನೇತುಕೊಂಡು ಕೈಯಲ್ಲಿ ಕತ್ತಿ ಝಳಪಿಸುತ್ತಾ ಮಾಂಸ ಮಾರುವವರು ಗಿರಾಕಿಗಳನ್ನು ಆಕರ್ಷಿಸಲು ಅತ್ಯಂತ ಅಸಭ್ಯವಾಗಿ ಕಿರಿಚಾಡುತ್ತಿದ್ದರು.

ಅಣ್ಣ ಚಿಕ್ಕಂದಿನಲ್ಲಿ ನಾನಾತರದ ಮೀನು ಶಿಕಾರಿ ಮಾಡುತ್ತಿದ್ದುದನ್ನೂ, ಮಳೆಗಾಲದಲ್ಲಿ ಮಳೆಗಾಲ ಪೂರ್ತಿ ಹಿಡಿಯುತ್ತಿದ್ದ ನಮುನಮೂನೆಯ ಮೀನುಗಳನ್ನೂ, ನಾನಾ ರೀತಿಯ ಮೀನು ಹಿಡಿಯುವ ಕ್ರಮಗಳನ್ನೂ, ಅವುಗಳಿಂದ ತಯಾರಿಸುತ್ತಿದ್ದ ನಾನಾ ರೀತಿಯ ಭಕ್ಷ್ಯಗಳನ್ನೂ ಬಾಯಲ್ಲಿ ನೀರೂರಿಸುವಂತ ನಮಗೆ ವಿವರಿಸಿದ್ದರು. ಅಣ್ಣನಿಗೆ ಮೀನೆಂದರೆ ತುಂಬಾ ಇಷ್ಟ. ಮೊನ್ನೆ ಮೊನ್ನೆಯವರೆಗೂ ನಾನು ರಾಮದಾಸ್ ಮೀನು ಹಿಡಿಯಲು ಗಾಳ ತಗೊಂಡು ಹೊರಟರೆ ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಕುತೂಹಲದಿಂದ ಕೇಳುತ್ತಿದ್ದರು. ಮೈಸೂರಿನ ಎಲ್ಲಾ ನಮ್ಮ ಬಂಧುಮಿತ್ರರೂ ನಾನು ರಾಮದಾಸ್ ಗಾಳ ಹಿಡಿದುಕೊಂಡು ಮೀನು ಹಿಡಿಯಲು ಸುತ್ತಾಡುವುದನ್ನು ಜುಗುಪ್ಸೆ ಮತ್ತು ತಿರಸ್ಕಾರದಿಂದ ನೋಡುತ್ತಿದ್ದರು. ಆಗ ನಮಗೆ ಇಬ್ಬರೇ ಇಬ್ಬರಿಂದ ಬೇಷರತ್ ಬೆಂಬಲ ದೊರಕಿದ್ದು. ಒಬ್ಬರು ಕುವೆಂಪು, ಇನ್ನೊಬ್ಬರು ರಾಮದಾಸ್ ಅಮ್ಮ. ಇವರಿಬ್ಬರೂ ಮಲೆನಾಡಿನವರಾದ್ದರಿಂದಲೇ ಮೀನು ಅವರ ನೆನಪಿನ ಅವಿಭಾಜ್ಯ ಅಂಗವಾಗಿತ್ತು. ಚಿಕ್ಕವರೆಲ್ಲಾ ಮೀನು ಹಿಡಿಯುವುದು ಬೆಸ್ತರು, ಶಿಳ್ಳೆಕ್ಯಾತರ, ಬುಳ್ಡೆ ಬೆಸ್ತರು ಮಾ[illegible]ಕಾದ ಕೆಲಸವೇ ಹೊರತು ಅಧ್ಯಾಪಕರೂ, ಬ[illegible] ಮಾಡಬೇಕಾದ ಕೆಲಸ ಅಲ್ಲವೇ ಅಲ ಎಂದು ದೃಢವಾಗಿ ನಂಬಿದ್ದರು. ನಾವು ಮಾತ್ರ ಮೀನು ಹಿಡಿದಾಗಲೆಲ್ಲಾ ಅದನ್ನು ಅಣ್ಣನಿಗೆ ತೋರಿಸುವುದೇ ನಮ್ಮ ಮೊದಲ ಕೆಲಸ. ರಾತ್ರಿ ಎಷ್ಟು ಹೊತ್ತಾಗಿದ್ದರೂ ಅಣ್ಣ ಎದ್ದು ಬಂದು ಅದನ್ನು ನೋಡಿ ಎಲ್ಲಿ ಹಿಡಿದಿರಿ ಇತ್ಯಾದಿಗಳನ್ನೆಲ್ಲಾ ಕೇಳದೇ ಇರುತ್ತಿರಲಿಲ್ಲ. ನಮ್ಮ ಮೀನು ಹಿಡಿದ ಕತೆಗಳನ್ನೆಲ್ಲಾ ತಾಳ್ಮೆಯಿಂದ ಶ್ರದ್ಧೆಯಿಂದ ಕೇಳಿ ತಾವು ಹಿಂದೆ ಊರಿನಲ್ಲಿ ಹಾವು ಮೀನು ಇತ್ಯಾದಿಗಳನ್ನು ಹಿಡಿದ ಕಥೆಗಳನ್ನು ಹೇಳುತ್ತಿದ್ದರು. ಅಣ್ಣನಿಗೆ ವಯಸ್ಸಿನ ಪರಿಮಿತಿ ಇಲ್ಲದಿದ್ದರೆ ಮಹಾಕವಿ, ರಾಷ್ಟ್ರಕವಿ



ಪದವಿಗಳನ್ನೆಲ್ಲಾ ಕಸದಬುಟ್ಟಿಗೆ ಎಸೆದು ನಮ್ಮ ಜೊತೆ ಗಾಳ ಹಿಡಿದು ಹೊರಡುತ್ತಿದ್ದರೆಂದು ಅನ್ನಿಸುತ್ತದೆ.

ಅಣ್ಣನಿಗೆ ಮೀನು ಇಷ್ಟವಾದ್ದರಿಂದ ಅಮ್ಮ ಆಗಾಗ ಯಾರ್ಯಾರಿಗೋ ಹೇಳಿ ಮೀನು ತರಿಸುತ್ತಿದ್ದರು. ಆದರೆ ನಾನು ಚೈತ್ರ ಮಾರ್ಕೆಟ್ಟಿಗೆ ಹೋಗಿ ವ್ಯಾಪಾರ ಮಾಡುವಷ್ಟು ದೊಡ್ಡವರಾದ ಮೇಲೆ ನಮಗೆ ಮೀನು ತರಲು ಹೇಳುತ್ತಿದ್ದರು. ಮೈಸೂರಿನ ಮೀನು ಮಾರ್ಕೆಟ್ಟು ಆಗ ಕೊಳಕಿನ ಮುದ್ದೆ. ಆದರೆ ನಮಗೆ ನಾನಾ ನಮೂನೆಯ ಮೀನುಗಳನ್ನು ನೋಡಲು ಅಲ್ಲಿ ಅವಕಾಶ ಸಿಗುತ್ತಿದ್ದುದರಿಂದ ಬಹಳ ಅಪ್ಯಾಯಮಾನವಾದ ಜಾಗವಾಗಿತ್ತು. ತರತರದ ಹಾವು ಮೀನುಗಳು, ಅವ್ವಲು, ಕುಚ್ಚು, ಕೊರವ, ಬಾಳೆ ಯಾವ್ಯಾವುದನ್ನು ಕೇಳುತ್ತೀರಿ! ಮೀನು ತಂದ ಮೇಲೆ ಮೀನು ಮಾರ್ಕೆಟ್ಟಿನಲ್ಲಿ ನೋಡಿದ ತರತರದ ಮೀನುಗಳ ಬಗ್ಗೆ ನಾವಿಬ್ಬರೂ ಕುಳಿತುಕೊಂಡು ಅಣ್ಣನಿಗೆ ವ್ಯಾಪಕವಾದ ವರದಿ ಒಪ್ಪಿಸುತ್ತಿದ್ದೆವು. ಮೀನು ಅಣ್ಣನಿಗೆ ಚಿಕ್ಕಂದಿನ ನೆನಪುಗಳನ್ನೆಲ್ಲಾ ಮರುಕಳಿಸುವಂತೆ ಮಾಡುತ್ತಿದ್ದರಿಂದಲೋ ಏನೋ ಅಣ್ಣನಿಗೆ ಅದರ ಬಗ್ಗೆ ತುಂಬಾ ಆಸಕ್ತಿ ಕುತೂಹಲ. ಆದರೆ ಅಮ್ಮನಿಗೆ ಮಾತ್ರ ಈ ಎಲ್ಲದರ ಬಗ್ಗೆ ತುಂಬಾ ಸಂಕೋಚ. ನಾವು ಮಾರ್ಕೆಟ್ಟಿನಿಂದ ಮೀನು ತಂದರೂ 'ಮನೆ ಹಿಂದುಗಡೆಯಿಂದಲೇ ಬನ್ನಿ, ಎದುರುಗಡೆ ಯಾರಾದರೂ ಕುಳಿತಿರುತ್ತಾರೆ'' ಎಂದು ಹೇಳುತ್ತಿದ್ದರು. ಸುತ್ತಮುತ್ತ ಬರೀ ಬ್ರಾಹ್ಮಣರ ಮನೆಗಳಿದ್ದುದರಿಂದಲೋ ಏನೋ ಅಮ್ಮ ಇದು ಬಹಿರಂಗವಾಗಿ ನಡೆಸುವ ವ್ಯವಹಾರ ಅಲ್ಲ ಎಂದೇ ತಿಳಿದಿದ್ದರು. ನಮ್ಮ ಅನ್ನಾಹಾರಗಳ ಬಗ್ಗೆ ಎಲ್ಲಾ ವ್ಯಾಪಿಸಿರುವ ಈ ವೈದಿಕ ಧರ್ಮದ ಪುಳಿಚಾರಿ ಮೌಲ್ಯಗಳಿಂದ ನಮ್ಮ ಸಮಾಜದ ಬ್ರಾಹ್ಮಣ ಶೂದ್ರರಾದಿಯಾಗಿ ಎಲ್ಲರೂ ಅನುಭವಿಸುತ್ತಿರುವ ಕಿರಿಕಿರಿ ಇಕ್ಕಟ್ಟು ಒಂದೊಂದು ತರದ್ದಲ್ಲ. ನಮ್ಮ ಮನೆಗೆ ಎಷ್ಟೋ ಜನ ಊಟದ ಹೊತ್ತಿಗೆ ಬರುತ್ತಾರೆ. ಅವರನ್ನು ಊಟ ಮಾಡಿರೆಂದು ಹೇಳುವ ಮೊದಲು ಮಾಂಸಾಹಾರಿ ಗಳೋ ಅಲ್ಲವೋ ಎಂದು ಕೇಳಬೇಕು. ಎಷ್ಟೋ ಜನ ಬ್ರಾಹ್ಮಣ ಮಿತ್ರರು ಅವರ ಮನೆಯಲ್ಲಿ ಎಲ್ಲರೂ ತಿನ್ನುತ್ತಾರೆ, ತಾವೊಬ್ಬರು ತಿನ್ನುವುದಿಲ್ಲವೆಂದೂ, ಆದರೆ ಅದಕ್ಕೆ ತಮ್ಮ ಜಾತಿನಿಷ್ಟೆ ಕಾರಣವಲ್ಲವೆಂದೂ, ಮಾಂಸಾಹಾರ ತಮ್ಮ ದೇಹ ಪ್ರಕೃತಿಗೆ ಒಗ್ಗುವುದಿಲ್ಲವೆಂದೂ ಬಹಳ ಕಸಿವಿಸಿ ಪಟ್ಟುಕೊಂಡು ಹೇಳುತ್ತಾರೆ. ಮತ್ತೆ ಕೆಲವರು ತಾವು ಸ್ವಲ್ಪವಾದರೂ ಜಾತ್ಯಾತೀತ ಧೋರಣೆಯುಳ್ಳವರೆಂದು ತೋರಿಸಿಕೊಳ್ಳಲು ತಾವು ಮಾಂಸ ತಿನ್ನದಿದ್ದರೂ ಮೊಟ್ಟೆ ತಿನ್ನುವುದಕ್ಕೆ ಅಡ್ಡಿ ಇಲ್ಲವೆಂದು ಹೇಳುತ್ತಾರೆ. ಜಾತಿ ಕಟ್ಟಳೆ ಸಂಪ್ರದಾಯಗಳನ್ನೆಲ್ಲಾ ಕಸದಬುಟ್ಟಿಗೆ ಎಸೆದಿರುವ ನನಗೂ ಇದೊಂದು ಹಿಂಸೆ. ವಾಸ್ತವವಾಗಿ ಯಾರು ಯಾವ ಜಾತಿಯಾದರೆ ಏನು? ಅವರು ಏನನ್ನು ತಿಂದರೆ ನನಗೇನು? ಅವರು ಸಸ್ಯಾಹಾರಿಗಳೋ ಮಾಂಸಾಹಾರಿಗಳೋ ಎಂದು ಕೇಳುವುದರ ಮುಖಾಂತರ ಅವರ ಜಾತಿ, ಸಂಪ್ರದಾಯಗಳನ್ನೆಲ್ಲಾ ಪ್ರಸ್ತಾಪ ಮಾಡುವಂತಾಯ್ತಲ್ಲ ಎಂದು ನನಗೂ ಕಿರಿಕಿರಿ. ನಮ್ಮಂಥ ರೋಗಗ್ರಸ್ತ ಸಮಾಜವೇ ಇನ್ನೆಲ್ಲೂ ಇಲ್ಲೆಂದು ನನ್ನ ಭಾವನೆ. ತೆಪ್ಪಗೆ ನಾಲ್ಕುಜನ ಕೂತು ಬೇಕಾದುದನ್ನು ತಿಂದು ಎದ್ದು ಹೋಗಲೂ ಇಲ್ಲಿ ನೂರೆಂಟು ಸಮಸ್ಯೆಗಳು. ಮೊನ್ನೆ ನನ್ನ ಮಿತ್ರನೊಬ್ಬ, ಮಾಂಸಾಹಾರಿ, ಮೊದಲಿಯಾರಿ, ಪಲಾವು ತಿಂದು ಆಮೇಲೆ ಮೊಸರನ್ನ ಬಡಿಸಲು ಹೋದರೆ ಪ್ರತಿಭಟಿಸಿದ. ಪಲಾವು ಶೂದ್ರ ಅಂತೆ! ಮೊಸರನ್ನ ಬ್ರಾಹ್ಮಣ ಅಂತೆ. ಹೊಟ್ಟೆಯಲ್ಲಿ ಸಹ ಅವರೆಡೂ ಮಿಕ್ಸ್ ಆಗಬಾರದು ಅಂದ. ನಿನ್ನ ಶಾಸ್ತ್ರಕ್ಕೆ ಬೆಂಕಿ ಹಾಕ ಎಂದು ಬಯ್ದಿದ್ದಕ್ಕೆ, ಅದಕ್ಕೆ ತುಂಬಾ ವೈಜ್ಞಾನಿಕ ಆಧಾರಗಳಿವೆ ಎಂದು ಆಯುರ್ವೇದ ಕೊರೆದ.

ಹಿಂದೂ ಸಮಾಜದ ಈ ಮನೋವಿಕಾರಗಳನ್ನು ಸುಲಭದಲ್ಲಿ ನಿವಾರಿಸುವುದು ಅಸಾಧ್ಯ ಎಂದೆನಿಸುತ್ತದೆ. ಅಣ್ಣ ಅಂತೂ ತಮ್ಮ ಜೀವಮಾನವಿಡೀ ಇಂಥ ಕಂದಾಚಾರದ ಹಿಂದೂ ಧರ್ಮದ ವಿರುದ್ಧ ಹೋರಾಡಿದರು. ಇತರ ಜಾತಿಯವರಿರಲಿ ಒಕ್ಕಲಿಗರಲ್ಲಿ ಸಹ ಹೆಚ್ಚು ಸುಧಾರಣೆ ಮಾಡಲಾಗಲಿಲ್ಲ. ಕವಿಶೈಲದಲ್ಲಿ ಅಣ್ಣನ ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಎಲ್ಲಾ ಚಿತೆಯ ಮೇಲೆ ಒಂದೊಂದು ಗಂಧದ ಚಕ್ಕೆಯನ್ನಿಡುತ್ತಿದ್ದರು. ನನಗೂ ಹೇಳಿದರು. ನನಗೆ ಇದೊಂದು ಶಾಸ್ತ್ರ ಎಂದು ಗೊತ್ತಿರಲಿಲ್ಲ. ಅಂತಿಮ ಗೌರವ ಈ ರೀತಿ ಸಮರ್ಪಿಸುತ್ತಿದ್ದಾರೆ ಎಂದು ಹೋದೆ. ಚಕ್ಕೆ ತೆಗೆದು ಇಡುತ್ತಾ ಇರಬೇಕಾದರೆ ಹಿಂದಿನಿಂದ ಯಾರೋ 'ಅಯ್ಯೋಯ್ಯೋ ಬಲಗೈಲಿ ಇಡಬಾರದು. ಎಡಗೈಲಿ ಇಡಬೇಕು' ಎಂದರು. ಹಿಂದುರಿಗಿ ನೋಡಿದೆ! ನನ್ನ ಮಿತ್ರರಾದ ಡಿ.ಬಿ. ಚಂದ್ರೇಗೌಡರೇ ನಿಂತಿದ್ದಾರೆ! ನನಗೆ ಅಣ್ಣನ ಇಡೀ ಜೀವಮಾನದ ಬೋಧನೆ, ಅವಿರತ ಹೋರಾಟ, ಕೊಟ್ಟಕೊನೆಯ ಅವರ ಸಂದೇಶ ಎಲ್ಲ ಮನಃಪಟಲದಲ್ಲಿ ಒಂದು ಕ್ಷಣ ಸುಳಿದೋಯ್ತು. ಒಕ್ಕಲಿಗರ, ಶೂದ್ರರ ದೌರ್ಬಲ್ಯಗಳನ್ನು ನೆನೆದು ದುಃಖವಾಯ್ತು. ಇದು ಮಾತಿಗೆ ಸಮಯವಲ್ಲವೆಂದು ಚೆನ್ನಾಗಿ ಗೊತ್ತಿದ್ದೂ "ಚಂದ್ರೇಗೌಡರೇ, ಕುವೆಂಪು ಇಡೀ ಜೀವಮಾನ ಹೇಳಿದ್ದೆಲ್ಲಾ ನಿರರ್ಥಕ. ನಾವೀಗ ಎಡಗೈಯಲ್ಲಿ ಇಟ್ಟರೆ! ಏನು ಮಾಡಲಿ ಹೇಳಿ!" ಎಂದೆ. ಚಂದ್ರೇಗೌಡರಿಗೆ ನನ್ನ ಪ್ರಶ್ನೆಯ ಅರ್ಥವಾಗಿರಬೇಕು. "ನಿಮ್ಮ ಇಷ್ಟ. ಸ್ಸಾರಿ!!" ಎಂದರು. ನಾನು ಎಡಗೈಲಿ ಇಡಲಿಲ್ಲ.

ಒಂದು ದಿನ ಮಿಡಲ್ ಸ್ಕೂಲ್ ನಾಲ್ಕನೇ ಕ್ಲಾಸಿನಲ್ಲಿ ನಾನು ಓದುತ್ತಿದ್ದಾಗ ನಮ್ಮ ಮೇಷ್ಟರೊಬ್ಬರು ಕುವೆಂಪು ಬರೆದ ಕುಮಾರವ್ಯಾಸ ಪದ್ಯ ಪಾಠ ಮಾಡುತ್ತಾ ಅಣ್ಣ ಕಾವ್ಯ ರಚನೆ ಮಾಡುತ್ತಾ ಮಾಂಸಾ ಹಾರವನ್ನು ಸಂಪೂರ್ಣ ವರ್ಜಿಸಿರುತ್ತಾರೆಂದೂ, ಮಡಿ ಜೀವನ ನಡೆಸುತ್ತಾ ಅವರು ಬರೆಯುವುದೆಂದೂ ಬೊಗಳೆ ಹೊಡೆದರು. ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಕವಿಯ ವಿಚಾರ ಹೇಳುತ್ತಾ ಅಲ್ಲಿ ಕುವೆಂಪು ಒಕ್ಕಲಿಗರು ಎಂಬುದನ್ನು ಗಮನಿಸಿ ಅವರಿಗೆ ಕೊಂಚ ಇರಿಸುಮುರುಸಾಗಿರ ಬಹುದು. ಆದ್ದರಿಂದ ಕಾವ್ಯ ರಚನೆಯ ಪಾವಿತ್ರ್ಯವನ್ನು ಹುಡುಗರಿಗೆ ಮನದಟ್ಟು ಮಾಡಿಸಲು ಹೀಗೆ ಹೇಳಿದ್ದರು. ಕೆಲವು ಹುಡುಗರು ನನಗೆ ಮುತ್ತಿಕೊಂಡು "ನಿಮ್ಮಪ್ಪ ಮಡಿ ಉಟ್ಟುಕೊಂಡು ಪದ್ಯ ಬರೆಯುತ್ತಾರಂತೆ ಅಂದರಲ್ಲಾ ಮೇಷ್ಟರು, ಹೌದಾ?" ಎಂದು ಕೇಳಿದರು. ವಾಸ್ತವವಾಗಿ ಅಣ್ಣನ ಅನ್ನಾಹಾರಗಳಲ್ಲಿ ಯಾವುದೇ ಗಣನೀಯ ಬದಲಾವಣೆಯನ್ನೂ ನಾನು ಗಮನಿಸಿರಲಿಲ್ಲ. ಅಣ್ಣ ಯಾವಾಗ ಪದ್ಯ ಬರೆಯುತ್ತಾರೋ ಯಾವಾಗ ಓದುತ್ತಾರೋ ಅದನ್ನೂ ನಾನು ಗಮನಿಸಿರಲಿಲ್ಲ. ನಮಗೇನಾದರೂ ಖಾಯಿಲೆ ಕಸಾಲೆ ಆದಾಗ ಮಾತ್ರ ನಮ್ಮ ಅನ್ನಾಹಾರಗಳ ಬಗ್ಗೆ ಗಮನ ಕೊಡುತ್ತಿದ್ದೇವೆ ಹೊರತು ಮಿಕ್ಕ ಯಾವ ಸಂದರ್ಭದಲ್ಲೂ ನಾನು ಅತ್ತ ಗಮನವನ್ನೇ ಹರಿಸಿರಲಿಲ್ಲ. ಮೇಷ್ಟರು ಪದ್ಯ ಬರೆಯಲು ಸಹ ಹೀಗೆಲ್ಲಾ ನಿಷೇಧಗಳಿವೆ ಎಂದಿದ್ದು ಸುಳ್ಳೆಂದು ನನಗೆ ಒಳಗೊಳಗೇ ಅನ್ನಿಸಿತ್ತು. ಆದರೂ ಅಲ್ಲಿದ್ದವರೆಲ್ಲಾ ಬ್ರಾಹ್ಮಣ ಹುಡುಗರಾಗಿದ್ದ ರಿಂದಲೂ, ಮೇಷ್ಟರು ಆ ವಿಚಾರವನ್ನು ಬಹಳ ಗಂಭೀರವಾಗಿ ಹೇಳಿದ್ದರಿಂದಲೂ ಅದನ್ನು ಸುಳ್ಳೆದು →

ಅಣ್ಣನಿಗೆ ವಯಸ್ಸಿನ ಪರಿಮಿತಿ ಇಲ್ಲದಿದ್ದರೆ ಮಹಾಕವಿ, ರಾಷ್ಟ್ರಕವಿ ಪದವಿಗಳನ್ನೆಲ್ಲಾ ಕಸದಬುಟ್ಟಿಗೆ ಎಸೆದು ನಮ್ಮ ಜೊತೆ ಗಾಳ ಹಿಡಿದು ಹೊರಡುತ್ತಿದ್ದರೆಂದು ಅನ್ನಿಸುತ್ತದೆ.

ಮೊನ್ನೆ ನನ್ನ ಮಿತ್ರನೊಬ್ಬ, ಮಾಂಸಾಹಾರಿ, ಮೊದಲಿಯಾರಿ, ಪಲಾವು ತಿಂದು ಆಮೇಲೆ ಮೊಸರನ್ನ ಬಡಿಸಲು ಹೋದರೆ ಪ್ರತಿಭಟಿಸಿದ. ಪಲಾವು ಶೂದ್ರ ಅಂತೆ! ಮೊಸರನ್ನ ಬ್ರಾಹ್ಮಣ ಅಂತೆ. ಹೊಟ್ಟೆಯಲ್ಲಿ ಸಹ ಅವರೆಡೂ ಮಿಕ್ಸ್ ಆಗಬಾರದು ಅಂದ. ನಿನ್ನ ಶಾಸ್ತ್ರಕ್ಕೆ ಬೆಂಕಿ ಹಾಕ ಎಂದು ಬಯ್ದಿದ್ದಕ್ಕೆ, ಅದಕ್ಕೆ ತುಂಬಾ ವೈಜ್ಞಾನಿಕ ಆಧಾರಗಳಿವೆ ಎಂದು ಆಯುರ್ವೇದ ಕೊರೆದ.

ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಗಳು ಹತ್ತಿರವಾಗುತ್ತಿವೆ. ಎಡರಂಗದ ವಿರುದ್ಧ ಎಲ್ಲ ಪ್ರತಿಗಾಮಿಗಳೂ ಒಂದುಗೂಡಿದ್ದಾರೆ. ಸಿಪಿಐ(ಎಂ) ಕಾರ್ಯಕರ್ತರ ಹತ್ಯೆಯೂ ತೀವ್ರವಾಗುತ್ತಿದೆ.

ಪಂಚಾಯತ್ ಚುನಾವಣೆಗಳು

ಪಶ್ಚಿಮ ಬಂಗಾಳದಲ್ಲಿ ಮತ್ತೆ ಪ್ರತಿಗಾಮಿಗಳ 'ಮಹಾಮೈತ್ರಿ'

ಪಶ್ಚಿಮ ಬಂಗಾಳದಲ್ಲಿ ಈಗ ಪಂಚಾಯತು ಚುನಾವಣೆಗಳ ಪ್ರಚಾರ ಆರಂಭವಾಗಿದೆ. ಸಹಜವಾಗಿಯೇ ಅಲ್ಲಿನ ಪ್ರತಿಗಾಮಿ ಶಕ್ತಿಗಳ ಪಾಳೆಯದಲ್ಲಿ "ಮಹಾಜೋತ್'(ಮಹಾಮೈತ್ರಿ)ನ ಭರಾಟೆಯೂ ಕಾಣಲಾರಂಭಿಸಿದೆ. ಈ ಬಾರಿಯಂತೂ ಸಿಪಿಐ(ಎಂ) ನೇತೃತ್ವದ ಎಡರಂಗದ ವಿರುದ್ಧ ನಂದಿಗ್ರಾಮದ ಹಿಂಸಾತ್ಮಕ ಮುತ್ತಿಗೆಯಲ್ಲಿ ಒಟ್ಟುಗೂಡಿದ ಅಲ್ಲಿನ ಎಲ್ಲ ಪ್ರತಿಗಾಮಿ ಶಕ್ತಿಗಳ ಮಹಾಮೈತ್ರಿಯನ್ನು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಕ್ರೋಢೀಕರಿಸುವ ಪ್ರಯತ್ನ ನಡೆದಿದೆ. ಎಂದಿನಂತೆ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ/ಆರೆಸ್ಸೆಸ್ ಅಷ್ಟೇ ಅಲ್ಲ, ಮುಸ್ಲಿಂ ಮೂಲಭೂತವಾದಿಗಳು, ಮಾವೋವಾದಿ ಗಳು ಎನಿಸಿಕೊಳ್ಳುವವರು ಮತ್ತು ವಿದೇಶೀ ನಿಧಿ ಪಡೆಯುವ ಎನ್‌ಜಿಒ(ಸ್ವಯಂಸೇವಾ ಸಂಸ್ಥೆ)ಗಳನ್ನೂ ಒಳಗೊಳ್ಳುವ ಪ್ರಯತ್ನ ನಡೆದಿದೆ. ನಂದಿಗ್ರಾಮದಲ್ಲಿ ಇವರೆಲ್ಲಾ ಜತೆಗಿದ್ದರು, ಇವರ ಬೆಂಬಲಕ್ಕೆ ಕಾರ್ಪೊರೇಟ್ ಮಾಧ್ಯಮವು ನೀತಿ-ನಿಯಮ ಗಳನ್ನೆಲ್ಲ ಗಾಳಿಗೆ ತೂರಿ ಧಾವಿಸಿತ್ತು. ಈಗ ಮತ್ತೆ ಅಂತಹ ಪ್ರಯತ್ನ ಆರಂಭವಾಗಿದೆ.

1977ರಲ್ಲಿ ತುರ್ತು ಪರಿಸ್ಥಿತಿ ಮುಗಿದಾಗ ಬಂಗಾಳದಲ್ಲಿ ಎಡರಂಗ ಜಯಶಾಲಿಯಾಗಿ ಅಧಿಕಾರಕ್ಕೆ ಬಂದಕೂಡಲೇ ಮೂರು ಹಂತಗಳ ಪಂಚಾಯತು ವ್ಯವಸ್ಥೆಯನ್ನು ತರಲಾಯಿತು. ಅಂದರೆ ರಾಜೀವ್ ಗಾಂಧಿ ಸರಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು ಇಡೀ ದೇಶದಲ್ಲಿ ಪಂಚಾಯತು ವ್ಯವಸ್ಥೆಯನ್ನು ತರುವ ಎಷ್ಟೋ ಮೊದಲೇ ಪಶ್ಚಿಮ ಬಂಗಾಳದಲ್ಲಿ ಅದು ಚಾಲ್ತಿಗೆ ಬಂದಿತ್ತು.

ಸಾಮಾನ್ಯವಾಗಿ ಪಶ್ಚಿಮ ಬಂಗಾಳದಲ್ಲಿ ಪಂಚಾಯತು ಚುನಾವಣೆಗಳು ಎರಡು ವಿಧಾನ ಸಭಾ ಚುನಾವಣೆಗಳ ನಡುವೆ ಬರುತ್ತವೆ. ಆದ್ದರಿಂದ ರಾಜ್ಯ ಸರಕಾರದ ಕಾರ್ಯ ನಿರ್ವಹಣೆಯ ಬಗ್ಗೆ



ಜನಗಳ ಭಾವನೆ ಏನು ಎಂಬುದರ ಸಂಕೇತ ಇದರಲ್ಲಿ ಸಿಗುತ್ತದೆ. ಅಷ್ಟೇ ಅಲ್ಲ, ಜನ ರಾಜ್ಯ ಸರಕಾರದ ನೀತಿಗಳಲ್ಲಿ ಎಂತಹ ಬದಲಾವಣೆಗಳನ್ನು ನಿರೀಕ್ಷಿಸುತ್ತಿದ್ದಾರೆ ಎಂಬುದರ ಸಂಕೇತವೂ ಸಿಗುತ್ತದೆ. ಕಳೆದ ಮೂರು ದಶಕಗಳಿಂದ ಪಶ್ಚಿಮ ಬಂಗಾಳದ ಪ್ರತಿಗಾಮಿ ಶಕ್ತಿಗಳು ಎಡರಂಗವನ್ನು ಪಂಚಾಯತು ಚುನಾವಣೆಗಳಲ್ಲಿ ಸೋಲಿಸಲು ಶತಪ್ರಯತ್ನ ಪಟ್ಟರು, ಈ ಮೂಲಕ ವಿಧಾನಸಭಾ ಚುನಾವಣೆಗಳಲ್ಲಿ ವಿಜಯಕ್ಕೆ ನಾಂದಿ ಹಾಕಬಹುದು ಎಂಬುದು ಅವರ ಆಸೆ. ಆದರೆ ಇದುವರೆಗೂ ಅವರಿಗೆ ದಕ್ಕಿರುವುದು ತೀವ್ರ ಹತಾಶೆಯೇ. ಈ ಬಾರಿ ನಂದಿಗ್ರಾಮದ ಘಟನೆಯ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ಪ್ರಯತ್ನ ನಡೆದಿದೆ. ಆದರೆ ಈ ಬಾರಿಯೂ ಅವರಿಗೆ ಹತಾಶೆಯೇ ಕಾದಿದೆ ಎಂಬುದು ರಾಜಕೀಯ ವೀಕ್ಷಕರ ಅಭಿಪ್ರಾಯ.

ವಿಶ್ವದ ಎಲ್ಲೇ ಆಗಲಿ, ಕಮ್ಯುನಿಸ್ಟ್ ನೇತೃತ್ವದ ಪ್ರಗತಿಪರ ಶಕ್ತಿಗಳ ಮುನ್ನಡೆಗೆ ಪ್ರತಿಗಾಮಿ ಶಕ್ತಿಗಳ ಅಡ್ಡಗಾಲು ಇಂದು ನಿನ್ನೆಯದಲ್ಲ. ಮಾರ್ಕ್ಸ್-ಎಂಗೆಲ್ಸ್‌ರ "ಕಮ್ಯುನಿಸ್ಟ್ ಪ್ರಣಾಳಿಕೆ"ಯ ಆರಂಭದ ವಾಕ್ಯವೇ ಆಗ ಉದಯಗೊಳ್ಳುತ್ತಿದ್ದ ಕಮ್ಯುನಿಸ್ಟ್ ಶಕ್ತಿಯ ಬಗ್ಗೆ ಯುರೋಪಿನ ಎಲ್ಲ ಪ್ರತಿಗಾಮಿ ಶಕ್ತಿಗಳು ಒಂದಾಗಿದ್ದ ಬಗ್ಗೆ ಹೇಳಿತ್ತು. ಹದಿನಾರು ದಶಕಗಳ ನಂತರವೂ ಪರಿಸ್ಥಿತಿ ಬದಲಾಗಿಲ್ಲ, ಅದು ಎಡಶಕ್ತಿಗಳ ನೇತೃತ್ವದಲ್ಲಿ ವರ್ಗ ಬಲಾಬಲ ಜನಸಾಮಾನ್ಯರ ಪರವಾಗಿ ಬದಲಾಗುವ ವರೆಗೂ ಹೀಗೆಯೇ ಇರುತ್ತದೆ.

ಪಶ್ಚಿಮ ಬಂಗಾಳದಲ್ಲಿ ಈ ಬಾರಿ, ತಾವು ಮಾವೋವಾದಿಗಳು ಎಂದು ಹೇಳಿ ಕೊಳ್ಳುವವರು ಈ ಪ್ರತಿಗಾಮಿ ಕೂಟದ ಬಾಡಿಗೆ ಕೊಲೆಗಡುಕರಂತಾಗುತ್ತಿದ್ದಾರೆ. 2008ರಲ್ಲಿ ಈಗಾಗಲೇ ಅವರು 13 ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಗುರಿಯಿಟ್ಟು ಸಾಯಿಸಿದ್ದಾರೆ. 1967ರಲ್ಲಿ ನಕ್ಸಲೀಯರು(ಇಂದಿನ ಮಾವೋವಾದಿಗಳು) ಎಂದೆನಿಸಿಕೊಂಡವರು 'ಜನತಾಯುದ್ಧ' ದ ಘೋಷಣೆಯೊಂದಿಗೆ ಸಿಪಿಐ(ಎಂ) ನಿಂದ ಪ್ರತ್ಯೇಕಗೊಂಡಾಗ ಆರಂಭವಾದ ಪ್ರತಿಗಾಮಿ ಶಕ್ತಿಗಳ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯ ನಂತರ 1977ರಲ್ಲಿ ಸಂಸದೀಯ ಪ್ರಜಾಪ್ರಭುತ್ವ ಮತ್ತೆ ನೆಲೆಗೊಂಡಾಗ ಎಡರಂಗ ಭಾರೀ ಬಹುಮತದಿಂದ ಅಧಿಕಾರಕ್ಕೆ ಬಂತು. ಅಂದಿನಿಂದ ಸತತವಾಗಿ ಪ್ರತಿಗಾಮಿ ಶಕ್ತಿಗಳು ಮತ್ತೆ ಹಳೆಯ ಜಾಡಿಗೆ ಹಿಂದಿರುಗುವ ಪ್ರಯತ್ನ ನಡೆಸಿದರೂ, ಪ್ರತಿಬಾರಿಯೂ ಎಡರಂಗ ಜಯಶಾಲಿಯಾಗಿದೆ. ಈ ಬಾರಿಯೂ ಮುಂಬರುವ ಪಂಚಾಯತು ಚುನಾವಣೆಗಳಲ್ಲಿ ಅಲ್ಲಿನ ಬಂಗಾಳದ ಗ್ರಾಮೀಣ ಜನತೆ ಪ್ರತಿಗಾಮಿಗಳ ಹುನ್ನಾರಗಳನ್ನೆಲ್ಲ ಮತ್ತೊಮ್ಮೆ ಸೋಲಿಸುತ್ತಾರೆ ಎಂಬುದು ದೇಶದ ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆ. ○

→

ಹೇಳಿ ಅಲ್ಲಗಳೆದರೆ ಅಣ್ಣನ ಮರ್ಯಾದೆಗೇ ಕುಂದಾಗಬಹುದೆಂದು ಯೋಚಿಸಿ ಹೌದು ಎಂದು ಹೇಳಿದೆ.

ದಾರಿಯಲ್ಲಿ ಹುಡುಗರು ಹೇಳಿದ ಮಡಿ ಉಟ್ಟುಕೊಳ್ಳುವುದು ಎನ್ನುವ ಪದ ಯಾಕೋ ನನ್ನ ಮನಸ್ಸನ್ನು ಕೊರೆಯಿತು. ಉಟ್ಟುಕೊಳ್ಳುವುದು ಎಂದಮೇಲೆ ಸೀರೆಯಂತೆ ಏನನ್ನೋ ಸುತ್ತಿಕೊಳ್ಳುವುದು ಎಂದೇ ನನ್ನ ಭಾವನೆ. ಅಣ್ಣ ಹಾಗೆಲ್ಲಾ ಏನನ್ನೂ ಉಟ್ಟುಕೊಂಡಿದ್ದಂತೂ ನನ್ನ ಗಮನಕ್ಕೆ ಬಂದಿರಲಿಲ್ಲ. ಮನೆಗೆ ಬಂದವನು ಅಣ್ಣನ ಹತ್ತಿರ ಮೇಷ್ಟರು ಹೇಳಿದ್ದನ್ನು ಹೇಳಿದೆ. ಅದು ನಿಜ ಎಂದು ನಾನು ಸಮರ್ಥಿಸಿದ್ದನ್ನು ಸದ್ಯ ನಾನು ಹೇಳಲಿಲ್ಲ. ಹೇಳಿದ್ದರೆ ನನಗೆ ಕಪಾಳಕ್ಕೆ ಬೀಳುತ್ತಿತ್ತೋ ಏನೋ. ಅಣ್ಣನಿಗೆ ನನ್ನ ಮಾತು ಕೇಳಿ ಸಿಕ್ಕಾಪಟ್ಟೆ ಕೋಪ ಬಂತು.

> ಒಂದು ದಿನ ಮಿಡಲ್ ಸ್ಕೂಲ್ ನಾಲ್ಕನೇ ಕ್ಲಾಸಿನಲ್ಲಿ ನಾನು ಓದುತ್ತಿದ್ದಾಗ ನಮ್ಮ ಮೇಷ್ಟರೊಬ್ಬರು ಕುವೆಂಪು ಬರೆದ ಕುಮಾರವ್ಯಾಸ ಪದ್ಯ ಪಾಠ ಮಾಡುತ್ತಾ ಅಣ್ಣ ಕಾವ್ಯ ರಚನೆ ಮಾಡುತ್ತಾ ಮಾಂಸಾಹಾರವನ್ನು ಸಂಪೂರ್ಣ ವರ್ಜಿಸಿರುತ್ತಾರೆಂದೂ, ಮಡಿ ಜೀವನ ನಡೆಸುತ್ತಾ ಅವರು ಬರೆಯುವುದೆಂದೂ ಬೊಗಳೆ ಹೊಡೆದರು. ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಕವಿಯ ವಿಚಾರ ಹೇಳುತ್ತಾ ಅಲ್ಲಿ ಕುವೆಂಪು ಒಕ್ಕಲಿಗರು ಎಂಬುದನ್ನು ಗಮನಿಸಿ ಅವರಿಗೆ ಕೊಂಚ ಇರಿಸುಮುರುಸಾಗಿರ ಬಹುದು. ಆದ್ದರಿಂದ ಕಾವ್ಯ ರಚನೆಯ ಪಾವಿತ್ರ್ಯವನ್ನು ಹುಡುಗರಿಗೆ ಮನದಟ್ಟು ಮಾಡಿಸಲು ಹೀಗೆ ಹೇಳಿದ್ದರು.

"ವೇದೋಪನಿಷತ್ತುಗಳನ್ನು ಬರೆದವರು ದನದ ಮಾಂಸ ತಿನ್ನುತ್ತಿದ್ದರೆನ್ನುವುದು, ರಾಮಾಯಣ ಬರೆದ ವಾಲ್ಮೀಕಿ ಶಿಕಾರಿ ಮಾಡುತ್ತಿದ್ದ ವ್ಯಾಧನಾಗಿದ್ದನೆನ್ನುವುದು ಆ ಮುಠ್ಠಾಳ ಮೇಷ್ಟರಿಗೆ ಗೊತ್ತಿಲ್ಲ. ಈ ಮಡಿ ಹೆಂಗಸರಂಥ ಮೇಷ್ಟರುಗಳು ನಿಮಗೆ ಹೇಳಿಕೊಡುವುದಾದರೂ ಏನು? ಅವರಿಂದ ನೀವು ಕಲಿಯುವುದಾದರೂ ಏನು? ಅವಿವೇಕಿಗಳು! ಪದ್ಯ ಬರೆಯುವವರು ಪಥ್ಯದಲ್ಲಿರಬೇಕು ಎನ್ನುವ ಕಂದಾಚಾರಗಳನ್ನೆಲ್ಲಾ ನಂಬಿಕೊಂಡಿದ್ದಾರಲ್ಲಾ. ಹಿಂದೂ ಧರ್ಮಕ್ಕೆ ಇದಕ್ಕಿಂತ ಇನ್ನೊಂದು ದುರ್ಗತಿ ಇದೆಯ? ಹೋಗಲಿ ನೀನಾದರೂ ಇಂಥವೆಲ್ಲಾ ತಪ್ಪು ಎನ್ನುವುದು ತಿಳಿದಿಕೋ. ನಿನ್ನ ಜೊತೆ ಹುಡುಗರಿಗೂ ಹೇಳು. ಇನ್ನೊಂದು ಸಾರಿ ಆ ಮೇಷ್ಟರು ಹಾಗೇನಾದರೂ ಕ್ಲಾಸಿನಲ್ಲಿ ಹೇಳಿದರೆ ನೀನು ಹೇಳು 'ಹಾಗೇನೂ ಇಲ್ಲ. ನಾವು ದನದ ಮಾಂಸ ಸಹ ಸಿಕ್ಕರೆ ತಿನ್ನುತ್ತೇವೆ, ನಾವು ಹಿಂದೂಗಳೇ ಅಲ್ಲ ಅಂತ ಹೇಳಿಬಿಡು'' ಎಂದು ನನಗೆ ಕೋಪೋದ್ರಿಕ್ತರಾಗಿ ಹೇಳಿದರು.

ಸ್ಕೂಲಿನಲ್ಲಿ ಮೇಷ್ಟರು ಹೇಳಿದ್ದಕ್ಕೆ ಹೌದೆಂದು ತಲೆಯಾಡಿಸಿದ್ದ ನನಗೆ ಅಣ್ಣನ ಮಾತು ಕೇಳಿ ಮತ್ತೂ ಗಾಬರಿಯಾಯ್ತು. ದನದ ಮಾಂಸ ತಿನ್ನುತ್ತೇವೆಂದೂ, ನಾವು ಹಿಂದೂಗಳೇ ಅಲ್ಲವೆಂದೂ ಹೇಳುವುದಾದರೂ ಹೇಗೆ? ಅದೂ ನನ್ನ ಓರಗೆಯ ಹುಡುಗರೆಲ್ಲಾ ಪಕ್ಕಾ ಕಂದಾಚಾರಿ ಬ್ರಾಹ್ಮಣರಾಗಿರುವಾಗ! ನಾವು ಹಿಂದೂಗಳೇ ಅಲ್ಲ ಎಂದರೆ ಆಗ ನಾವು ಸಾಬರು ಅಂತಾಗುವುದಿಲ್ಲವೇ? ಅದೂ ಸ್ಕೂಲಿನಲ್ಲಿ ಎಲ್ಲರೂ ಸಾಬರನ್ನು ಮನುಷ್ಯರೇ ಅಲ್ಲವೆಂದು ತಿಳಿದಿರುವ ಸಂದರ್ಭದಲ್ಲಿ ಹೇಳಿದರೆ ಉಳಿಗಾಲ ಉಂಟೆ?

ನಾನು "ಥೂ ದನದ ಮಾಂಸ ನಾನಂತೂ ತಿನ್ನಲ್ಲಣ್ಣ" ಎಂದೆ.

"ನೋಡೋ, ನಿನಗೆ ಇಷ್ಟ ಇಲ್ಲದಿದ್ದರೆ ನೀನು ತಿನ್ನಬೇಡ. ನನಗೆ ಇಷ್ಟ ಇಲ್ಲದ್ದು ನಾನು ತಿನ್ನಲ್ಲ. ಆದರೆ ನೀನು ಏನು ತಿಂತೀಯ ಅನ್ನುವುದಕ್ಕೂ ಏನು ಬರೀತೀಯ ಅನ್ನುವುದಕ್ಕೂ ಯಾವ ಸಂಬಂಧವೂ ಇಲ್ಲ. ಅಷ್ಟೇ ಅಲ್ಲ ಹೀಗೆಲ್ಲ ನೀತಿ ನಿಯಮ, ವ್ರತ, ಆಚಾರ ವ'ಾ ಡಿ ಕ' ೂಂ ಡ'ು ಬದುಕಿದವನಿಂದ ಎಂದಾದರೂ ಒಳ್ಳೆಯ ಪದ್ಯ ಬರಿಯಕ್ಕಾಗುತ್ತೇನೋ?'' ಎಂದು ಇನ್ನಷ್ಟು ಬಯ್ದರು.

> "ವೇದೋಪನಿಷತ್ತುಗಳನ್ನು ಬರೆದವರು ದನದ ಮಾಂಸ ತಿನ್ನುತ್ತಿದ್ದರೆನ್ನುವುದು, ರಾಮಾಯಣ ಬರೆದ ವಾಲ್ಮೀಕಿ ಶಿಕಾರಿ ಮಾಡುತ್ತಿದ್ದ ವ್ಯಾಧನಾಗಿದ್ದನೆನ್ನುವುದು ಆ ಮುಠ್ಠಾಳ ಮೇಷ್ಟರಿಗೆ ಗೊತ್ತಿಲ್ಲ. ಈ ಮಡಿ ಹೆಂಗಸರಂಥ ಮೇಷ್ಟರುಗಳು ನಿಮಗೆ ಹೇಳಿಕೊಡುವುದಾದರೂ ಏನು? ಅವರಿಂದ ನೀವು ಕಲಿಯುವುದಾದರೂ ಏನು? ಅವಿವೇಕಿಗಳು! ಪದ್ಯ ಬರೆಯುವವರು ಪಥ್ಯದಲ್ಲಿರಬೇಕು ಎನ್ನುವ ಕಂದಾಚಾರಗಳನ್ನೆಲ್ಲಾ ನಂಬಿಕೊಂಡಿದ್ದಾರಲ್ಲಾ..."

''ನಾವು ಹಿಂದೂಗಳೇ ಅಲ್ಲಾಂದರೆ ನಮ್ಮನ್ನು ಸಾಬರು ಅಂತಾರಲ್ಲ" ಎಂದೆ.

"ಒಳ್ಳೇದಾಯ್ತು, ಏನೂ ತೊಂದರೆ ಇಲ್ಲ ಹಾಗಂದರೆ. ಹಿಂದೂಗಳೆಲ್ಲಾ ಇಂಥ ಶಾಸ್ತ್ರಾಚಾರದ ಕಗ್ಗಗಳನ್ನೆಲ್ಲಾ ನಂಬಿಕೊಂಡು ವ್ರತ ಮಾಡುತ್ತಾ ಕೂತಿದ್ದರಿಂದಲೇ ಸಾಬರು ಬಂದು ಇವರ ದೇವರುದಿಂಡರ ಮೂತಿಗೆ ಹೊಡೆದು, ಮೂಗು ಮುರಿದು ಅನೇಕ ಶತಮಾನ ನಮ್ಮನ್ನು ಆಳಿದ್ದು. ನನ್ನ 'ಧ್ರಾಂ ಧ್ರೀಂ ಧ್ರೂಮ್' ಪದ್ಯ ಓದು" ಎಂದರು.

ನನಗೆ ಅಣ್ಣನ ವಾದ ಅವತ್ತು ಸರಿ ಎನ್ನಿಸಿತು. ಅಣ್ಣ ಭಾರತೀಯರ ಕಂದಾಚಾರಗಳ ಬಗ್ಗೆ ಕಿಡಿಕಿಡಿಯಾಗಿದ್ದು ನನಗೆ ಸರಿಯಾಗಿ ಅರ್ಥವಾಗದೆ ಇದ್ದರೂ ನಮ್ಮ ಊಟೋಪಚಾರಗಳ ಬಗ್ಗೆ ವಿಧಿನಿಷೇಧಗಳನ್ನು ಬೋಧಿಸುವ ಯಾವುದರ ಬಗ್ಗೆಯೂ ನನಗೆ ಆದರವಿರಲಿಲ್ಲ.


ಅಣ್ಣ ಈ ಕಗ್ಗಗಳನ್ನೂ ಕಂದಾಚಾರಗಳನ್ನೂ ಎಲ್ಲೆಂದರಲ್ಲಿ ಯಾವಾಗೆಂದರೆ ಆವಾಗ ವಿರೋಧಿಸುತ್ತಾ ಬದುಕಿದರು. ಆದರೆ ಅಣ್ಣನ ಬದುಕಿನ ದುರಂತವೆಂದರೆ ಅವರ ಬದುಕಿನ ಬಹುಭಾಗವನ್ನು ಏಕಾಂಗಿಯಾಗಿ ಹೋರಾಡ ಬೇಕಾಗಿ ಬಂದಿದ್ದು. ಅಣ್ಣನ ಸಮಕಾಲೀನರಂತೂ ಎಲ್ಲರೂ ಹೆಚ್ಚುಕಡಿಮೆ ಮೂಲಭೂತವಾದಿಗಳೇ ಎನ್ನುವಷ್ಟು ಸಂಪ್ರದಾಯ ವಾದಿಗಳು. ಹಾಗಾಗಿ ಅಣ್ಣನ ಬಗ್ಗೆ ಆ ತಲೆಮಾರಿನ ಪ್ರತಿಭಟನೆ ತಿರಸ್ಕಾರಗಳು ಸ್ವಾಭಾವಿಕವಾದದ್ದೆ. ಅಣ್ಣನ ಮೊದಲ ತಲೆಮಾರಿನ ಶಿಷ್ಯರಲ್ಲಿ ಬಹಳಷ್ಟು ಜನ ನಾನು ಮೊದಲೇ ಹೇಳಿದಂಥ ಸಾಹಿತ್ಯದ ಗೊಡ್ಡುಗಳಾಗಿದ್ದರಿಂದ ಅಣ್ಣನನ್ನು ಮಹಾಕವಿ, ಋಷಿ, ರಸಋಷಿ, ಎಂದೆಲ್ಲಾ ಹೊಗಳಿ ಹಾಡಿ, ಅವರ ವೈಚಾರಿಕತೆ, ಕ್ರಾಂತಿಕಾರಕ ಮನೋಭಾವ ಇತ್ಯಾದಿಗಳು ಇವರ ವೃಂದಗಾನದ ಗಲಾಟೆಯಲ್ಲಿ ತರುಣರ ಕಿವಿ ತಲುಪದಂತೆ ಮಾಡಿದರು. ಕುವೆಂಪು ಪದ್ಯ ಗದ್ಯಕ್ಕಿಂತ ಕಡಿಮೆ ಅಪಾಯಕಾರಿ ಎಂದೇ ಅವರ ಕವಿ ವ್ಯಕ್ತಿತ್ವವನ್ನು ಇವರೆಲ್ಲಾ ಮುಂದುಮಾಡಿದರೋ ಏನೋ! ಕಾವ್ಯಕ್ಕೆ ಯಾರಿಂದಲಾದರೂ ವಿವರಣೆ ಬೇಕಾಗುತ್ತದೆ. ಅದನ್ನು ಬೇಕೆಂದಂತೆ ವ್ಯಾಖ್ಯಾನ ಮಾಡಬಹುದು. ಜಾತಿಧರ್ಮಗಳನ್ನು ಕಸದ ಬುಟ್ಟಿಗೆ ಎಸೆಯಿರಿ ಎಂದರೆ ಅದೊಂದು ಏನಕ್ಕೋ ಪ್ರತಿಮೆ ಎಂದು ಹೇಳಿ ವ್ಯಾಖ್ಯಾನಿಸಿ ಬಿಡಬಹುದು. ಆದರೆ ಗದ್ಯದಲ್ಲಿ ಹಾಗಲ್ಲ, ಕಸದ ಬುಟ್ಟಿಗೆ ಎಸೆಯಿರಿ ಎಂದರೆ ಎಸೆಯಬೇಕು, ಇಲ್ಲವೆ ಎಸೆಯುವುದಿಲ್ಲ ಎಂದು ಹೇಳಬೇಕು.

ಜಗದಗಲ

ಶರತ್‌ಚಂದ್ರ

ಇರಾನ್ - ಪಾಕಿಸ್ತಾನ - ಇಂಡಿಯಾ ಗ್ಯಾಸ್ ಪೈಪ್ ಲೈನ್ ಹಾದಿ ಸುಗಮ

ಬಹಳ ವರ್ಷಗಳ ದೀರ್ಘ ಚೌಕಾಶಿಯಿಂದ ವಿಳಂಬವಾಗಿದ್ದ ಇರಾನ್-ಪಾಕಿಸ್ತಾನ-ಇಂಡಿಯಾ ಗ್ಯಾಸ್ ಪೈಪ್ ಲೈನ್ ಹಾದಿ ಸುಗಮವಾಗಿರುವಂತೆ ಕಾಣುತ್ತದೆ. ಈ ಯೋಜನೆ ಮೂರು ದೇಶಗಳ ಮೂಲಕ ಹಾದು ಹೋಗಿ ಈ ದೇಶಗಳ ಇಂಧನ ಭದ್ರತೆ ಮತ್ತು ಆರ್ಥಿಕತೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಇರಾನ್ ನ ಗ್ಯಾಸನ್ನು ಪೈಪ್ ಲೈನ್ ಮೂಲಕ ಪಾಕಿಸ್ತಾನ ಮತ್ತು ಇಂಡಿಯಾಕ್ಕೆ ಪೂರೈಕೆ ಮಾಡುವುದು ಯೋಜನೆಯ ತಿರುಳು. ಈ ಇತ್ತೀಚಿನ ಇರಾನಿ ಅಧ್ಯಕ್ಷ ಅಹಮದಿನೆಜಾದ್ ಅವರ ದೆಹಲಿ ಭೇಟಿಯ ನಂತರ 740 ಶತಕೋಟಿ ಡಾಲರುಗಳ ಈ ಯೋಜನೆಯ ಬಗ್ಗೆ 45 ದಿನಗಳ ಒಳಗೆ ಒಪ್ಪಂದ ಆಗಬಹುದು ಎಂಬ ಭರವಸೆ ಮೂಡಿದೆ. ತೈಲ ಮಂತ್ರಿ ಮುರಲಿ ದೆವೊರಾ ಅವರ ಇತ್ತೀಚಿನ ಪಾಕಿಸ್ತಾನ ಭೇಟಿ ನಂತರ ಒಪ್ಪಂದದ ಸಾಧ್ಯತೆ ಹೆಚ್ಚಿತ್ತು. ಗ್ಯಾಸ್ ನ ಬೆಲೆ, ಪಾಕಿಸ್ತಾನ ಪೈಪ್ ಲೈನ್ ಹಾದು ಹೋಗಲು ವಿಧಿಸುವ ಫೀ, ಇಡೀ ಪ್ರದೇಶದ ಮತ್ತು ಪೈಪ್ ಲೈನ್ ನ ಭದ್ರತೆ ಬಗ್ಗೆ ಹಲವು ಆತಂಕಗಳು ವಿವಾದಾಸ್ಪದ ಆಗಿದ್ದವು. ಇವೆಲ್ಲಾ ಮಾತುಕತೆಗಳ ಮೂಲಕ



ಬಗೆಹರಿಸಬಹುದಾದವು.

ಆದರೆ ಅತ್ಯಂತ ಹೆಚ್ಚಿನ ವಿಳಂಬ ಆದದ್ದು ಇರಾನ್ ಜತೆ ಈ ಒಪ್ಪಂದ ಮಾಡಿಕೊಳ್ಳಬಾರದು ಎಂದು ಇಂಡಿಯಾ-ಪಾಕಿಸ್ತಾನಗಳ ಮೇಲೆ ಒತ್ತಡ ಹೇರುತ್ತಿದ್ದ ಅಮೆರಿಕದ ಧೋರಣೆಯಿಂದ. ಇರಾನ್ ಜತೆ ಯಾರೂ ನಿಕಟ ಆರ್ಥಿಕ ಸಂಬಂಧ ಇಟ್ಟುಕೊಳ್ಳಬಾರದು. ಅದನ್ನು ಅಂತರ್‌ರಾಷ್ಟ್ರೀಯವಾಗಿ ಒಂಟಿ ಮಾಡಬೇಕು ಎಂಬ ಅಮೆರಿಕದ ವಿದೇಶಿ ಧೋರಣೆಗೆ ತಾಳ ಹಾಕಬೇಕು. ಇದು ಅದರ ಬಯಕೆ. ಬಹಳ ಮಟ್ಟಿಗೆ ಅಮೆರಿಕದ ತಾಳಕ್ಕೆ ಕುಣಿದ ಇಂಡಿಯಾ ಸರ್ಕಾರದ ಧೋರಣೆಯಿಂದ ವಿಳಂಬವಾಗಿತ್ತು. ಪಾಕಿಸ್ತಾನ ಸಹ ಹೆಚ್ಚು ಸ್ವತಂತ್ರ ನೀತಿ ಅನುಸರಿಸಿತ್ತು. ಇರಾನ್ ಅಧ್ಯಕ್ಷರ ಭೇಟಿಯ ಮುಂಚೆ ಅಮೆರಿಕದ ವಿದೇಶ ಮಂತ್ರಿ ಸಾರ್ವಜನಿಕವಾಗಿ ಇಂಡಿಯಾದ ಮೇಲೆ ಒತ್ತಡ ಹಾಕಿದ್ದರು. ಆಗ ಸರ್ಕಾರ ಮೆದುವಾಗಿಯಾದರೂ ಪ್ರತಿಭಟಿಸಲೇ ಬೇಕಾಯಿತು. ಆದರೆ ಈ ಗ್ಯಾಸ್ ಪೈಪ್ ಲೈನ್ ಯೋಜನೆ ಇಂಡಿಯಾದ ಹಿತಾಸಕ್ತಿಯಲ್ಲಿ ಇರುವುದರಿಂದ ಒಪ್ಪಂದದತ್ತ ಪ್ರಗತಿ ಆಗಿದೆ. ○

ಇಂಡಿಯಾ-ಚೀನಾದ ಜನ ಹೆಚ್ಚು ತಿನ್ನುವುದರಿಂದ ಆಹಾರ ಬಿಕ್ಕಟ್ಟು ಅಂತೆ!

ಅಮೆರಿಕದ ವಿದೇಶ ಮಂತ್ರಿಯವರ ಪ್ರಕಾರ ಇಂಡಿಯಾ-ಚೀನಾದ ಜನ ಹೆಚ್ಚು ಉತ್ಪಾದಿಸುವುದಕ್ಕಿಂತ ಹೆಚ್ಚು ತಿನ್ನುವುದರಿಂದ ಈಗಿನ ಆಹಾರ ಬಿಕ್ಕಟ್ಟು ಬಂದಿದೆಯಂತೆ! ಈ ವಿಚಿತ್ರ ವಿಶ್ಲೇಷಣೆ ಒಪ್ಪಿದರೆ ನಾವೆಲ್ಲಾ ತಿನ್ನುವುದು ನಿಲ್ಲಿಸಬೇಕು ಅಥವಾ ಕಡಿಮೆ ಮಾಡಬೇಕು. ಸ್ವಾಬಾವಿಕವಾಗಿಯೇ ಈ ವಿಚಿತ್ರ ವಿಶ್ಲೇಷಣೆಗೆ ತೀಕ್ಷ್ಣ ಪ್ರತಿಕ್ರಿಯೆ ಬಂದಿದೆ. ಚೀನಾ ಮತ್ತು ಭಾರತ ಸರ್ಕಾರದ ಪ್ರತಿನಿಧಿಗಳು ಈ ವಿಶ್ಲೇಷಣೆಯನ್ನು ಟೀಕಿಸಿದ್ದಾರೆ. ಅಮೆರಿಕ ಸೇರಿದಂತೆ ಶ್ರೀಮಂತ ದೇಶಗಳು ಆಹಾರ ಸಾಮಗ್ರಿಗಳನ್ನು ಇಂಧನಕ್ಕೆ ಬಳಕೆ ಮಾಡಿರುವುದು. ಲಾಭದಾಸೆಯ ಮಾರುಕಟ್ಟೆ ತಂತ್ರಗಳು ಕಾರಣ ಎಂದಿವೆ. ವಿಶ್ವಸಂಸ್ಥೆ ಸಹ ಇದೆ. ರೀತಿಯ ಟೀಕೆ ಮಾಡಿದೆ. ಇದಲ್ಲದೆ ಬಹು ರಾಷ್ಟ್ರೀಯ ಆಹಾರ ಕಂಪನಿಗಳ ಹುನ್ನಾರ, ಆಹಾರ ಬೆಲೆಗಳ ಜೂಜಾಟ (ಫ್ಯೂಚರ್ ಟ್ರೇಡಿಂಗ್) ಸಹ ಕಾರಣವಾಗಿದೆ ಎನ್ನ ಬಹುದು.

ಮೋದಿ ಮೋಡಿ...

ಪುಟ 8 ರಿಂದ

ಅಂತಾಯಿದೆ. ಏನು ಕತೆ. ಹೀಗಾದರೆ ಹೇಗೆ? ಏನಾದರೂ ಮಾಡಬೇಕು.

......ಜನ ಕೈಬಿಟ್ಟರೂ ಮಾಧ್ಯಮದ ವರಂತೂ ಸಾಮಾನ್ಯವಾಗಿ ನಮ್ಮ ಕೈಬಿಡುವುದಿಲ್ಲ. ಅವರನ್ನೇ ಹಿಡ್ಕೊಂಡು ಏನಾದರೂ ಮಾಡಬೇಕು. ಅಯ್ಯೋ ಈ ಡೆಕ್ಕನ್ ಹೆರಾಲ್ಡ್-ಸಿಎನ್‌ಎನ್‌ನವರು ನಡೆಸಿದ ಸಮೀಕ್ಷೆಯಲ್ಲೂ ಕಾಂಗ್ರೆಸ್ ಮುನ್ನಡೆ ಅಂತ ಸುದ್ದಿ ಬರ್‍ತಾ ಇದೆಯಲ್ಲಾ. ಸಮೀಕ್ಷೆಯ ಸಾರ ಏನಾದ್ರೂ ಇರಲಿ, ಪ್ರಜಾವಾಣಿ ಮುಖಪುಟ ನೋಡಿದ್ರೆ ಖುಷಿ ಆಗುತ್ತೆ. ಹಂಗಿರಬೇಕು. ಕಾಂಗ್ರೆಸ್‌ಗೆ ಮುನ್ನಡೆ ಅಂತ ಸಮೀಕ್ಷೆಯ ಮುಖ್ಯ ಅಂಶಗಳು ಸಾರಿ ಹೇಳ್ತಾ ಇದ್ದರೂ ಬಿಜೆಪಿ-ಜೆಡಿ(ಎಸ್) ಸಮ್ಮಿಶ್ರ ಸರ್ಕಾರವೇ ಹೆಚ್ಚು ಜನಪ್ರಿಯ ಅಂತ ದೊಡ್ಡ ಟೈಟಲ್ ಕೊಟ್ಟು ದೊಡ್ಡದಾಗಿ ಬರೆದಿದ್ದಾರಲ್ಲ. ಇದಪ್ಪ ಸುದ್ದಿ. ಇಂತಹವರಿಂದಲೇ ಇರೋದರಿಂದಲೇ ನೇಪಾಳ ಚುನಾವಣೆಗಳಲ್ಲಿ ಹಿಂದುತ್ವವಾದಿ ಪಕ್ಷಗಳು ತರಗೆಲೆಗಳ ತರಹ ಹಾರಿಹೋದರೂ ಭಾರತದಲ್ಲಿ ಮಾತ್ರ ಇನ್ನೂ ಒಂದಷ್ಟು ಖದರು ಉಳಿಸಿಕೊಳ್ಳೊದಕ್ಕೆ ಆಗ್ತಾ ಇದೆ....

ಹೀಗಂತ ಬಿಜೆಪಿಗೋಳು ಸ್ವಗತ ಹಾಡ್ಕೊಂತ ಇರಬೇಕಾದರೆ ರಾಜ್ಯದ ವಿವಿಧ ಕಡೆಯಿಂದ ಬರ್‍ತಾ ಇರೋ ಸುದ್ದಿ ಅವರನ್ನು ಇನ್ನಷ್ಟು ಚಿಂತನೆಗೆ ಚಿಂತೆಗೆ ತಳ್ಳಿ ಬಿಡಬೇಕೆ?

ಅದೇನಪ್ಪ ಸುದ್ದಿ ಅಂದ್ರೆ, ನಮ್ಮ ಮಾಜಿ ಆರೋಗ್ಯ ಸಚಿವರ ಆರ್.ಅಶೋಕರವರು ತಮ್ಮ ಕ್ಷೇತ್ರ ಪದ್ಮನಾಭನಗರದಲ್ಲಿ ಚುನಾವಣಾ ಪ್ರಚಾರಕ್ಕೆ ಅಂತ ಮನೆ ಮನೆಗೆ ಹೋದ್ರೆ, ಜನಗಳು ಮನೆ ಬಾಗಿಲು ಹಾಕ್ಕೊಂಡು ಬಿಡೋದೆ. ಅದು ಉತ್ತರಹಳ್ಳಿ ಕ್ಷೇತ್ರ ಆಗಿದ್ದಾಗ ಈ ಪದ್ಮನಾಭನಗರದಿಂದ ತುಂಬಾ ಚೆನ್ನಾಗಿ ಓಟುಗಳು ಬಂದಿದ್ದಾವೆ ಅಂತ ಈ ಪದ್ಮನಾಭ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರೆ ಈಗ ಜನ ಹೀಗಾ ಮಾಡೋದು. ಮಾಜಿಮಂತ್ರಿಗಳೇ ಮನೆ ಮನೆಗೆ ಬಂದು ಕೈ ಮುಗೀತಾ ಇರೋವಾಗ ಆರತಿಗೀರತಿ ಹಿಡ್ಕೊಂಡು ಕಾಯಬಾರದ? ಏನಿದು?

ಅಧಿಕಾರ ಇದ್ದಾಗ ಕಾರ್ಯಕರ್ತರನ್ನು ಹತ್ತಿರ ಸೇರಿಕೊಳ್ಳಲಿಲ್ಲ, ಜನರ ಹತ್ತಿರ ಬಂದು ಕಷ್ಟ ಸುಖ ಕೇಳಲಿಲ್ಲ ಅಂತ ಕೆಲವು ಕಾರ್ಯಕರ್ತರು ಗೊಣಗುತ್ತಿದ್ದಾರಂತೆ. ಪಾಪ ಅವರಿಗೇನು ಅರ್ಥವಾಗಬೇಕು ಮಂತ್ರಿಯಾದವರ ಕಷ್ಟ.

ಈಗೇನು ಚುನಾವಣೆ ಅಂದ್ರೆ ಸುಮ್ನೆನಾ 20-25 ಕೋಟಿ ಇದ್ರು ಸಾಲಲ್ಲ ಒಂದು ಎಂಎಲ್‌ಎ ಕ್ಷೇತ್ರಕ್ಕೆ. ಏನು ಆಕಾಶದಿಂದ ಉದುರುತ್ತಾ ಹಣ. ಮಂತ್ರಿಯಾಗಿರೋವಾಗಲೇ ಏನಾದ್ರೂ ಅಷ್ಟಿಷ್ಟು ಮಾಡಿಕೋಬೇಕು. ಆಮೇಲೆ ಮಾಡೋಕಾಗತ್ತ. ಚುನಾವಣೆ ಬಂದಾಗ ಜನರನ್ನ, ಕಾರ್ಯಕರ್ತರನ್ನು ನೋಡೋದು ಇದ್ದೇ ಇರುತ್ತೆ. ಸ್ವಲ್ಪ ಜಾಸ್ತಿ ದುಡ್ಡು ಖರ್ಚಾದ್ರೂ ಹೇಗೋ ಮ್ಯಾನೇಜ್ ಮಾಡಬಹುದು. ಅಲ್ವಾ?

ಈ 'ಮ್ಯಾನೇಜ್' ಮಾಡೋ ವಿಷಯಕ್ಕೆ ಎಲೆಕ್ಷನ್ ಕಮೀಷನ್ ನವರು ಸ್ವಲ್ಪ ತೊಂದ್ರೆ ಮಾಡ್ತಿದ್ದಾರೆ. ಇದಕ್ಕೆಲ್ಲಾ ಸೊಪ್ಪು ಹಾಕ್ತಾರಾ ನಮ್ಮ ಮಾಜಿ ಸಚಿವರು. ಅವರು ಚಾಪೆ ಕೆಳಗೆ ನುಸುಳಿದರೆ... ಇವರು ರಂಗೋಲಿ ಕೆಳಗೆ....

ಬೇಕಾದ್ರೆ ನೀವೇ ನೋಡಿ. ಚುನಾವಣೆ ಉದ್ದೇಶ ಇಟ್ಕೊಂಡು ಜನಕ್ಕೆ ಸೀರೆ, ಊಟ, ದುಡ್ಡು ಹಂಚಬಾರದು ಅಂತಾರ ಆಯೋಗದವರು. ಚುನಾವಣೆ ಹೆಸರಲ್ಲಿ, ಬೇಡವೇ ಬೇಡ ಯಾರೂ ಜನ ಇಲ್ವಾ ನಮ್ಮ ಮಂತ್ರಿಗಳ ತಾವ. ಅಗೋ ಕುಮಾರಸ್ವಾಮಿ ಲೇಔಟ್‌ನಲ್ಲಿ...... ನೋಡಿ

ಬಿಜೆಪಿಯ ಮಾಜಿ ಕಾರ್ಪೋರೇಟರ್ ಹನುಮಂತೇಗೌಡ, ಅಶೋಕರ ಧರ್ಮಪತ್ನಿ ಶ್ರೀಮತಿ ಪರಿಮಳ ಅಶೋಕರವರುಸೇರಿ ದೊಡ್ಡ ಸತ್ಯನಾರಾಯಣ ಪೂಜೆಯನ್ನೇ ವ್ಯವಸ್ಥೆ ಮಾಡಿದ್ದಾರೆ. ಎಂದೂ ಇಲ್ಲದ್ದು ಈಗ ಬಡಾವಣೆಯ ಎಲ್ಲ ಮನೆ ಮನೆಗೆ ಆಹ್ವಾನ ಪತ್ರಿಕೆ. ಜೊತೆಗೊಂದು ಬಿಜೆಪಿಯ ಚುನಾವಣಾ ಪ್ರಚಾರದ ಮಲ್ಟಿ ಕಲರ್ ಕರಪತ್ರ. ಬಿಜೆಪಿ ಕಾರ್ಯಕರ್ತರೇ ಓಡಾಡುವವರು.

ಸೀರೆಯನ್ನಂತೂ ಸತ್ಯನಾರಾಯಣನ ಪೂಜೆಗೆ ಮೊದಲೇ, ಮೊದ ಮೊದಲೇ ಹಂಚಿ ಆಗಿದೆ. ಇನ್ನೂ ಪೂಜೆ ಸಮಯದಲ್ಲಿ ಭೋಜನ ಮತ್ತು ಒಂದಿಷ್ಟು ದಕ್ಷಿಣೆಯ ವ್ಯವಸ್ಥೆ ಮಾಡಿ ಬಿಟ್ಟರೆ ಮುಗಿಯಿತು. ಇನ್ನುಳಿದದ್ದು ಸತ್ಯ ನಾರಾಯಣನಿಗೆ ಬಿಟ್ಟದ್ದು. ಅವನು ಕಾಪಾಡುತ್ತಾನೆ.

'ಜನವಾದಿ' ಅಂತ ಯಾರೋ ಕೆಲಸ ಇಲ್ಲದ ಮಹಿಳೆಯರು 15ಎಫ್ ಬಸ್ ಸ್ಟ್ಯಾಂಡ್‌ನಲ್ಲಿ ಸೇರಿಕೊಂಡು 'ಮಹಿಳೆಯರ ಮತ ಮಾರಾಟಕ್ಕಿಲ್ಲ, ಸೀರೆ, ಹೆಂಡಕ್ಕೆ ಮತ ಹಾಕೋದಿಲ್ಲ' ಅಂತೆಲ್ಲ ಕಿರುಚಿ ಸೀರೆಯನ್ನು ಸುಟ್ಟರಂತೆ.


ವಿಷಯ ಸರಿಯಾಗಿ ಗೊತ್ತಿಲ್ಲದೆ, ಕಳಪೆ ಸೀರೆ ಕೊಟ್ಟಿರೋದಕ್ಕೆ ಯಾರೋ ಏನೋ ಗಲಾಟೆ ಮಾಡ್ತಾ ಇರಬಹುದು ಅಂತ ಬಿಜೆಪಿ ಕಾರ್ಯಕರ್ತರಿಗೆ ಅನುಮಾನ ಬಂದು ನೋಡಿಕೊಂಡು ಹೋಗಿದ್ದಾರೆ. ಅಯ್ಯೋ ಈ ಜನವಾದಿಯವರಿಗೆ ಬುದ್ದಿ ಇಲ್ಲ. ತಾವು ತಿನ್ನಲ್ಲ. ತಿನ್ನೋರಿಗೂ ಬಿಡಲ್ಲ. ಗಾಳಿ ಬಂದಾಗ ತೂರಿಕೋಬೇಕು. ಏನು ಚುನಾವಣೆ ಬಂದಾಗ ಸಿಗೋದು ಗೋರಿಕೋಬೇಕು. ಸೀರೆ, ಸರಾಯಿ, ದುಡ್ಡು ಎಲ್ಲಾ ಏನು ದಿನಾ ಹಂಚುತ್ತಾರಾ? ಅಂತ ಕೆಲವು ಬಿಜೆಪಿ ಕಾರ್ಯಕರ್ತರು ಅಶೋಕರ ಶಿಷ್ಯಂದಿರು ಹೇಳ್ತಾ, ಇದ್ರೂ ಅಂತ ಅಲ್ಲಲ್ಲಿ ಗುಸು ಗುಸು.

ಹಸಿ ಜಾತಿವಾದ

ಅವರ ಹೆಸರು ರವಿ ಸುಬ್ರಮಣ್ಯ ಅಂತ. ಬಸವನಗುಡಿಯಲ್ಲಿ ಬಿಜೆಪಿಯ ಅಭ್ಯರ್ಥಿ. ಅಲ್ಲಿ ಬಿಜೆಪಿಯವರು ಓಟು ಕೇಳುತ್ತಿರುವುದು ಏನಂತ ಗೊತ್ತಾ? 'ಇವರು ಬ್ರಾಹ್ಮಣ ಮಹಾಸಭಾ ಅಭ್ಯರ್ಥಿ. ಹಿಂದೆ ಬ್ರಾಹ್ಮಣ ಮಹಾಸಭಾದ ಪದಾಧಿಕಾರಿ ಆಗಿದ್ದರು.ಇವರಿಗೆ ಓಟು ಕೊಡಿ' ಅಂತ. ಕ್ಷೇತ್ರದ 2.2 ಲಕ್ಷ ಮತದಾರರಲ್ಲಿ ಸುಮಾರು 60 ಸಾವಿರ ಬ್ರಾಹ್ಮಣರಿದ್ದಾರೆ ಅನ್ನೋದು ಅವರ ಈ ಪ್ರಚಾರ ವೈಖರಿಗೆ ಆಧಾರ. 'ನಾನು ದಲಿತ ಚಳುವಳಿಯಲ್ಲೋ, ದಲಿತ ಸಂಘರ್ಷ ಸಮಿತಿಯಲ್ಲೋ ಇದ್ದೇನೆ' ಅನ್ನುವುದಕ್ಕೂ ಬ್ರಾಹ್ಮಣ ಸಭಾದಲ್ಲಿದ್ದೆ ಓಟು ಕೊಡಿ ಅನ್ನೋದಕ್ಕೂ ತುಂಬಾನೆ ವ್ಯತ್ಯಾಸ ಇಲ್ವಾ? ಇಂಥಾ ಹಸಿಹಸಿ ಜಾತಿವಾದನಾ ಬಿತ್ತೋದು?

'ತಾಯಿ' ತೆರೆಗೆ

ಮ್ಯಾಕ್ಸಿಂ ಗಾರ್ಕಿಯವರ ಮಹೋನ್ನತ 'ತಾಯಿ' ಕಾದಂಬರಿ ಆಧಾರಿತವಾದ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರ, ಡಾ.ಬರುಗೂರು ರಾಮಚಂದ್ರಪ್ಪ ನಿರ್ದೇಶನದ 'ತಾಯಿ' ಯು ಕಾರ್ಮಿಕ ದಿನಾಚರಣೆಯಂದು - ಮೇ 1 ರಂದು ತೆರೆಕಂಡಿದೆ. ಬೆಂಗಳೂರಿನ ಗಾಂಧಿನಗರದ ಕೈಲಾಷ್ ಮತ್ತು ಕೋರಮಂಗಲ ಸಮೀಪದ ಪಿ.ವಿ.ಆರ್. ಚಿತ್ರಮಂದಿರಗಳಲ್ಲಿ ಇದು ನಡೀತಾ ಇದೆ. ಕಾರ್ಮಿಕ - ಕಮ್ಯೂನಿಸ್ಟ್ ಚಳುವಳಿಯ ಆಶಯಗಳನ್ನು ಬಿಂಬಿಸುವ ಈ ಚಿತ್ರಕ್ಕೆ ಎಲ್ಲರ ಬೆಂಬಲ, ಪ್ರೋತ್ಸಾಹ ಬೇಕಾಗಿದೆ.



ಜಯ

ವಿಶ್ವವಿದ್ಯಾಲಯಗಳ ಆವಿಷ್ಕಾರಗಳನ್ನು ಜೀರ್ಣಿಸಿಕೊಂಡು ಪೇಟೆಂಟ್ ಪಡೆಯುವ ಬಹುರಾಷ್ಟ್ರೀಯ ಕಂಪನಿಗಳು

ಬೆಂಗಳೂರಿನಲ್ಲಿ ಎಂಟನೇ ಅಂತರಾಷ್ಟ್ರೀಯ ಜೈವಿಕ ತಂತ್ರಜ್ಞಾನ ಮೇಳ ಇದೀಗ ತಾನೆ ಮುಕ್ತಾಯಗೊಂಡಿತು. ಬೆಂಗಳೂರಿನಲ್ಲಿ ಜರುಗಿದ ಜೈವಿಕ ಮೇಳದಲ್ಲಿ ಹಲವಾರು ವಿಷಯಗಳ ಕುರಿತು ವಿಚಾರ ಸಂಕಿರಣ, ಉತ್ಪನ್ನ ಪ್ರದರ್ಶನ, ಸಂಶೋಧನಾ ಚರ್ಚೆಗಳು, ಇತ್ಯಾದಿ ನಡೆದುವಾದರೂ ಅದು ನಿರೀಕ್ಷಿತ ಮಟ್ಟದ ವೀಕ್ಷಣಾಕಾರರ ಅನುಪಸ್ಥಿತಿಯಿಂದಾಗಿ ನೀರಸವಾಗಿತ್ತು.



ಬಹುರಾಷ್ಟ್ರೀಯ ಕಂಪನಿಗಳು ಪೇಟೆಂಟ್ ಗಳಿಸುವ ದಾರಿ:

'ಇಂದು ಬಹುರಾಷ್ಟ್ರೀಯ ಕಂಪನಿಗಳ ತೆಕ್ಕೆಯಲ್ಲಿರುವ ಶೇ. 90ರಷ್ಟು ಪೇಟೆಂಟ್‌ಗಳಿಗೆ ಸಂಬಂಧಿಸಿದ ಆವಿಷ್ಕಾರದ ವಿಚಾರಗಳು ಮತ್ತು ಸಂಶೋಧನೆಗಳು ಮೊದಲಿಗೆ ವಿಶ್ವವಿದ್ಯಾಲಯಗಳಲ್ಲಿ ಬೀಜಾಂಕುರಗೊಳ್ಳುತ್ತವೆ' ಎಂದು ಜೈವಿಕ ವಿಜ್ಞಾನದಲ್ಲಿ ಸಂಶೋಧನೆಗಾಗಿ ನೊಬೆಲ್ ಪ್ರಶಸ್ತಿ ಗಳಿಸಿರುವ ಪ್ರೊ: ಸಿಡ್ನಿ ಆಲ್ಟ್‌ಮನ್‌ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಳಿಸಿದರು. ಅದರಲ್ಲೂ ಮುಖ್ಯವಾಗಿ ಅಮೇರಿಕಾ ಸರ್ಕಾರವು 1984ರಲ್ಲಿ ಬೇಯ್ ಡೋಲ್ ಕಾಯಿದೆಯನ್ನು ಜಾರಿಗೆ ತಂದು ತನ್ನ ವಿಶ್ವವಿದ್ಯಾಲಯಗಳು ತಮ್ಮ ಹೊಸ ಆವಿಷ್ಕಾರಗಳನ್ನು ಖಾಸಗಿ ಕಂಪನಿಗಳಿಗೆ ಲೈಸನ್ಸ್ ನೀಡಿ ಅಂಥಹ ಉತ್ಪನ್ನಗಳಿಗೆ ಆ ಕಂಪನಿಗಳು ಪೇಟೆಂಟ್ ಪಡೆದುಕೊಳ್ಳಬಹುದೆಂಬ ಮುಕ್ತ ಅವಕಾಶ ನೀಡಿಬಿಟ್ಟಿದೆ. ಇದರಿಂದಾಗಿ ಸಾರ್ವಜನಿಕ ಆದಾಯದಿಂದ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳು ತಮ್ಮ ಆವಿಷ್ಕಾರಗಳನ್ನು ಖಾಸಗಿ ಕಂಪನಿಗಳ ಲಾಭಕ್ಕೆ ನೀಡುವಂತಾಯಿತು.


ಜೈವಿಕ ಮೇಳದಲ್ಲಿ ಚರ್ಚೆಗೊಳಗಾದ ಕೆಲವು ಪ್ರಮುಖ ವಿಷಯಗಳೆಂದರೆ: ಬೌದ್ಧಿಕ ಹಕ್ಕು ಸ್ವಾಮ್ಯ ಕಾಯಿದೆಯನ್ನು ಹೆಚ್ಚು ಕಟ್ಟುನಿಟ್ಟುಗೊಳಿಸಬೇಕು. ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಇದುವರೆಗೆ ಪಡೆದಿರುವ ಒಟ್ಟು ಪೇಟೆಂಟ್‌ಗಳ ಪೈಕಿ ಕೇವಲ ಶೇ. 10 ರಷ್ಟು ಮಾತ್ರವೇ ವ್ಯಾಪಾರಿ ದೃಷ್ಟಿಯಿಂದ ಸೂಪರ್ ಹಿಟ್ ಆಗಿವೆಯೆಂಬುದು ಜೈವಿಕ ತಂತ್ರಜ್ಞಾನ ಉದ್ದಿಮೆಗಳ ಅನಿಸಿಕೆ. ಇನ್ನು ಕೆಲವರು ಭಾರತೀಯ ಪೇಟೆಂಟ್ ಕಾಯಿದೆ, ಕೋರ್ಟುಗಳು ಮತ್ತು ಪೋಲೀಸರು ತಮ್ಮ ಆವಿಷ್ಕಾರದ ಹಕ್ಕುಗಳನ್ನು ರಕ್ಷಿಸುವಲ್ಲಿ ಸಹಕರಿಸುವುದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಎಡಪಕ್ಷಗಳ ಒತ್ತಡದಿಂದಾಗಿ ಭಾರತೀಯ ಪೇಟೆಂಟ್ ಕಾಯಿದೆಯು ಸ್ವಲ್ಪಮಟ್ಟಿಗಾದರೂ ಜನಪರವಾಗಿಯೇ ಉಳಿದಿದೆಯೆಂಬುದು ಬೇರೆ ಮಾತು.

ನುರಿತ ತಂತ್ರಜ್ಞರ ಕೊರತೆಯ ಆತಂಕ:

ಜೈವಿಕ ತಂತ್ರಜ್ಞಾನ ಕ್ಷೇತ್ರವು ನುರಿತ ಮಾನವ ಸಂಪನ್ಮೂಲದ ಕೊರತೆಯನ್ನು ಎದುರಿಸುತ್ತಿದ್ದು, ಜೈವಿಕ ಸಂಶೋಧನಾ ಕ್ಷೇತ್ರದಲ್ಲಿ ದೊಡ್ಡ ಹಿನ್ನಡೆಯಾಗುತ್ತಿದೆಯೆಂಬುದು ಪ್ರಮುಖ ವಿಷಯವಾಗಿತ್ತು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚೆಚ್ಚು ಉದ್ಯೋಗವಕಾಶಗಳು ದೊರೆಯತೊಡಗಿದ ಮೇಲೆ ಮೂಲ ವಿಜ್ಞಾನ ವಿಷಯವನ್ನು ಮೂಸಿಯೂ ನೋಡದೆ ನಾ ಮುಂದು ತಾ ಮುಂದು ಎಂದು ಎಲ್ಲ ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮುಗಿಬಿದ್ದರಿಂದ ಈ ಪರಿಸ್ಥಿತಿ ನಿರ್ಮಾಣವಾಯಿತಷ್ಟೆ.

ಭಾರತದಲ್ಲಿ ಔಷಧೀಯ ಸಾಮರ್ಥ್ಯ ಪರೀಕ್ಷೆಗಳು (ಕ್ಲಿನಿಕಲ್ ಟ್ರಯಲ್):

ಹೊಸದಾಗಿ ಆವಿಷ್ಕಾರಗೊಂಡ ಔಷಧಗಳು ಎಷ್ಟರಮಟ್ಟಿಗೆ ಆಯಾಯ ರೋಗಗಳನ್ನು ನಿವಾರಿಸುವಲ್ಲಿ ಸಾಮರ್ಥ್ಯ ಹೊಂದಿವೆ ಮತ್ತು ಅಂತಹ ಹೊಸ ಔಷಧಗಳನ್ನು ಬಳಸುವಾಗ ರೋಗಿಯಲ್ಲಿ ಉಂಟಾಗಬಹುದಾದ ಇತರೆ ಅಡ್ಡ



ಪರಿಣಾಮಗಳೇನು ಎಂಬುದನ್ನು ಪರಿಶೀಲಿಸಿದ ನಂತರವಷ್ಟೆ ಹೊಸ ಔಷಧಗಳನ್ನು ಮಾರುಕಟ್ಟೆಗೆ ಬಿಡಲಾಗುತ್ತದೆ. ಇದಕ್ಕೆ ಔಷಧೀಯ ಸಾಮರ್ಥ್ಯ ಪರೀಕ್ಷಾ ಪ್ರಯೋಗಗಳು ಎಂದು ಕರೆಯಲಾಗುತ್ತದೆ. ಹೊಸ ಔಷಧಿ ತಯಾರಿಸಲು ಮತ್ತು ಔಷಧೀಯ





ಸಾಮರ್ಥ್ಯ ಪರೀಕ್ಷಾ ಪ್ರಯೋಗಗಳನ್ನು ನಡೆಸಲು ವೆಚ್ಚದ ದೃಷ್ಟಿಯಿಂದ ಭಾರತ ಒಂದು ಕಡಿಮೆ ಬೆಲೆಯ ಪ್ರದೇಶವಾಗಿ ಬೆಳೆದುಬಂದಿದೆ. ಹೀಗಾಗಿ 'ಭಾರತವು ಕಡಿಮೆ ಬೆಲೆಯ ಔಷಧಿ ತಯಾರಿಕೆಗೆ ಪ್ರಥಮ ರಾಷ್ಟ್ರವಾಗಬೇಕು' ಎಂಬುದು ಕರ್ನಾಟಕದ ಜೈವಿಕ ತಂತ್ರಜ್ಞಾನದ ದೂರದರ್ಶಿತ್ವ ಗುಂಪಿನ ನಾಯಕಿಯೂ ಮತ್ತು ಬಯೋಕಾನ್ ಕಂಪನಿಯ ಮುಖ್ಯಸ್ಥೆಯೂ ಆದ ಶ್ರೀಮತಿ ಕಿರಣ್ ಮುಜುಂದಾರ್‌ರವರ ಆಶಯ.

ಆದರೆ ಆತಂಕದ ವಿಷಯವೆಂದರೆ, ಹಲವಾರು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಇಂತಹ ಹೊಸದಾಗಿ ಔಷಧಗಳ ಸಾಮರ್ಥ್ಯ ಪರೀಕ್ಷಿಸಲು ತಮ್ಮ ನೆಲದಲ್ಲಿ ಅವಕಾಶ ಕೊಡದೆ ಔಷಧಿ ತಯಾರಿಕೆ ಮತ್ತು ಔಷಧೀಯ ಸಾಮರ್ಥ್ಯ ಪರೀಕ್ಷಾ ಪ್ರಯೋಗಗಳನ್ನು ಹಾಗೂ ಅವುಗಳ ಅನಾಹುತಗಳನ್ನು ಭಾರತದಂತಹ ಬಡ ರಾಷ್ಟ್ರಗಳಿಗೆ ವರ್ಗಾಯಿಸುವ ಹುನ್ನಾರವೂ ನಡೆಯುತ್ತಿದೆ. ಬಡ ರಾಷ್ಟ್ರಗಳ ಜನತೆಯನ್ನು ಇಂಥ ಪರೀಕ್ಷೆಗಳಿಗೆ ಅಮಾಯಕ ಪ್ರಾಣಿಗಳಂತೆ ಬಳಸಿಕೊಳ್ಳುತ್ತಿರುವ ಬಗ್ಗೆ ನಿಗಾವಹಿಸಿದರೆ ಮಾತ್ರವಷ್ಟೆ ; ಕಿರಣ್ ಮುಜುಂದಾರ್‌ರವರ ಮಾತಿಗೆ ಅರ್ಥಬರುತ್ತದೆ.

ಜೈವಿಕ ಮೇಳದಲ್ಲಿ ಕೃಷಿ ದಿನ!

ಭಾರತೀಯ ಕೃಷಿ ತೀವ್ರ ಬಿಕ್ಕಟ್ಟಿನಲ್ಲಿದ್ದು ಅದು ಮಾಧ್ಯಮದಲ್ಲಿ ರೈತರ ಆತ್ಮಹತ್ಯೆಗಳ ಮೂಲಕ ಒಂದಷ್ಟು ಬೆಳಕಿಗೆ ಬಂದಿರುವುದರಿಂದಲೋ ಏನೋ ಜೈವಿಕ ಮೇಳದ ಕೊನೆಯ ದಿನವನ್ನು 'ಕೃಷಿ ದಿನ' ವೆಂದು ಆಚರಿಸಲಾಯಿತು. ಆದರೆ, ಕೃಷಿಯಲ್ಲಿ ಜೈವಿಕ ತಂತ್ರಜ್ಞಾನವನ್ನು ಹೊರತಪಡಿಸಿದರೆ ಅಂದಿನ ವಿಚಾರಸಂಕಿರಣಗಳ ವಿಷಯ ಗಳತ್ತ ಕಣ್ಣುಹಾಯಿಸಿದಾಗ ಅದು ಬರೇ ಆಚರಣೆ ಮಾತ್ರವೇ ಆಗಿ ಕಂಡು ಬಂತು.

ಅಂತರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನದಂತೆ ಜೈವಿಕ ತಂತ್ರಜ್ಞಾನದಲ್ಲೂ ಕೂಡ ಬೆಂಗಳೂರು ಮುಂಚೂಣಿ ಯಲ್ಲಿದೆಯೆಂದು ನಮ್ಮ ಸರ್ಕಾರಗಳು ಅದೆಷ್ಟೇ ತಿಪ್ಪರಲಾಗ ಹೊಡೆದು ಬಡಾಯಿ ಕೊಚ್ಚಿಕೊಂಡರೂ ವಿಶ್ವದ ಅತಿ ದೊಡ್ಡ 100 ಜೈವಿಕ ತಂತ್ರಜ್ಞಾನ ಕಂಪನಿಗಳ ಪಟ್ಟಿಯಲ್ಲಿ ಕೇವಲ ಬಯೋಕಾನ್ ಸಂಸ್ಥೆಯೊಂದೇ ಸ್ಥಾನ ಪಡೆದಿರುವುದು. ಅದೂ ಕೂಡ 24ನೇ ಸ್ಥಾನದಲ್ಲಿದೆ. ಮಿಕ್ಕೆಲ್ಲ ಅಮೇರಿಕಾ, ಬ್ರಿಟನ್, ಜರ್ಮನಿ, ಫ್ರಾನ್ಸ್ ಮತ್ತು ಚೀನಾ ದೇಶಗಳದ್ದೇ ಪಾರುಪತ್ಯ.

ಪ್ರಮಿಳಕ್ಕ ಮತ್ತು ನಿಂಬೆ ಹಣ್ಣು...

ಪುಟ 8 ರಿಂದ

ಡಿಕೆಶಿಅವರ ಕ್ಷೇತ್ರದಲ್ಲಿ ಲಾರಿಯಂಥ ಒಂದು ದೊಡ್ಡ ಕಾಂಗ್ರೆಸ್ ಪ್ರಚಾರ ವಾಹನದ ಒಳಗೆ ತಗೊಂಡು ಹೋಗ್ತಾ ಇದ್ದ ಸುಮಾರು 1 ಲಕ್ಷ ರೂಪಾಯಿ ಬೆಲೆಯ ಫ್ರಿಡ್ಜು, ಏರ್‌ಕೂಲರ್‌ಗಳನ್ನು ಚುನಾವಣಾ ಆಯೋಗ ವಶಪಡಿಸಿಕೊಂಡಿದೆ. ಅದು ಚುನಾವಣೆಗೆ ಸಂಬಂಧಿಸಿದ್ದಲ್ಲ ಮನೆಗೆ ತೆಗೆದುಹೋಗುತ್ತಾ ಇದ್ದದ್ದು ಅಂತಾರೆ ಡಿ.ಕೆ.ಶಿ. ಅದನ್ನು ಚುನಾವಣಾ ಪ್ರಚಾರ ವಾಹನದಲ್ಲಿ ಯಾಕೆ ತಗೊಂಡು ಹೋಗ್ತಾ ಇದ್ರಿ ಅಂತ ಯಾರೂ ಪ್ರಶ್ನೆ ಕೇಳಿದಂತೆ ಕಾಣುತ್ತಿಲ್ಲ.

ಈ ರೀತಿ ಆಯೋಗದವರ ಕೈಗೆ ಸಿಗ್ತಾ ಇರೋದು. ಬರೀ ಫ್ರಿಡ್ಜು, ಟಿ.ವಿ.ಗಳು ಮಾತ್ರ ಅಲ್ಲ. ಮಧ್ಯಪ್ರದೇಶದಿಂದ ತರಿಸಲಾದ ವಿಶೇಷ ಚುನಾವಣಾ ಮದ್ಯ, ಚುನಾವಣಾ ಸೀರೆ. ಇಂಥವೆಲ್ಲಾ ಸಿಗ್ತಾ ಇವೆ. ಮತ್ತೆ ವಾಹನಗಳಲ್ಲಿ ತಗೊಂಡು ಹೋಗ್ತಾ ಇದ್ದ 10,11 ಕೋಟಿ ರೂಪಾಯಿಗಳು ಸಿಕ್ಕದ್ದು ಎಲ್ಲಾ ಈಗಾಗಲೇ ಹಳೇ ಸುದ್ದಿ. ಈ ಪಟ್ಟಿಯಲ್ಲಿ ಹೊಸ ಸುದ್ದಿ ಅಂದ್ರೆ ಬಾಲ್ಕಿಯಿಂದ ಬಂದಿದೆ. ಪ್ರಕಾಶ್ ಖಂಡ್ರೆ ಅಂತ ಅವರು ಮಾಜಿ ಶಾಸಕರು. ಅವರ ತಮ್ಮ ಜಗದೀಶ್ ಖಂಡ್ರೆ ಅಂತ. ಪಾಪ ಅವರು ಬಾಲ್ಕಿಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಿಂದ ಕೆನರಾಬ್ಯಾಂಕ್‌ಗೆ ಹಾಕೋದಕ್ಕೆ 30 ಲಕ್ಷ ರೂಪಾಯಿ ತಗೊಂಡು ಹೋಗ್ತಾ ಇದ್ದರೆ ಅದನ್ನು ಚುನಾವಣಾ ಅಧಿಕಾರಿಗಳು ಹಿಡಿದೇ ಬಿಡೋದಾ.

ಏನು ಚುನಾವಣೆ ಬಂತು ಅಂತ ತಮ್ಮ 'ಮಾಮೂಲಿ ವ್ಯವಹಾರ' ನಿಲ್ಲಿಸೋಕೆ ಆಗುತ್ತಾ? ಪ್ರಕಾಶ್ ಖಂಡ್ರೆ ಬಿಜೆಪಿಯವರು ಅಂತಾ ಹೀಗಾ ಮಾಡೋದು. ಚುನಾವಣಾ ಆಯೋಗದವರಿಗೆ ಏನು ಗೊತ್ತು. ಚುನಾವಣೆ ನಡೆಸೋದು. ಅವರೇನೋ 10 ಲಕ್ಷ ಮಿತಿಯೊಳಗೆ ಎಲೆಕ್ಷನ್ ನಡೆಸಿ ಅಂತ ಫರ್ಮಾನು ಕೊಡ್ತಾರೆ. ಅದರ ಕಷ್ಟ ನಡೆಸೋರಿಗೆ ತಾನೇ ಗೊತ್ತಾಗೋದು, ಪ್ರಚಾರಕ್ಕೆ ಬರೋ ಒಬ್ಬೊಬ್ಬ ಕಾರ್ಯಕರ್ತರಿಗೆ ದಿನಕ್ಕೆ 200-300 ರೂಪಾಯಿ, ಬಿರಿಯಾನಿ, ತೀರ್ಥ ಏನೇನೋ ಸಲ್ಲಿಸಬೇಕಲ್ಲ. ಅದೆಲ್ಲಾ ಸುಮ್ನೆ ಆಗುತ್ತಾ.

ಈ ಚುನಾವಣೆ ನಡೆಸೋದು ಎಷ್ಟು ಕಷ್ಟ ಅಂತ ಗೊತ್ತಾಗಬೇಕಾದ್ರೆ, ಬೆಂಗಳೂರಿನ ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸತೀಶ್‌ರೆಡ್ಡಿಯವರನ್ನೇ ಕೇಳ್ಬೇಕು. ಪಾಪ ಪ್ರಚಾರಕ್ಕೆ ಬರೋ ಕಾರ್ಯಕರ್ತರಿಗೆ ದಿನಕ್ಕೆ 300 ರೂಪಾಯಿ, ಎರಡು ಬಿರಿಯಾನಿ ಊಟ ಕೊಡುತ್ತಾರೆ. ಅಷ್ಟು ಮಾತ್ರ ಅಲ್ಲ. ಕ್ಷೇತ್ರದಲ್ಲಿ ಯಾವುದಾದರೂ ಏರಿಯಾದಲ್ಲಿ ನಿಮಗೆ 300 ಓಟು ಹಾಕಿಸೋ ತಾಕತ್ತು ಇದೆ ಅಂತಾದರೆ ನಿಮಗೆ ಒಂದು ಸ್ಕಾರ್ಪಿಯೋ ವಾಹನನೇ ಕೊಡ್ತಾರೆ. ಬರೀ ಪ್ರಚಾರ ಮಾಡೋದಕ್ಕೆ ಅಂದ್ಕೋಬೇಡಿ. ಪ್ರಚಾರ ಮಾಡ್ಬೇಕು. ಆ ಮೇಲೆ ಅದು ನಿಮಗೆ. ನಿಮ್ಮ ನಿಮಗೇನೇ ಅನುಮಾನಬೇಡ. ಬಿಜೆಪಿ ಅಭ್ಯರ್ಥಿ ಅವರು ಅನುಮಾನಪಡಲೇ ಬೇಡಿ.

ಆಮೇಲೆ ಈ ಹಿಂದಿನ ವಾರ ಪ್ರಕಟಿಸಿದ ಬಿಜೆಪಿ ಶಿಸ್ತಿನ ಕೆಲವು ಸ್ಯಾಂಪಲ್ ಹಾಗೇ ಬಾಕಿ ಉಳ್ಕೊಂಡಿದ್ದಾವೆ. ಬಿಜಾಪುರದ ಬಿಜೆಪಿಯಲ್ಲಿ ನಿಷ್ಠಾವಂತರ ಬಂಡಾಯದ ಸಮಾಚಾರ ಗೊತ್ತೇ ಇದೆ. ಅದರ ಮುಂದಿನ ಕಂತು ಏನಪ್ಪಾ ಅಂದರೆ ಬಿಜೆಪಿ ಜಿಲ್ಲಾ ಅಧ್ಯಕ್ಷರು ಪ್ರಚಾರದ ಸಂಬಂಧ ಓಡಾಡುವಾಗ ಈ ನಿಷ್ಠಾವಂತ ಕಾರ್ಯಕರ್ತರು ಅವರನ್ನು ಹಿಡಕೊಂಡು ಸಿಕ್ಕಾಪಟ್ಟೆ ತದುಕಿದರಂತೆ. ಚೆನ್ನಾಗಿ ಧರ್ಮದೇಟು ತಿಂದ ಬಿಜೆಪಿ ಅಧ್ಯಕ್ಷರು 'ರಾಮ' ಕೃಷ್ಣ ಅಂತ ವಿಶ್ರಾಂತಿ ತಗೋಂಡಿದ್ದಾರ ಅಥವಾ ಕೆಲಸ ಮುಂದುವರೆಸುತ್ತಿದ್ದರ ಬಗ್ಗೆ ವರದಿಯಾಗಿಲ್ಲ.

ಜಗದ ತುಂಬಾ ಮೇ ದಿನ - ಒಂದು ನುಡಿಚಿತ್ರ

ಜಗದ ತುಂಬಾ ಬಗೆ ಬಗೆಯ ಮೇ ದಿನ. ಆಳರಸರ ಅಟ್ಟಹಾಸ ಧಿಕ್ಕರಿಸುವ ಮೇ ದಿನ. ದಮನ ಚಕ್ರಕ್ಕೆ ಸೆಡ್ಡು ಹೊಡೆದ ಮೇ ದಿನ. ಹಲವು ನಿರ್ದಿಷ್ಟ ವಿಷಯಗಳ ಬಗ್ಗೆ ಪ್ರತಿಭಟನೆಯ ಮೇ ದಿನ. ಹಲವು ಜನತಾ ವಿಜಯಗಳ ಸಂತಸದ ಮೇ ದಿನ ಸಹ. 2008ರ ಬಗೆ ಬಗೆಯ ಮೇ ದಿನದ ಬಗೆಗೊಂದು ನುಡಿ ಚಿತ್ರ.



1



2



3

ಸಮಾಜವಾದ ಮೆಟ್ಟಿ ನಿಂತೆ ಎಂಬ ಮಾಜಿ ಸಮಾಜವಾದಿ ದೇಶಗಳಲ್ಲಿನ ಆಳರಸರ ಅಟ್ಟಹಾಸ ಧಿಕ್ಕರಿಸಿ, ಕಮುನಿಸ್ಟರ ನಾಯಕತ್ವದಲ್ಲಿ ಕಾರ್ಮಿಕರು ಭಾರೀ ಮೇ ದಿನದ ರ್‍ಯಾಲಿ ನಡೆಸಿದರು. ಯುವ ಜನರು ಕಾರ್ಮಿಕ ಚಳುವಳಿಯಲ್ಲಿ ಇಲ್ಲ ಎಂಬ ಸಾಮ್ರಾಜ್ಯಶಾಹಿ ಮಾಧ್ಯಮ ಪ್ರಚಾರಕ್ಕೆ - ರಶ್ಯದ ಮಾಸ್ಕೋದ (ಚಿತ್ರ 3)ಇಬ್ಬರು ಯುವತಿಯರು ಅಪಹಾಸ್ಯ ಮಾಡುತ್ತಿದ್ದಾರೆಯೆ ? ನಾಜೀ ಯುದ್ಧಯಂತ್ರದಲ್ಲಿ ನಲುಗಿದ ಅಜ್ಜಿ ಉಕ್ರೇನ್ (ಚಿತ್ರ 2) ನೆಲದಲ್ಲಿ ನಾಟೋ ಯುದ್ಧಯ್ರಂತ್ರಕ್ಕೆ ಎಂದೂ ಅವಕಾಶ ಇಲ್ಲ ಎಂದು ಸಾರುತ್ತಿದ್ದಾಳೆಯೆ ? ಯುಗೋಸ್ಲಾವಿಯಾದ ಸಮಾಜವಾದ, ಸುಂದರ ಜನಾಂಗೀಯ ಸಾಮರಸ್ಯ ಮಾತ್ರವಲ್ಲ ದೇಶವನ್ನೇ ಹೇಳ ಹೆಸರಿಲ್ಲದಂತೆ ಮಾಡಿರಬಹುದು; ಆದರೆ ಕೆಂಬಾವುಟ ಸರ್ಬಿಯಾದಲ್ಲಿ (ಚಿತ್ರ 1) ಮರೆಯಾಗುವುದಿಲ್ಲ ಎಂದು ಎಚ್ಚರಿಸುತ್ತಿದ್ದಾನೆಯೆ ?



4

ಕಾರ್ಮಿಕರು ಹೋರಾಟದಲ್ಲಿ ಗೆದ್ದಾಗ ಮೇ ದಿನ ವಿಜಯೋತ್ಸವ ಆಚರಿಸುವ ಸಂತಸದ ದಿನ ಸಹ. ವಿಜಯದ ಮೇಲೆ ವಿಜಯ ಸಾಧಿಸುತ್ತಿರುವ ಲ್ಯಾಟಿನ್ ಅಮೆರಿಕದ ಕಾರ್ಮಿಕ ವರ್ಗದ ಮಂಚೂಣಿಯಲ್ಲಿರುವ ಕ್ಯೂಬಾದ (ಚಿತ್ರ 4) ಕಾರ್ಮಿಕರಿಗೆ ಇದು ಸಂತಸದ ದಿನ ಅಲ್ಲವೇ ? ಕ್ಯಾಸ್ಟ್ರೋ ಸರ್ಕಾರದಿಂದ ಮರೆಯಾದರೆ ಕ್ಯೂಬಾವೂ ಇರುವುದಿಲ್ಲ. ಸಮಾಜವಾದವೂ ಇರುವುದಿಲ್ಲ. ಎಂದು ಮೂದಲಿಕೆ ಮಾಡುವವರಿಗೆ ಕ್ಯಾಸ್ಟ್ರೋ ಬಾಗವಹಿಸದ ಎರಡನೇ ಮೇ ದಿನ ಮಾಡಿ ಬುದ್ಧಿ ಕಲಿಸಿದ ಕ್ಯೂಬನ್ನರು ಸಂತಸ ಪಡಬೇಕು ತಾನೆ ?



6



5



7

ಹಲವು ದೇಶಗಳಲ್ಲಿ ಮೇ ದಿನದ ಮೇಲೆ ನಿಷೇಧ, ನಿರ್ಭಂಧ ಜಾರಿ ಮಾಡಲು ದಮನ ಚಕ್ರ. ಅದಕ್ಕೆ ಸೆಡ್ಡು ಹೊಡೆದು ನಿಲ್ಲುವ ಕಾರ್ಮಿಕರು. 1977 ರಿಂದ ಟರ್ಕಿಯ ಇಸ್ತಾನ್ ಬುಲ್ ಮುಖ್ಯ ಚೌಕದಲ್ಲಿ ಮೇ ದಿನದ ರ್‍ಯಾಲಿ ಮಾಡಲು ನಿಷೇಧ. ಅದನ್ನು ಧಿಕ್ಕರಿಸಿದ ಕಾರ್ಮಿಕರ ಮೇಲೆ ರಾಸಾಯನಿಕ ಯುದ್ಧ (ಚಿತ್ರ 5).



8

ತಮ್ಮ ಹಕ್ಕೊತ್ತಾಯಗಳು, ಆತಂಕಗಳ ಕಡೆಗೆ ಗಮನ ಸೆಳೆಯಲು ಮೇ ದಿನದ ರ್‍ಯಾಲಿ ಕಾರ್ಮಿಕರ ಆಯುಧ. 'ಭ್ರಷ್ಟ ರಾಜನ ಗುಲಾಮರು ನಾವು' ಎನ್ನುವ ಇಂಡೋನೇಶ್ಯಾದ ಜಕಾರ್ತಾದ (ಚಿತ್ರ 9) ಶ್ರಮಜೀವಿಗಳು. ವಿಶ್ವಸಂಸ್ಥೆ ತೈಲದ ಅಭಾವದಿಂದ ನಿಲ್ಲಿಸಿದೆ ಆಹಾರ ಪೂರೈಕೆ ಎಂದು ಆಕ್ರೋಶದಲ್ಲಿರುವ ಪ್ಯಾಲೆಸ್ಟೈನ್ನಿನ (ಚಿತ್ರ 10) ಗಾಜಾ ಪಟ್ಟಿಯ ಹಸಿದ ಜನ. 'ವಲಸೆ ಕಾರ್ಮಿಕರ ಮೇಲೆ ದಬ್ಬಾಳಿಕೆ ನಿಲ್ಲಿಸಿ' 'ಕಾರ್ಮಿಕರಿಗೆ ಜಗದ ಯಾವ ಮೂಲೆಯಲ್ಲೂ ದುಡಿಯುವ ಹಕ್ಕಿದೆ' ಎಂದು ಜಗವನ್ನೇ ಹೊತ್ತು ಸಾಗಿದ ಅಮೆರಿಕದ ಸಿಯಾಟಲ್ (ಚಿತ್ರ 7) ಕಾರ್ಮಿಕರು. ಇರಾಕ್ ಯುದ್ಧ ನಿಲ್ಲಿಸಬೇಕು ಎಂದು ಮೇ ದಿನದಂದು ಮುಷ್ಕರ ಹೂಡಿದ ಅಮೆರಿಕದ (ಚಿತ್ರ 8) ಬಂದರು ಕಾರ್ಮಿಕರು. 'ಅಮೆರಿಕನ್ ಸೈನ್ಯ ಇರಾಕ್ ಬಿಟ್ಟು ತೊಲಗಲಿ' ಎಂದು ಇರಾಕ್ ರಾಜಧಾನಿ ಬಾಗ್ದಾದ್ (ಚಿತ್ರ 11) ನಲ್ಲಿ ಅಮೆರಿಕನ್ ಸೈನ್ಯದ ಮೂಗಿನಡಿಯಲ್ಲೇ ಪ್ರತ್ರಿಭಟನೆ .



11



9



12



10

ರಾಜಸತ್ತೆ, ಅದನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಸಾಮ್ರಾಜ್ಯಶಾಹಿ ಮತ್ತು ಅದರ ಬಾಲಬಡುಕ ಆಳುವ ವರ್ಗಗಳ ಮಸಲತ್ತುಗಳನ್ನು ಸೋಲಿಸಿ ಪ್ರಜಾಸತ್ತೆಗೆ ಭಾರೀ ವಿಜಯ ತಂದ ನೇಪಾಳದ (ಚಿತ್ರ 12) ದುಡಿವ ಜನರಿಗೆ ಸಂತಸದ ದಿನ ಈ ಮೇ ದಿನ.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at: Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH